BUDGET ESTIMATES FOR 1962-63—VOTING OF DEMANDS FOR GRANTS.

DEMAND Nos.

21—32 Rural Development.

3—10 State Excise Duty.

7—14 Stamps.

6—13 Other Taxes Duties.

8—15 Registration.

(*Debate continued*).

Mr. SPEAKER.—Now, before we take up the Demands, I must bring it to the notice of the Members that if all the Demands are mixed up, it may create a little confusion. So, the Demands before the House immediately are—Demands No. 21, 3, 7, 6 and 8. Demands Nos. 20 and 22 have not been moved and they will be taken up after these Demands are voted upon.

Sri C. J. MUCKANNAPPA (Sira).—Sir, the Minister for Education made an inconsistent statement the other day.

Mr. SPEAKER.—I am not prepared to hear it now. If the Hon'ble Member is taking up any question which was said yesterday or what the Education Minister said which does not relate to these Demands, I am not going to take it up now. I do not want to put to guillotine any of the Demands. But, if circumstances compel me to do so I will have no option.

Sri C. J. MUCKANNAPPA.—I am discussing, Sir. I want to bring it to the notice of the Government through you. I entered your Chamber and brought it to your notice.

Mr. SPEAKER.—I will tell the Member that I may permit him tomorrow, not today. He may raise this matter tomorrow with my permission.

ಶ್ರೀ ಕೆ. ಎಚ್‌. ರಂಗನಾಥ್‌ (ಮೂಡಿಗೆರೆ).—ಸ್ವಾಮಿ ಈ ರೂರಲ್‌ಡೆವಲಪ್‌ಮೆಂಟ್‌ಗಾಗಿ 1962-63 ನೇಯ ಸಾಲಿಗೆ ಇಟ್ಟಿರತಕ್ಕಂಥ ರೂ. 1,59,63,000 ಖರ್ಚಿನ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬೇಕೆಂದು ಮನಸ್ಸು ಮಾಡಿನಿಂತಿದ್ದೇನೆ ಈ ಬಜೆಟ್ಟಿನಲ್ಲಿ 1962-63ನೇ ಸಾಲಿಗೆ ಇಟ್ಟಿರುವ 1,59,63,000 ರೂಪಾಯಿಗಳಲ್ಲಿ, ರೂರಲ್‌ ಡೆವಲಪ್‌ಮೆಂಟಿಗೆ ಕೇವಲ ರೂಪಾಯಿ 26,51,000 ಇಡಲಾಗಿದೆ, ಮತ್ತೆ ಸೋಷಿಯಲ್‌ ವೆಲ್‌ಫೇರ್‌ ಡಿಪಾರ್ಟ್‌ಮೆಂಟಿಗೆ ರೂಪಾಯಿ 1,26, 59,000 ಇಡಲಾಗಿದೆ. ನಾನು ರೂರಲ್‌ ಡೆವಲಪ್‌ಮೆಂಟ್‌ ಡಿಪಾರ್ಟ್‌ಮೆಂಟ್‌ ಬಗ್ಗೆ ಮಾತನಾಡುವುದಕ್ಕೆ ಮೊದಲು ಸೋಷಿಯಲ್‌ ವೆಲ್‌ಫೇರ್‌ ಡಿಪಾರ್ಟ್‌ಮೆಂಟ್‌ ಮೇಲೆ ಮಾತನಾಡಬೇಕೆಂದು ಇಚ್ಛೆ ಪಡುತ್ತೇನೆ. ಈಗ 1957-58 ನೇ ಸಾಲಿನಿಂದ 1961-62 ನೆ ಸಾಲಿನವರೆಗೆ, ಸೋಷಿಯಲ್‌ ವೆಲ್‌ಫೇರ್‌ ಡಿಪಾರ್ಟ್‌ಮೆಂಟಿಗೆ ಸುಮಾರು 4,87, 51,000 ರೂಪಾಯಿಗಳನ್ನೂ ನಾವು ಖರ್ಚು ಮಾಡಿದ್ದೇವೆ. ಇಷ್ಟು ಹಣವನ್ನು ಖರ್ಚು ಮಾಡಿರುವಾಗ ಅದರ ಪರಿಣಾಮವೇನಾಗಿದೆ. ಅದರಿಂದ ಹರಿಜನರಿಗೇನು ಅನುಕೂಲವಾಗಿದೆ, ಅವರ ಅಭಿವೃದ್ಧಿ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ನಾವು ಮತ್ತು ಸರ್ಕಾರದವರು ಹೆಚ್ಚು ತೀವ್ರವಾಗಿ ವಿಚಾರ ಮಾಡಬೇಕಾದಂಥ ಪರಿಸ್ಥಿತಿ ಈಗ ಬಂದಿದೆ. ಏತಕ್ಕೆಂದರೆ ಇಷ್ಟು ಹಣವನ್ನೂ ಬಡ ರೈತ ಕೊಟ್ಟ ಟ್ಯಾಕ್ಸಿನಿಂದ ಒದಗಿಸಿದ್ದೇವೆ: ಹಾಗೆ ಒದಗಿಸಿದ ಹಣದಿಂದ ಹರಿಜನರು ಮುಂದುವರಿಯಬೇಕೆಂಬ ಸದುದ್ದೇಶ ನೇರವೇರಿದೆಯೇ ಎಂದು ಯೋಚನೆಮಾಡಬೇಕು. ಇದರಲ್ಲಿ ಎಷ್ಟು ಹಣ ಅವರ ಅಭ್ಯುದಯಕ್ಕೆ ಖರ್ಚಾಗಿದೆ. ಈ ಐದು ವರ್ಷಗಳಲ್ಲಿ ರೂಪಾಯಿ 1,24,00,000 ಹರಿಜನರ ಮನೆಗಳಿಗೆ ಖರ್ಚುಮಾಡಿದ್ದೇವೆ. ಇಷ್ಟು ಹಣದಲ್ಲಿ ಹರಿಜನರಿಗೆ ಯಾವ ರೀತಿ ಅನುಕೂಲವಾಗಿದೆ ಅನ್ನುವ ವಿಚಾರವನ್ನು ಸರ್ಕಾರದವರು ನೋಡಬೇಕಾಗಿದೆ. ಹೋದ ವರ್ಷದವರೆಗೂ ಮನೆಗಳ ಕಟ್ಟುವ ವ್ಯವಸ್ಥೆಯಲ್ಲಿ ಒಂದು ಸ್ಕೀಮ್‌ ಇತ್ತು. ಅದರ ಪ್ರಕಾರ ಪ್ರತಿ ಮನೆಗೂ ನಾಲ್ಕುನೂರು ರೂಪಾಯಿ ಗ್ರಾಂಟು ಕೊಡಬೇಕೆಂದು ನಿಯಮವನ್ನು ಸರ್ಕಾರದವರು ಇಟ್ಟಿದ್ದರು. ಆದರೆ ನನ್ನ ಅನುಭವದ ಪ್ರಕಾರ ಈ ಸ್ಕೀಮಿನ ಉದ್ದೇಶ ಸರಿಯಾಗಿ ನೆರವೇರಿಲ್ಲ ಎಂದು ಒತ್ತಿ ಹೇಳಬೇಕಾಗಿದೆ. ಈ ಹಣದಲ್ಲಿ ಒಬ್ಬೊಬ್ಬ ಬಡ ಹರಿಜನನಿಗೂ 100-150 ರೂಪಾಯಿ ತಲುಪಿರಬಹುದು, ಎಂದು ಹೇಳಿದಾರೆ ಈ ಮಾತಿನಲ್ಲಿ ಏನೂ ಅತಿಶಯೋಕ್ತಿ ಇಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ. ಈ ದಿವಸ ಸೋಷಿಯಲ್‌ ವೆಲ್‌ಫೇರ್‌ ಡಿಪಾರ್ಟ್‌ಮೆಂಟಿನಲ್ಲಿ ಒಂದು 'ಕೇಡರ್‌' ತಯಾರು ಆಗಿದೆ. ಪುಡಾರಿಗಳ ತಂಡವೇ ಹುಟ್ಟಿದೆ. ಹರಿಜನರಲ್ಲಿ ಈ ಒಂದು ವರ್ಗವನ್ನೇ ಸರ್ಕಾರದವರು ನಿರ್ಮಾಣ ಮಾಡಿದಾರೆಂದರೂ ತಪ್ಪಾಗಲಾರದು.

ಏಕೆಂದರೆ ನಾನು ಈ ಊರಿನಲ್ಲಿ ಪ್ರಾಕ್ಟೀಸ್‌ ಮಾಡುತ್ತಿದ್ದೇನೆ. ನಾನು ಹರಿಜನವರ್ಗಕ್ಕೆ ಸೇರಿದವನು ನಾನು ಇದನ್ನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಪ್ರತಿದಿವಸವೂ ಈ ವಿಧಾನ ಸೌಧದಲ್ಲಿ ಈ ಒಂದು ತಂಡ ಇರುತ್ತದೆ. ಒಬ್ಬ ಬಡ ಹರಿಜನ ರೈತ ಸರ್ಕಾರದವರು ಮನೆ ಕಟ್ಟಲಿಕ್ಕಾಗಿ 400 ರೂಪಾಯಿಗಳನ್ನು ಕೊಡುತ್ತಾರೆಂಬ ಭಾವನೆಯಿಟ್ಟುಕೊಂಡು ಬಹಳ ಉತ್ಸಾಹದಿಂದ ಮೊದಲು ತಾಲ್ಲೂಕ್‌ ಆಫೀಸಿಗೆ ಬರುತ್ತಾನೆ. ಇಂತಹವನನ್ನು ಯಾವುದೋ ಒಂದು ಬಡ ಪ್ರಾಣಿ ಬರುತ್ತದೆ ಎಂದು ಇಲ್ಲಿ ಒಬ್ಬ ಪುಡಾರಿ ಕಾದು ಕುಳಿತಿದ್ದು ಅವನನ್ನು ಹಿಡಿಯುತ್ತಾನೆ. ಮೊದಲು ಅವನು ಅರ್ಜಿ ಬರೆಯುವುದಕ್ಕೆ ದುಡ್ಡು ಕೊಡಬೇಕು, ತಾಲ್ಲೂಕ್‌ ಆಫೀಸಿನಿಂದ ಡಿಸ್ಟ್ರಿಕ್ಟ್‌ ವೆಲ್‌ಫೇರ್‌ ಆಫೀಸಿಗೆ ಆ ಕಾಗದ ಜಾಗ್ರತೆ ಓಡಾಡಲಿಕ್ಕೆ ದುಡ್ಡು ಕೊಡಬೇಕು. ಡಿಸ್ಟ್ರಿಕ್ಟ್‌ ಸೋಷಿಯಲ್‌ ವೆಲ್‌ಫೇರ್‌ ಆಫೀಸರ್‌ಗೆ ಒಂದು ಭಾಗ ಮತ್ತು ತಾಲ್ಲೂಕ್‌ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಒಂದು ಭಾಗ-ಹೀ

ಗಾಗಿ ಆ ಹರಿಜನ ಬಡರೈತನಿಗೆ ಆ 400 ರೂಪಾಯಿಗಳಲ್ಲಿ ಕೊನೆಯಲ್ಲಿ ಕೇವಲ 100-150 ರೂಪಾಯಿಗಳು ಸಿಕ್ಕಿದರೆ ಹೆಚ್ಚು. ಇದು ಬಹಳ ವಿಷಾದಕರವಾದ ಪರಿಸ್ಥಿತಿ. ಅಂತಹ ಪರಿಸ್ಥಿತಿಯನ್ನು ಸೋಷಿಯಲ್ ವೆಲ್ ಫೇರ್ ಡಿಪಾರ್ಟ್‌ಮೆಂಟಿನವರು ಹೆಚ್ಚು ತೀವ್ರಗತಿಯಿಂದ ನೋಡುವುದು ಅವಶ್ಯಕವಿದೆ. ಒಂದು ವೇಳೆ ನನ್ನ ಈ ಮಾತಿನಲ್ಲಿ ಸತ್ಯಾಂಶವಿಲ್ಲದಿದ್ದ ಪಕ್ಷದಲ್ಲಿ ಆಂಟಿ ಕರಪ್ಷನ್ ಇಲಾಖೆಯವರು ಒಂದು ಸಾರಿ ಇಂತಹ ಸನ್ನಿವೇಶ ಮುಂದೆ ಬಂದಾಗ್ಗೆ ನೋಡಿಕೊಂಡಿದ್ದು ಬೇರೆಯವರನ್ನು ಅಲ್ಲಲ್ಲಿ ಹಿಡಿಯುವುದಕ್ಕೆ ಬದಲು ಇಂತಹ ಆಫೀಸುಗಳಲ್ಲಿ ಬೇಕಾದಷ್ಟು ಪುಢಾರಿಗಳನ್ನು ಹಿಡಿಯಬಹುದು. ಆಗ ಸರ್ಕಾರಕ್ಕೆ ಈ ಆಫೀಸುಗಳಲ್ಲಿ ಎಷ್ಟರ ಮಟ್ಟಿಗೆ ಅನ್ಯಾಯಗಳು ನಡೆಯುತ್ತಿವೆ ಎಂಬುದು ಚೆನ್ನಾಗಿ ಮನವರಿಕೆಯಾಗುತ್ತದೆ. ಯಾವುದೋ ಒಂದು ಸ್ಕೀಮನ್ನು ಈ ಬಗ್ಗೆ ಹೋದ ಸಾರಿ ತೆಗೆದಿದ್ದರು ಎಂಬುದಾಗಿ ನನ್ನ ಭಾವನೆ. ಮತ್ತೇ ಈಗ ಇನ್ನೊಂದು ಸ್ಕೀಮನ್ನು ತೆಗೆಯುವ ಅಭಿಪ್ರಾಯ ಸರ್ಕಾರಕ್ಕೆ ಇದೆ ಎಂಬ ಮಾತನ್ನೂ ಸಹ ನಾನು ಕೇಳಿದ್ದೇನೆ. ಆದರೆ ಅದು ಅಷ್ಟಾಗಿ ಉತ್ತಮ ವ್ಯವಸ್ಥೆ ಅಲ್ಲವೆಂದು ನನ್ನ ಅಭಿಪ್ರಾಯ. ಏನೋ ಒಂದು ರೀತಿಯಲ್ಲಿ ಸೊಸೈಟಿಗಳನ್ನು ಮಾಡತಕ್ಕದ್ದು ಅಷ್ಟೇನೂ ಉಪಯುಕ್ತವಾಗಿಲ್ಲ, ಸಾಧಾರಣವಾಗಿ 400 ರೂಪಾಯಿಗಳಲ್ಲಿ ಯಾವ ಹರಿಜನ ಬಡರೈತನೂ ಸಹ ಮನೆ ಕಟ್ಟುವುದಕ್ಕೆ ಸಾಧ್ಯವಿಲ್ಲ. ಕೇವಲ ಒಂದು ಕೊಠಡಿ ಕಟ್ಟುವುದಕ್ಕಾಗುವುದಿಲ್ಲ ಆದ್ದರಿಂದ ಸರ್ಕಾರದಿಂದ ಸಾಲ ತೆಗೆದುಕೊಂಡು ಉತ್ತಮ ಮನೆಗಳನ್ನು ಕಟ್ಟಿಸುವುದು ಒಳ್ಳೆಯದು. ಅದಕ್ಕಾಗಿ ಹರಿಜನ ಬಡರೈತರಿಗೆ ಸಾಲದ ರೂಪದಲ್ಲಿ ಹಣವನ್ನು ಮನೆಗಳನ್ನು ಕಟ್ಟಿಸುವುದಕ್ಕಾಗಿ ಸರ್ಕಾರದವರು ಅತಿ ಜಾಗ್ರತೆಯಾಗಿ ಕೊಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

Sri S. SIVAPPA (Shravanabelagola)—On a point of order, Sir. Are the Members in order to disturb the Minister by consulting them and making unusual interference in the work of the House? The Ministers are converting this House into their offices and Chambers. They are attending to the work which they should have done in their chambers. Again and again I have to repeat this.

Mr. SPEAKER.—I have to inform all the Members that if they want to have quiet conversation or group discussions the best thing is to go to the lounge and thereby not to disturb the House.

ಶ್ರೀ ಕೆ. ಎಚ್. ರಂಗನಾಥ್.—ಆ ಒಂದು ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕಿಂತ ಮೊದಲು ಒಂದು ವಿಚಾರವನ್ನು ಸರ್ಕಾರದವರು ಗಮನದಲ್ಲಿಡಬೇಕು. ಈಗಾಗಲೇ ಮನೆ ಕಟ್ಟುವುದಕ್ಕಾಗಿ ಸರ್ಕಾರದವರು ಒಂದು ಕೋಟಿ ಇಪ್ಪತ್ತ ನಾಲ್ಕು ಲಕ್ಷರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಎಲ್ಲೆಲ್ಲಿ ಖರ್ಚು ಮಾಡಿದ್ದಾರೋ ಅಲ್ಲಲ್ಲಿ ಮನೆಗಳಿವೆಯೇ, ಆ ರೀತಿ ಮನೆಗಳಿದ್ದರೆ ಎಂತಹ ಮನೆಗಳನ್ನು ಕಟ್ಟಿದ್ದಾರೆ, ಅವು ಊರಿನೊಳಗೋ ಅಥವಾ ಊರಿನ ಹೊರಗೋ, ಅವು ಕಟ್ಟಿರುವ ಪ್ರದೇಶ ಆರೋಗ್ಯಕರವಾದದ್ದೋ ಅಥವಾ ಅನಾರೋಗ್ಯಕರವಾದದ್ದೋ ಎಂಬ ಈ ಅಂಶಗಳನ್ನೆಲ್ಲಾ ಸರ್ಕಾರದವರು ದೀರ್ಘವಾಗಿ ಪರಿಶೀಲನೆ ಮಾಡಬೇಕು ಎಂಬುದಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಸಾಧಾರಣವಾಗಿ ಸ್ವಲ್ಪ ಹಣವಲ್ಲ, ಖರ್ಚುಮಾಡಿರುವುದು ಬಹಳ ಜಾಸ್ತಿ. ಹರಿಜನ ಬಡರೈತರಿಗೆ ಇದರಿಂದ ಉಪಯೋಗವಾಗಬೇಕು. ಇಲ್ಲವೇ ಸರ್ಕಾರಕ್ಕೆ ಉಪಯೋಗವಾಗಬೇಕು. ಅವೆರಡೂ ಇಲ್ಲದೆ ಕೇವಲ ಮಧ್ಯವರ್ತಿ ಜನ, ಪುಢಾರಿ ಜನರು ಏನು ಇದ್ದಾರೆ ಅಂತಹವರಿಗೆ ಉಪಯೋಗವಾಗುವ ಪರಿಸ್ಥಿತಿ ಇದ್ದರೆ ಸರ್ಕಾರ ಅಂಥಾದ್ದನ್ನು ಕೂಡಲೇ ತಡೆಗಟ್ಟಬೇಕು. ಆ ರೀತಿ ಮಾಡದೇ ಹೋದರೆ ಬಹಳ ಕೆಟ್ಟ ಪರಿಣಾಮ ಉಂಟಾಗುತ್ತದೆಂದು ನಾನು ಒತ್ತಿ ಹೇಳುತ್ತಿದ್ದೇನೆ.

ಇನ್ನು ಸಾಧಾರಣವಾಗಿ ಈ ಹರಿಜನ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದವರು ಹರಿಜನ ಬಡರೈತರಿಗೆ ಎತ್ತುಗಳನ್ನು ಕೊಡುವುದು, ವ್ಯವಸಾಯದ ಉಪಕರಣಗಳನ್ನು ಒದಗಿಸುವುದು, ವ್ಯವಸಾಯದ ಕಾಲೋನಿಗಳನ್ನು ಕಟ್ಟಿಸಿಕೊಡುವುದು—ಹೀಗೆ ಕೆಲವಾರು ವ್ಯವಸ್ಥೆಗಳು ಇವೆ. ಆದರೆ ಯಾರಿಗೂ ಈ ಸೌಕರ್ಯಗಳು ತಲಪಿಲ್ಲ. ಒಂದು ವೇಳೆ ಹಾಗೂ ಅವನಿಗೆ ತಲುಪಿದ್ದರೆ ಕೇವಲ ಯಾವುದಾದರೂ ಒಂದು ಸಾಮಾನು ಹೋಗಿ ತಲುಪಿರಬಹುದು ಅಷ್ಟೆ. ಉಳಿದದ್ದೆಲ್ಲಾ ವೃಥಾ ಅನ್ಯಾಯವಾಗಿ ಮಧ್ಯವರ್ತಿ ಜನಗಳ, ಪುಢಾರಿಗಳ ಕೈಸೇರುತ್ತದೆ. ಸರ್ಕಾರದ ದುಡ್ಡನ್ನು ಈ ರೀತಿ ಅನ್ಯಾಯವಾಗಿ ಪೋಲು ಮಾಡುವುದು ಖಂಡಿತವಾಗಿ ಸರಿಯಾದುದಲ್ಲ. ಇನ್ನು ಡಿಸ್ಟ್ರಿಕ್ಟ್ ವೆಲ್‌ಫೇರ್ ಆಫೀಸರುಗಳನ್ನು ಇತ್ತೀಚೆಗೆ ನೇಮಿಸಿದ್ದಾರೆ. ಅವರಲ್ಲಿ ಶೇಕಡ 90ರಷ್ಟು ಜನ ನ್ಯಾಯವಾಗಿ ಸೇವೆ ಮಾಡಬೇಕೆಂಬ ಉದ್ದೇಶದಿಂದ ಯಾರೂ ಕೆಲಸ ಮಾಡುತ್ತಿಲ್ಲ. ಇವರು ನಿಜವಾಗಿ ಸರ್ಕಾರದ ಮತ್ತು ದೇಶದ ಜನತೆಯ ಹಿತದೃಷ್ಟಿಯಿಂದ ಮತ್ತು ಹರಿಜನರ ಹಿತರಕ್ಷಣೆಗಾಗಿ ಸದುದ್ದೇಶದಿಂದ ಕೆಲಸ ಮಾಡುತ್ತಿಲ್ಲವೆಂದು ನಾನು ಹೇಳಿದರೆ ಖಂಡಿತವಾಗಿ ತಪ್ಪಾಗಲಾರದು. They are the worst Exploiters. ನಾನು ಹರಿಜನನಾದಾಗ್ಯೂ ಇನ್ನೂ ಕೆಲವು ವಿಚಾರಗಳನ್ನು ಈ ಸಭೆಯ ಮುಂದಿಡಲು ಹಿಂದು ಮುಂದು ನೋಡುವುದಿಲ್ಲ. ಏಕೆಂದರೆ ಯಾವಾಗಲೂ ಪರಿಣಾಮ ಒಳ್ಳೆಯದಾಗಬೇಕು. ಈಗ ಕೆಲವು ಅಧಿಕಾರಿಗಳು ಆಡಳಿತವನ್ನು ನಡೆಸುತ್ತಿರುವ ಕ್ರಮ ಸರಿಯಾಗಿಲ್ಲ. ಈಗ ರೆವಿನ್ಯೂ ಇನ್‌ಸ್ಪೆಕ್ಟರ್ಸ್ ಎಂದು ನೇಮಕ ಮಾಡಿದ್ದೀರಿ. ಅವನಿಗೆ ಪ್ಲಾನ್ ಸ್ಕೀಂ ಏನೊಂದೂ ಗೊತ್ತಿಲ್ಲ. ಏನೋ ಒಂದು ಕೆಲಸ ಅವನಿಗೆ ಕೊಟ್ಟಿದ್ದೀರಿ. ದಿನವಹಿ ಡೈರಿ ಬರೆಯುತ್ತಾನೆ. ಅದನ್ನು ತನ್ನ ಮೇಲ್ಪಟ್ಟ ಆಫೀಸರಿಗೆ ಕೊಡುತ್ತಾನೆ; ಅಷ್ಟೇ ಅವನ ಕೆಲಸ ವಿನಾ ಇನ್ನೇನೂ ಮಾಡುತ್ತಿಲ್ಲ. ಸಾಧಾರಣವಾಗಿ ಒಂದು ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮಾಡುವಾಗ, ಮನೆಕಟ್ಟುವಾಗ ಆ ಮನೆಯ ಬಿಲ್ಡಿಂಗ್ ಪ್ಲಾನ್, ಎಸ್ಟಿಮೇಟು ಹೇಗಿರಬೇಕು, ಎಷ್ಟಿರಬೇಕು ಎಂಬ ವಿಷಯ ಅವನಿಗೆ ಗೊತ್ತೇ ಇರುವುದಿಲ್ಲ. ಎಲ್ಲೋ ಅಲ್ಲಿರತಕ್ಕ ಯಾವುದೋ ಒಂದು ಜಾಗವನ್ನು ತೋರಿಸಿಬಿಡುತ್ತಾನೆ. ಕೊನೆಯಲ್ಲಿ ಅದನ್ನೂ ಕೂಡ ಅಕ್ವೈರ್ ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ಹಿರಿಯೂರ್ ತಾಲ್ಲೂಕಿನಲ್ಲಿ ಚಿಲ್ಲಹಳ್ಳಿ ಎಂಬ ಒಂದು ಗ್ರಾಮ. ಆ ಗ್ರಾಮದಲ್ಲಿ ಸ್ವಲ್ಪ ಜಾಗವನ್ನು 1954ನೇ ಇಸವಿಯಲ್ಲಿ ಹರಿಜನರು ಮನೆಗಳನ್ನು ಕಟ್ಟುವುದಕ್ಕೆ ಅಕ್ವೈರ್ ಮಾಡಿದ್ದರು. ಆ ರೀತಿ

(ಶ್ರೀ ಕೆ. ಎಚ್. ರಂಗನಾಥ್)

ಅವರು ಅಕ್ವೈರ್ ಮಾಡಿದ್ದರೂ ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಎಮರ್ಜೆನ್ಸಿ ಸೆಕ್ಷನ್ ಉಪಯೋಗ ಮಾಡಿ ಸರ್ಕಾರದವರು ಆ ಜಾಗವನ್ನು ಅಕ್ವೈರು ಮಾಡಿದರು. Government has to take possession of the land immediately ಎಂದು ಆರ್ಡರ್ ಸಹ ಆಯಿತು ಈ ವಿಷಯವನ್ನು ನಾನು ಬಹಳ ವಿಷಾದದಿಂದ ಈ ಸಭೆಯಲ್ಲಿ ಹೇಳುತ್ತಿದ್ದೇನೆ. 1954ನೇ ಇಸವಿಯಲ್ಲಿ ಅಕ್ವೈರ್ ಮಾಡಿದ್ದಂತಹ ಜಾಗವನ್ನು 1962ನೇ ಇಸವಿಯಾದರೂ ಸುಮಾರು ಎಂಟು ವರ್ಷಗಳು ಕಳೆದರೂ ಸರ್ಕಾರದವರು ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇದರಲ್ಲಿ ಹರಿಜನರು ಮನೆಗಳನ್ನು ಕಟ್ಟಲೂ ಇಲ್ಲ. ಇದಕ್ಕೆ ಮುಖ್ಯಕಾರಣ ಕೇವಲ ಒಬ್ಬ ಕಾಂಗ್ರೆಸ್ ಮೆಂಬರ್ ಎಂದು ನಾನು ಈ ಸಂದರ್ಭದಲ್ಲಿ ಹೇಳುವ ವಿಧಿ ಇಲ್ಲ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರಲ್ಲಿ ಈ ಅಕ್ವಿಸಿಷನ್ ಕೇಸ್ ಇದುವರೆಗೂ ಪೆಂಡಿಂಗ್ ಇದೆ. ಆಗ 1958ನೇ ಇಸವಿಯಲ್ಲಿ ಗ್ರಾಮಸ್ಥರು ಎಲ್ಲರೂ ಸೇರಿ ಈ ಬಗ್ಗೆ ಒಂದು ಕೇಸನ್ನು ಕೋರ್ಟಿಗೆ ಹಾಕಿದರು. Not even a hearnig date is given ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನಲ್ಲಿರುವ ಎಮರ್ಜೆನ್ಸಿ ಸೆಕ್ಷನ್ನನ್ನು ಉಪಯೋಗ ಮಾಡಿದಂತಹ ಸರ್ಕಾರ ಇನ್ನೂ ಆ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಿಲ್ಲವೆಂದು ಹೇಳಿದರೆ ನನಗೆ ಬಹಳ ವಿಷಾದವಾಗುತ್ತದೆ. ಈ ಮಧ್ಯೆ ಒಂದು ಸಾರಿ ಹರಿಜನ ಬಡರೈತರಿಗೂ ಮತ್ತು ಜಮೀನ್‌ದಾರರಿಗೂ ಈ ಜಮೀನಿನಲ್ಲಿ ಮನೆಕಟ್ಟಲು ಸ್ವಾಧೀನ ತೆಗೆದುಕೊಳ್ಳುವ ವಿಷಯದಲ್ಲಿ ಮಾತು ನಡೆದು ನಡೆದು ಈಗ ಅದು ಒಂದು ಕ್ರಿಮಿನಲ್ ಕೇಸಾಗಿ ಪರಿಣಮಿಸಿರುವ ಕಾರಣ ಹಿರಿಯೂರ್ ತಾಲ್ಲೂಕ್‌ನಲ್ಲಿರುವ ಚಿಲ್ಲಹಳ್ಳಿಯಿಂದ 40 ಮೈಲಿಗಳ ದೂರದಲ್ಲಿರುವ ಚಿತ್ರದುರ್ಗದ ಕ್ರಿಮಿನಲ್ ಕೋರ್ಟಿಗೆ ಓಡಾಡುವ ಪರಿಸ್ಥಿತಿ ಈಗ ಬಂದೊದಗಿದೆ. ಆದ್ದರಿಂದ ಸರ್ಕಾರದವರು ಹರಿಜನರಿಗೆ ಕಾಲೋನಿಯನ್ನು ಕಟ್ಟುವ ಸಂದರ್ಭದಲ್ಲಿ ಹೆಲ್ತ್ ಡಿಪಾರ್ಟ್‌ಮೆಂಟ್, ಮತ್ತು ಪಿ. ಡಬ್ಲ್ಯು. ಡಿ. ಅವರನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಜನರನ್ನೆಲ್ಲಾ ಕರೆಸಿಕೊಂಡು ಈಗ ನಿರ್ಧಾರಮಾಡಿರತಕ್ಕ ಜಾಗ ಅನುಕೂಲವೇ ಅಥವಾ ಅನನುಕೂಲವೇ, ಯೋಗ್ಯವೇ ಎಂಬುದನ್ನು ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ಒಂದು ರೀತಿಯಲ್ಲಿ ತೀರ್ಮಾನ ತೆಗೆದುಕೊಂಡು ಈ ಕಾರ್ಯಕ್ರಮವನ್ನು ಹಾಕಿಕೊಂಡರೆ ಮಾತ್ರವೇ ಅಲ್ಲಿ ಉತ್ತಮ ಪರಿಸ್ಥಿತಿ ಉಂಟಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಚಾರ. ಹರಿಜನ ಕಾಲೊನಿಗಳನ್ನು ಕಟ್ಟುವ ರೀತಿ ನೀತಿ ಯಾವ ರೀತಿ ಇದೆಯೆಂದರೆ ಇತ್ತೀಚೆಗೆ ಸರ್ಕಾರದವರು ಊರ ಹೊರಗೆ ಅವರ ಕಾಲೋನಿಗಳನ್ನು ಕಟ್ಟುತ್ತಿದ್ದಾರೆ. ನಾವು ಈಗ 1962ನೇ ಇಸವಿಯಲ್ಲಿದ್ದೇವೆ. ಸ್ವಾತಂತ್ರ್ಯ ಬಂದ ನಂತರ ಸುಮಾರು ಹದಿನೈದು ವರ್ಷಗಳು ಗತಿಸಿವೆ. ನಾನೂ ಸಹ ಕಾಂಗ್ರೆಸ್ಸಿನಲ್ಲಿದ್ದವನು ಇವತ್ತಿನ ದಿವಸ ಹರಿಜನ ಕಾಲೋನಿಗಳನ್ನು ಊರ ಹೊರಗೆ ಕಟ್ಟುತ್ತಿರುವುದನ್ನು ನೋಡಿ ನನಗೆ ಬಹಳ ವಿಷಾದವಾಗಿದೆ. ಅದರ ಬದಲು ಸವರ್ಣೀಯರು ಇರುವ ಕೇರಿಗಳಲ್ಲಿ ಸ್ಥಳವನ್ನು ನೋಡಬೇಕು. ಎಲ್ಲೂ ಒಳ್ಳೆಯ ಜಾಗ ಸಿಗದಿದ್ದರೆ ಸವರ್ಣೀಯರಿಗೂ, ಹರಿಜನರಿಗೂ ಒಟ್ಟಾಗಿ ಇರಲು ಜಾಗವನ್ನು ನೋಡಿ ಅಲ್ಲಿಯೇ ಹರಿಜನರೂ ಸಹ ಸೇರುವ ವ್ಯವಸ್ಥೆ ಮಾಡತಕ್ಕಂಥ ಯೋಚನೆಯನ್ನು ಸರ್ಕಾರದವರು ಮಾಡುವುದು ಸೂಕ್ತವೆಂದು ತಮಗೆ ಒಂದು ಸಲಹೆ ಕೊಡಬಯಸುತ್ತೇನೆ. ನೀವು ಅವರಿಗೆ ಹೆಚ್ಚು ಹೆಚ್ಚಾಗಿ ವಿದ್ಯೆ ಕೊಡಬಹುದು. ಆದರೆ ಅವರ ಸಂಸ್ಕೃತಿ ಮಟ್ಟ ಹೆಚ್ಚದೇ ಹೋದರೆ ಅಂತಹ ವಿದ್ಯೆಯಿಂದ ಏನೂ ಪ್ರಯೋಜನವಾಗುವುದಿಲ್ಲ. ಕೇವಲ ವಿದ್ಯೆಯಿಂದಲೇ ವ್ಯಕ್ತಿಯು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಅವನು ಮೊದಲು ಸುಸಂಸ್ಕೃತನಾಗಬೇಕು. ಅಂತಹ ವಿದ್ಯೆಯನ್ನು ಅವರಿಗೆ ಕಲಿಸುವುದು ಸರ್ಕಾರದ ಕರ್ತವ್ಯ.

ಇನ್ನು ಹರಿಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಗಾಗಿ ಸುಮಾರು 19 ಲಕ್ಷ ರೂಪಾಯಿಗಳನ್ನು ನೀವು ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ಆ ಹಣ ಸಾಮಾನ್ಯವಾಗಿ ಹರಿಜನ ವಿದ್ಯಾರ್ಥಿಗಳಿಗೆ ಡಿಸೆಂಬರ್ ಜನವರಿ ಹೊತ್ತಿಗೆ ಬರುತ್ತದೆ. ಕೆಲವು ಕಡೆಗಳಲ್ಲಿ ಮಾರ್ಚ್‌ನಲ್ಲಿ ಅದನ್ನು ವಿದ್ಯಾರ್ಥಿಗಳಿಗೆ ಕೊಡುತ್ತಾರೆ ಇದರಿಂದ ತಾವು ಯಾವ ಒಂದು ಸದುದ್ದೇಶಕ್ಕಾಗಿ ಅದನ್ನು ಕೊಡುತ್ತೀರೋ ಆ ಒಂದು ಉದ್ದೇಶಕ್ಕಾಗಿ ಅದು ಉಪಯೋಗವಾಗುವುದಿಲ್ಲ. ಇತ್ತೀಚೆಗೆ ಹರಿಜನ ವಿದ್ಯಾರ್ಥಿಗಳ ಪೈಕಿ ಬಹಳಜನ ಬಡವರು ಇದ್ದಾರೆ. ಅಂತಹವರು ಸುಮಾರು ಐದಾರು ತಿಂಗಳುಗಳಿಂದಲೂ ಹಾಸ್ಟಲುಗಳಲ್ಲಿ ದುಡ್ಡು ಕೊಟ್ಟು ಇರುವಂತಹ ಶಕ್ತಿಯನ್ನು ಪಡೆದುಬಂದಿರುವುದಿಲ್ಲ. ಅವರು ತುಂಬಾ ಕಡು ಬಡವರಾಗಿ ಜೀವಿಸುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಅವರಿಗೆ ಕೊನೆಯಪಕ್ಷ ಸ್ಕಾಲರ್‌ಷಿಪ್ ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಾದರೂ ತಲುಪುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಒಂದು ವೇಳೆ ಕಾರಣಾಂತರಗಳಿಂದ ಅದು ಆ ಹೊತ್ತಿಗೆ ವಿದ್ಯಾರ್ಥಿಗಳ ಕೈಸೇರದೆ ಇದ್ದರೆ, ಆ ಸ್ಕಾಲರ್‌ಷಿಪ್ ಹಣದಲ್ಲಿ ಅರ್ಧ ಭಾಗವೋ ಅಥವಾ ಕಾಲು ಭಾಗವೋ ಮುಂಚೆಯೇ ಮಂಜೂರುಮಾಡಿಕೊಟ್ಟು ಮಿಕ್ಕಿದನ್ನು ಮುಂದೆ ಕೊಡುವ ವ್ಯವಸ್ಥೆ ಮಾಡುವುದರಿಂದ ಆ ಬಡ ಹರಿಜನ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆಂದು ನಾನು ತಮ್ಮ ಮೂಲಕ ಸರ್ಕಾರದವರಿಗೆ ಹೇಳಬಯಸುತ್ತೇನೆ.

ಹಾಸ್ಟಲುಗಳ ಬಗ್ಗೆ ಹೆಚ್ಚು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಷೆಡ್ಯೂಲ್ ಕ್ಯಾಸ್ಟಿನವರಿಗೆ ಸ್ಕೂಲು ಮತ್ತು ಹಾಸ್ಟಲುಗಳಿಗೋಸ್ಕರವಾಗಿ 23 ಲಕ್ಷ 94 ಸಾವಿರ ರೂಪಾಯಿಗಳನ್ನೂ ಷೆಡ್ಯೂಲ್ ಟ್ರೈಬಿನವರಿಗೆ ಸ್ಕೂಲು ಮತ್ತು ಹಾಸ್ಟಲುಗಳಿಗಾಗಿ ಎರಡು ಲಕ್ಷ 99 ಸಾವಿರ ರೂಪಾಯಿಗಳನ್ನೂ ಈ ವರ್ಷ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಈ ಹರಿಜನ ಹಾಸ್ಟಲುಗಳ ಬಗ್ಗೆ ಬಹಳ ವಿಷಾದದಿಂದ ಹೇಳಬೇಕಾಗಿದೆ. ಹರಿಜನ ಎನ್ನುವವರಲ್ಲಿ ನಾನಾ ಕೋಮುಗಳಿವೆ. ಇದರಲ್ಲಿ ಪ್ರತಿಯೊಂದು ಕೋಮಿನವರಿಗೂ ಒಂದೊಂದು ಹಾಸ್ಟಲುಗಳನ್ನು ಕಟ್ಟುತ್ತಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ ಚಿತ್ರದುರ್ಗದಲ್ಲಿ ಲಂಬಾಣಿಯವರಿಗೆ ಹುಡುಗರಿಗೇ ಒಂದು ಹಾಸ್ಟಲಿದೆ, ಹುಡುಗಿಯರಿಗೇ ಒಂದು ಹಾಸ್ಟಲಿದೆ. ಆ ಮೇಲೆ ಹರಿಜನರಲ್ಲಿ ಎಡಗೈನವರಿಗೆ ಹುಡುಗರಿಗೆ ಒಂದು ಹಾಸ್ಟಲಿದೆ, ಹುಡುಗಿಯರಿಗೆ ಒಂದು ಬೇರೆ ಹಾಸ್ಟಲಿದೆ. ಬಲಗೈನವರಿಗೆ ಹುಡುಗರಿಗೆ ಒಂದು ಹಾಸ್ಟಲಿದೆ. ಹುಡುಗಿಯರಿಗೆ ಒಂದು ಬೇರೆ ಹಾಸ್ಟಲಿದೆ. ಬೋವಿ ಜನಾಂಗದವರಿಗೆ ಒಂದು ಹಾಸ್ಟಲು ಇದೆ. ಈ ರೀತಿ ಒಬ್ಬೊಬ್ಬರಿಗೂ ಒಂದೊಂದು ಪ್ರತ್ಯೇಕವಾದ ಹಾಸ್ಟಲುಗಳಿವೆ. ಈ ರೀತಿ ಮಾಡುವುದರಿಂದ

ಒಂದು ಜಾತೀಯ ಭಾವನೆ ಬರುತ್ತದೆ. ಈ ಸಭೆಯಲ್ಲಿಯೂ ಕೂಡ ಹರಿಜನ ಸದಸ್ಯರು ಜೊತೆಯಲ್ಲಿ ಕುಳಿತುಕೊಂಡಿದ್ದಾರೆ. ಒಂದೊಂದು ಜಾತಿಗೂ ಒಂದೊಂದು ಹಾಸ್ಟೆಲನ್ನು ಕಟ್ಟುವುದು ಸರಿಯಲ್ಲ. ಇನ್ನು ಮುಂದೆ ಹೊಸದಾಗಿ ಹಾಸ್ಟೆಲನ್ನು ನಿರ್ಮಾಣ ಮಾಡುವಾಗ ಎಲ್ಲ ಹರಿಜನರಿಗೂ ಒಂದೇ ಹಾಸ್ಟೆಲನ್ನು ತೆಗೆಯತಕ್ಕದ್ದು ಒಳ್ಳೆಯದು ಎಂದು ನಾನು ಸಲಹೆ ಕೊಡಲು ಬಯಸುತ್ತೇನೆ.

ರೂರಲ್ ಡೆವಲಪ್‌ಮೆಂಟಿಗೋಸ್ಕರ ಇಪ್ಪತ್ತಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಯಾವ ಯಾವುದಕ್ಕೆ ಎಷ್ಟೆಷ್ಟು ಒದಗಿಸಿದ್ದಾರೆಂಬುದು ಬಜೆಟಿನಲ್ಲಿಲ್ಲ. ಕುಡಿಯುವ ನೀರಿನ ಬಾವಿಗೆ, ಇಷ್ಟು, ರಸ್ತೆಗೆ ಇಷ್ಟು ಎಂದು ಬೇರೆ ಬೇರೆ ಹಣವನ್ನು ಒದಗಿಸುವುದು ಒಳ್ಳೆಯದು. ರೂರಲ್ ಡೆವಲಪ್‌ಮೆಂಟಿಗೋಸ್ಕರ ಇಪ್ಪತ್ತಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಒಟ್ಟಾರೆ ಹಣವನ್ನು ಒದಗಿಸಿದರೆ ಅದರಿಂದ ಅನುಕೂಲವಾಗುವುದಿಲ್ಲ. ಪ್ರತಿಯೊಂದು ಬಾಬಿಗೂ ಇಷ್ಟಿಷ್ಟು ಹಣ ಎಂದು ನಿಗದಿಯಾಗಿ ಒದಗಿಸಬೇಕು.

ಇನ್ನು ಡಿಪ್ರೆಸ್ಡ್ ಕ್ಲಾಸ್ ಸೋಷಿಯಲ್ ವೆಲ್‌ಫೇರ್ ಆಫೀಸರ್ಸ್ ಮತ್ತು ತಾಲ್ಲೂಕಿನಲ್ಲಿರತಕ್ಕ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳ ಬಗ್ಗೆ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಈ ರೆವಿನ್ಯೂ ಇನ್‌ಸ್ಪೆಕ್ಟರ ಕೆಲಸಕ್ಕೂ ಮತ್ತು ಸೋಷಿಯಲ್ ವೆಲ್‌ಫೇರ್ ಆಫೀಸರ ಕೆಲಸಕ್ಕೂ ಹರಿಜನರಲ್ಲದೆ ಬೇರೆ ಜಾತಿಯವರನ್ನೂ ಕೂಡ ನೇಮಿಸತಕ್ಕದ್ದು ಒಳ್ಳೆಯದಾದೀತು ಎನ್ನುವುದು ನನ್ನ ಭಾವನೆ. ಎಂಟು ಹತ್ತು ವರ್ಷಗಳ ನನ್ನ ಅನುಭವದಲ್ಲಿ ನೋಡಿದಾಗ ಅವರು ಒಂದು ಸೇವಾ ಮನೋಭಾವದಿಂದ ಕೆಲಸ ಮಾಡುತ್ತಿಲ್ಲ. ಅವರು ಏನೇ ತಪ್ಪು ಮಾಡಿದರೂ ಅವರು ಹರಿಜನರೆಂದು ಅವರ ಬಗ್ಗೆ ಕಂಪ್ಲೇಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ನಮ್ಮವರು ಎಂದು ಸುಮ್ಮನಾಗತಕ್ಕ ಪರಿಸ್ಥಿತಿ ಇದೆ. ಆ ಹುದ್ದೆಗಳಿಗೆ ಬೇರೆಯವರನ್ನು ನೇಮಕ ಮಾಡಿದರೂ ಕೂಡ ಹರಿಜನರಿಗೆ ಬೇರೆ ಕೆಲಸ ಸಿಕ್ಕತಕ್ಕದ್ದರಲ್ಲಿ ಯಾವ ತೊಂದರೆಯೂ ಇಲ್ಲ. ಏತಕ್ಕೆಂದರೆ ಹರಿಜನರಿಗಾಗಿ 3[illegible] ಪರ್ಸೆಂಟ್ ರಿಜರ್ವೇಷನ್ ಇದ್ದೇ ಇದೆ. ಅವರಿಗೆ ರೆವಿನ್ಯೂ ಇನ್‌ಸ್ಪೆಕ್ಟರ ಕೆಲಸವಲ್ಲದಿದ್ದರೆ ಬೇರೆ ಯಾವುದಾದರೂ ಕೆಲಸ ನೌಕರಿ ಅವರಿಗೆ ಸಿಕ್ಕಿಯೇ ಸಿಕ್ಕುತ್ತದೆ. ಅವರಿಗೆ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಬೇರೆಯವರನ್ನು ಆ ಹುದ್ದೆಗಳಿಗೆ ನೇಮಕಮಾಡಿದರೆ ಅವರ ಆ ಒಂದು ಕೆಲಸವನ್ನು ಸೇವಾಭಾವನೆಯಿಂದ ಕೆಲಸಮಾಡುತ್ತಾರೆ ಎನ್ನುವ ನಂಬಿಕೆ ನಮಗೆ ಇದೆ. ಸರ್ಕಾರದವರು ಈ ವಿಚಾರವನ್ನು ಯೋಚನೆ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಸಮಾಜ ಕಲ್ಯಾಣದ ವಿಷಯದಲ್ಲಿ ಹೇಳುವುದಾದರೆ ವಿಮೆನ್ ವೆಲ್‌ಫೇರಿಗೋಸ್ಕರವಾಗಿ ಏಳು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒದಗಿಸಿದ್ದಾರೆ. ನಾನು ಅನೇಕ ಸಮಾಜ ಕಲ್ಯಾಣ ಕೇಂದ್ರಗಳನ್ನು ನೋಡಿದ್ದೇನೆ. ಅವು ಒಳ್ಳೆಯ ಕಲ್ಯಾಣ ಕೇಂದ್ರಗಳೇ ಆಗಿವೆ. ಏತಕ್ಕೆಂದರೆ ಆ ಸಮಾಜ ಕಲ್ಯಾಣ ಕೇಂದ್ರಗಳಿಗೆ ಓದಿದ ಹೆಣ್ಣುಮಕ್ಕಳನ್ನೇ ಕಳುಹಿಸುತ್ತಾರೆ. ಅವರು ಪಟ್ಟಣದಲ್ಲಿ ವಾಸವಾಗಿದ್ದುಕೊಂಡು ಪಟ್ಟಣದ ಸಂಸ್ಕೃತಿಯೇ ಅದರಲ್ಲಿ ಜಾಸ್ತಿ ಇರುತ್ತದೆ. ಹಳ್ಳಿಯಲ್ಲಿರತಕ್ಕ ಜನಗಳೊಂದಿಗೆ ಮತ್ತು ಹರಿಜನರೊಂದಿಗೆ ಬೆರೆತು, ಹೊಂದಿಕೊಂಡು ಕೆಲಸ ಮಾಡಬೇಕೆಂಬ ಮನೋಭಾವನೆ ಅವರಿಗೆ ಕಡಮೇ ಅನ್‌ಟಚ್ಚಬಿಲಿಟಿಯ ಮನೋಭಾವನೆ ಅವರಲ್ಲಿ ಇರುತ್ತದೆ. ಅಲ್ಲಿಯ ಜನಗಳದೇ ಒಂದು ವರ್ಗವಾಗುತ್ತದೆ. ಇವರದೇ ಒಂದು ವರ್ಗವಾಗುತ್ತದೆ. ಆದ್ದರಿಂದ ಸಮಾಜ ಕಲ್ಯಾಣ ಕೇಂದ್ರಗಳಿಗೆ ಹೆಣ್ಣುಮಕ್ಕಳನ್ನು ನೇಮಕ ಮಾಡುವಾಗ ಆಸಕ್ತಿ ಇರುವವರನ್ನು ನೇಮಕಮಾಡತಕ್ಕದ್ದು ಸೂಕ್ತ ಎಂದು ನಾನು ಹೇಳಬಯಸುತ್ತೇನೆ. ಅನೇಕ ಸಮಾಜ ಕಲ್ಯಾಣ ಕೇಂದ್ರಗಳು ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಇಲ್ಲ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಬಹಳ ನಿಗಾದಿಂದ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಇಷ್ಟು ಹೇಳಿ ಇದುವರೆಗೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri G. DUGGAPPA (Holalkere).—Mr. Speaker, Sir. the demand before us in respect of Rural Development is for Rs. 1,59,00,063. As has already been pointed out by the previous speaker, a small amount has been set apart for rural development work and it has been the cry of all the Taluk Boards which have come into being recently that more work has been entrusted to them. Keeping in view the quantum of work entrusted to them, it is quite necessary that some more funds should be made available to them so that they discharge their duties properly and efficiently.

Coming to the Social Welfare Department and the Scheduled Castes, I want to refer to what the Governor has stated in his speech in 196. about the welfare of the Scheduled Castes and Scheduled Tribes.

> "The welfare of the Scheduled Castes and Scheduled Tribes has been the accepted policy of my Government. Educational facilities and economic assistance to the members of this class will be provided in an ever increasing measure to enable them to take their rightful place in the life of the community. In addition to this, steps are being taken to ensure that these sections of the population receive an adequate measure of the benefits accruing from all plan outlays."

It is quite evident from this that the schemes specially meant for the Scheduled Castes and Scheduled Tribes are in addition to the benefits accruing to them from all the plan outlays on various Development Departments like

(SRI G. DUGGAPPA)

Agriculture, Co-operation, Irrigation, Industries, Communication, Education, Health, Housing, Rural Water Supply, etc. Now, I ask the Government whether, as expected by t is Government, these sections of the people do get the benefits from the outlays on these various developmental department. For example, on Agriculture we spend about Rs. 2,94,31,0 0. I ask Government what is the portion of this amount that the Depressed Classes get. Similarly, out of Rs. 17,75,75 000 that we are spending on Education for the whole State, what is the amount that these classes of people get. I may bring to your kind notice, Sir, that only Rs. 63 000 have been set apart for scholarship to the students belonging to the Scheduled Castes and Scheduled Tribes. For the last two terms, this amount has been kept constant and not changed. There have been so many representations and there has been a hue and cry in this very House that this amount should be increased in consonance with the increase in the number of the school-going children. This amount is set apart for payment of scholarship to the students studying in high schools, middle schools and primary schools and that too, for both boys and girls. I have been working as a member on the Scholarship Committee and I may mention that it has been difficult to give scholarship even for half a dozen students whereas the applications are innumerable and they are increasing day by day.

As the number of students is increasing, it is quite reasonable that these amounts should be increased. I do not know how this item remains constant year after year. I request the Minister concerned to see that this amount is increased in keeping with the increased number of applicants.

2-30 P.M.

The idea behind making budget provisions for the Scheduled Castes is to see that they advance in the economic, social, educational and other fields. The amount provided for the economic progress of these communities comes to about one or two thousand rupees per taluk for purchase of 8 pairs of bullocks for each taluk or one pair of bullocks for each hobli. Can we be satisfied with these paltry allocations. Can the community make economic advance under such conditions.? I request the Government to think of doing something concrete instead of taking half-hearted steps here and there. I would suggest that in respect of every developmental allocation or scheme, a portion should be allotted to the depressed classes. I know the Honourble Minister presently in-charge of this portfolio has distinguished herself in the field of social service and she will do her maximum towards the upliftment of the depressed classes, but she should not rest content with doing something piecemeal here and there. I am voicing the views of my community, when I say that the portfolio relating to amelioration of Scheduled Castes should be in the hands of a person who belongs to the Scheduled Castes. In saying this I mean no disrespect to the lady who is holding the portfolio at present but I am saying this because "the bearer knows where the shoe pinches". The problems of the community, their sufferings, trials and tribulations are better felt, experienced and understood by members of the community and not so much by others.

SRI M. V. KRISHNAPPA (Minister for Revenue).—Then only a railway engine driver should be a Railway Minister.

SRI G. DUGGAPPA.—Sir, the analogy is not correct. Anyway, we entertain the feeling that the Minister in-charge of this portfolio should himself belong to the Scheduled Castes. Once again, I would like to reiterate that I have nothing to say against the Lady Minister. I know she has taken this work to her heart and I am sure she would do something good and new which would redound to the benefit of the community

I would like to bring to the notice of this House that even now, in the year of grace in 1962, there are separate primary schools for children of depressed classes, specially in Mysore

district. This is a horrible thing indeed. I cannot tolerate the existence of such schools. I do not want this idea of segregation and separatist tendencies to be stamped into the minds of young children at the age of five or six. I want these separate schools to be abolished immediately and school children should be admitted to general schools whatever be their community.

Sri SANJIVANATH AIKALA (Surat-kal).—The Harijans themselves request that their children be admitted to separate schools.

Sri G. DUGGAPPA.—I humbly submit that it is a very bad idea. It is in the interest of the community that Government takes immediate steps to abolish private schools for Harijans only. I for one, experienced the hardships of studying in a segregated school at the primary stage and having studied in the general school afterwards, I know the advantages of our boys and girls studying in general schools. The child should not get he psychological impression that it belongs to this or that community and therefore it is superior or inferior to others. Once again, I strongly plead that the separate schools be abolished.

Coming to the hostels, I did entertain and I was one of those who represented to Government that students of other communities should also be admitted to the existing hostels meant for the depressed classes. Of course, the admission of these candidates should not come in the way of admission of scheduled caste children. If after giving admission to all the scheduled castes who apply, there are seats left over, certainly other castes should be welcomed. That was also the idea of the Government, that is, to have common hostels. I too support the idea behind it.

There are certain welfare centres for children and women, which are run by the Social Welfare Department. Fortunately, the Minister herself is a person who has had the rich experience of running the Kasturba Memorial Centres for training Sevikas. Unfortunately, there are no trained hands at these centres. I request her to post immediately trained hands so that the moneys spent there may be utilised properly to yield maximum returns.

Sir, the idea behind Government spending money for the upliftment of the Scheduled Castes is to see that they come up to the level of other members of the society. The problem is stupendous and wide. In this community there are scavengers, the sweepers and the lowliest, the right hand and the left hand and what not. It is a great task to make them useful members of the society and honoured citizens of this country. In spite of the enormous amounts we have spent, may I ask if there is any boy or girl studying in a college or living in a hostel, who comes from the scavengers or sweepers? The benefits ought to go to those who live in the lowest strata of society.

Sir, I make a fervent appeal to the Hon'ble Minister because she knows the difficulty and she has conducted social welfare work for a long number of years. Sir, in all the municipalities in the cities and towns, I find that for scavenging work and sweeping work, women are employed. I make a fervent appeal that at least hereafter, no women folk of whatever caste—bhangi or scavenger which is not a caste, but it is only a profession—should be employed for this scavenging or sweeping work. It may be made a rule or instructions may be given through circulars.

Sri G. VENKATAI GOWDA (Palya).—What is the alternative?

Sri G. DUGGAPPA.—When man is forced, he will find an alternative automatically. Sir, our sastras, puranas are always proclaiming that women are respected in India in all ages. I, therefore, request the Hon'ble Minister to see that during her regime this blot is removed and that women are not employed for these things.

Sri C. J. MUCKANNAPPA.—Supposing they are appointed as supervisors?

Sri G. DUGGAPPA.—I am not yielding. Then again Sir, removal of night-soil on heads. Sir, I remember that some time ago, the Government of India had set up a committee to examine this subject and

(SRI G. DUGGAPPA)

suggest ways and means of stopping this habit. It had made certain recommendations; I do not know whether those recommendations were given effect to. It is very ghastly to see night-soil removed on head. I request the Government to take steps to put an end to this habit.

Sir, one more point I would like to bring to the notice of this House that when Sri Hanumanthiah was the Chief Minister, he had thought of an idea and constituted a committee known as a policy committee. The Chief Minister himself was the Chairman of that Committee and the port-folio Minister was the vice-Chairman and the Members were the concerned Secretary to Government, the Education Secretary, Revenue Secretary, and one or two people who were interested in these things and non-official organisations—not necessarily depressed class organisation—those who were engaged in the upliftment of the community. The Committee was there. The main object of that committee was to think of various methods and policies by which upliftment or the betterment of the people could be achieved. That was only to advise the Government and of course, it was left to the Government to implement that advice or not. All of a sudden, subsequent Government have thought it fit to abolish this committee. And in place of that committee, they have formed another committee consisting of all members of that community of this House with the Minister. I do not know whether any other official member was there. Of course the Director of Social Welfare was there. And it is not for me to say here how the business of that committee is transacted. They used to visit district headquarters. Though I was a member, I did not attend these meetings. I thought that without any officer or secretary to Government on that Committee, no useful purpose would be served by merely passing pious resolutions on all subjects of individual fancy, sanctioning houses, sanctioning a pair of bullocks, education, economic development and all that. I think it was no use. Therefore, I request the Hon'ble Minister that that committee should be revived and the Chief Minister and the concerned Minister should also be there.

†ಶ್ರೀ ಆರ್. ಎಸ್. ಲಕ್ಷ್ಮೀಪತಿ (ಗೌರಿಬಿದನೂರ).— ಮಾನ್ಯ ಸಭಾಪತಿಗಳೆ, ಅನೇಕ ಸಂದರ್ಭಗಳಲ್ಲಿ ಈ ಸಭೆಯಲ್ಲಿ ಬೇರೆ ಬೇಡಿಕೆಗಳ ಮೇಲೆ ಮಾತನಾಡಬೇಕೆಂದಿದ್ದೆ ಆದರೆ ಅವಕಾಶ ಸಿಕ್ಕಲಿಲ್ಲ. ಈ ಹೊತ್ತು ನಾನು ಮಾತನಾಡಬೇಕೆಂದಿರಲಿಲ್ಲವಾದರೂ, ನಿಂತ ತಕ್ಷಣವೇ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ; ಅದನ್ನು ಉಪಯೋಗ ಮಾಡಿಕೊಳ್ಳುತ್ತೇನೆ. ಸ್ವಾಮಿ, ಹರಿಜನರು ಬಹಳ ಹಿಂದುಳಿದ ಕೋಮಿನವರೆಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಒಂದು ದೇಶದಲ್ಲಿ ಯಾವ ಜನಾಂಗವೇ ಆಗಲಿ ಬಹಳ ಹಿಂದುಳಿದರೆ ದೇಶ ಮುಂದುವರಿಯುವುದಕ್ಕೆ ಧಕ್ಕೆ ಬರುತ್ತದೆಂಬುದು ಎಲ್ಲರಿಗೂ ಗೊತ್ತಿದೆ. ಈಗಾಗಲೇ ನಮ್ಮ ದೇಶದಲ್ಲಿ ಅನೇಕ ಛಿದ್ರ ಛಿದ್ರ ಮಾಡುವ ಶಕ್ತಿಗಳು ಬೆಳೆಯುತ್ತಿವೆ. ಮೊದಲನೆಯದಾಗಿ ಭಾಷಾವಾರು ರಾಜ್ಯಗಳಾಗಿ ಬೇರೆಬೇರೆ ಶಕ್ತಿಗಳು ಉಲ್ಬಣವಾಗುತ್ತಿವೆ. ಒಂದೇ ಭಾಷೆಯನ್ನು ತೆಗೆದುಕೊಂಡರೂ ಮೈಸೂರು ಕನ್ನಡ, ಕರ್ಣಾಟಕದ ಕನ್ನಡ ಎಂದು ಬೇರೇಬೇರೆ ಇವೆ. ಹೀಗೆ ಛಿದ್ರ ಮಾಡುವ ಶಕ್ತಿಗಳ ನಡುವೆ, ಹರಿಜನರನ್ನು ನಮ್ಮ ಹಿಂದೂ ಪಂಗಡಗಳೊಡನೆ ಒಗ್ಗಟ್ಟಾಗಿ ಮಾಡುವ ಅನೇಕ ಪ್ರಯತ್ನಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ. ಹೀಗಿದ್ದರೂ ಅವರು ಎಷ್ಟುಮಟ್ಟಿಗೆ ಒಂದುಗೂಡುತ್ತಾರೆ, ಎಷ್ಟುಮಟ್ಟಿಗೆ ಮುಂದುವರಿಯುತ್ತಾರೆ, ಎನ್ನುವುದು ಅನುಮಾನಾಸ್ಪದವಾದ ವಿಷಯವಾಗಿದೆ. ನನಗೆ ಗೊತ್ತಿರುವ ಹಾಗೆ ಹರಿಜನರ ಹಾಸ್ಟೆಲುಗಳನ್ನು ಮಾಡಿದ್ದಾರೆ. ಅಲ್ಲಿ ಬರಿಯ ಹರಿಜನರಿಗೇ ಅವಕಾಶ ಕೊಟ್ಟರೆ ತಾವೇ ಬೇರೆಯ ಗುಂಪಿಗೆ ಸೇರಿದವರೆಂಬ ಅಭಿಪ್ರಾಯ ಬರಬಹುದೆಂದು ಅಲ್ಲಿಗೆ ಬೇರೆ ಪಂಗಡದವರನ್ನೂ ಸೇರಿಸಿಕೊಂಡರೆ ತಾವೂ ಅವರಲ್ಲಿ ಒಬ್ಬರೆಂಬ ಅಭಿಪ್ರಾಯ ಬರುತ್ತದೆಂದು ಮಾಡಿದ್ದಾರೆ. ಹಿಂದೆ ನಮ್ಮ ತಾಲ್ಲೂಕಿನಲ್ಲಿ ಒಂದು ಹರಿಜನ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದೆವು. ಅವರಲ್ಲಿ ಬೇರೆ ಕೋಮಿನವರನ್ನು ಸೇರಿಸುತ್ತಿದ್ದೆವು. ಅಲ್ಲಿ ವಿದ್ಯಾರ್ಥಿಗಳಿಗೆ ತಾವು ಬೇರೆ ಬೇರೆ ಕೋಮಿನವರೆಂಬ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ಅಂಥ ವಾತಾವರಣದಲ್ಲಿ ಮಕ್ಕಳು ಬೆಳೆದರೆ, ಇಡೀ ರಾಷ್ಟ್ರವೇ ಒಂದು ಜನಾಂಗ ಎಂಬ ಭಾವನೆ ಬೆಳೆಯಲವಕಾಶವಾಗುತ್ತದೆ. ಆದರೆ ಬರಿಯ ಹರಿಜನರ ಹಾಸ್ಟೆಲಿನಲ್ಲಿ ಇಂಥ ವಾತಾವರಣವಿಲ್ಲ. ಅವರಿಗೇ ಪ್ರತ್ಯೇಕವಾಗಿ ಮಾಡಿರುವುದರಿಂದ ತಾವೇ ಬೇರೆಯ ಪಂಗಡದವರೆಂಬ ಅಭಿಪ್ರಾಯ ಅವರಲ್ಲಿ ಬರುತ್ತದೆ. ಆದಕಾರಣ ಕೂಡಲೇ ಹರಿಜನರ ಹಾಸ್ಟೆಲ್ ಎಂಬ ಹೆಸರನ್ನು ತೆಗೆದು ಸಾರ್ವಜನಿಕ ಹಾಸ್ಟೆಲುಗಳೆಂದು ನಾಮಕರಣ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಹರಿಜನರಿಗೆ ಸರ್ಕಾರದವರು ಅನೇಕ ವಿಧಗಳಲ್ಲಿ ಸಹಾಯ ಮಾಡುತ್ತಿದ್ದಾರೆ. ಅವರಿಗೆ ಎತ್ತುಗಳನ್ನು ಪಡೆಯುವುದರಲ್ಲಿ, ಮನೆಗಳನ್ನು ಕಟ್ಟಿಸುವುದರಲ್ಲಿ, ಜಮೀನು ಪಡೆಯುವುದರಲ್ಲಿ ಮತ್ತು ಇನ್ನೂ ಅನೇಕ ರೀತಿಗಳಲ್ಲಿ ಸಹಾಯ ಮಾಡುತ್ತಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಪರಿಣಾಮದಲ್ಲಿ ನೋಡಿದರೆ ಯಾವ ಹರಿಜನರೂ ಇವರು ಕೊಟ್ಟಿರುವ ಎತ್ತುಗಳನ್ನು ಉಪಯೋಗಿಸಿಕೊಂಡು ತಮ್ಮ ಜಮೀನನ್ನು ವ್ಯವಸಾಯ ಮಾಡುವುದಿಲ್ಲ. ಜಮೀನಿನ ವಿಷಯವೂ ಹೀಗೆ. ಯಾರೋ ಪುಡಾರಿ ಹೋಗಿ ಹರಿಜನರ ಹೆಸರಿ

ನಲ್ಲಿ ಸೌಲಭ್ಯಗಳನ್ನು ಪಡೆದು ತಾನು ಉಪಯೋಗಿಸಿಕೊಳ್ಳುತ್ತಾನೆ. ಇಂಥ ಒಂದು ಕೆಟ್ಟ ಚಾಳಿ ಅಭಿವೃದ್ಧಿಯಾಗುತ್ತಿದೆ. ಇದನ್ನು ಖಂಡಿತವಾಗಿ ನಿಲ್ಲಿಸಿ ಬೇರೆ ರೂಪದಲ್ಲಿ ಅವರಿಗೆ ಸಹಾಯ ಮಾಡಬೇಕು. ನಮ್ಮ ದೇಶದಲ್ಲಿ ಹರಿಜನರು ಬಹಳ ಹಿಂದುಳಿದ ಜನಾಂಗವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇವರಿಗೆ ಹೇಗೆ ಸಹಾಯ ಮಾಡಬೇಕು, ಯಾವ ರೀತಿ ಮಾಡಿದರೆ ಇವರನ್ನು ಮುಂದೆ ತರಬಹುದು ಎಂಬ ಬಗ್ಗೆ ಮಂತ್ರಿಗಳಲ್ಲಿ ಅರಿಕೆ ಮಾಡುತ್ತೇನೆ.

ಕಡ್ಡಾಯ ಶಿಕ್ಷಣ ಜಾರಿಗೆ ಬಂದಮೇಲೆ ಎಲ್ಲಾ ಮಕ್ಕಳೂ ಶಾಲೆಗೆ ಹೋಗಬೇಕೆಂಬ ನಿರ್ಬಂಧವಿದೆ. ಆದರೆ ಇದರಿಂದ ಬಡಜನರಿಗೆ ತೊಂದರೆಯಾಗಿದೆ. ಉತ್ತಮ ಕುಲದವರು, ಅನುಕೂಲಸ್ಥರು ನಾಜೂಕಾದ, ಶುಭ್ರವಾದ ಬಟ್ಟೆಗಳನ್ನು ಹಾಕುತ್ತಾರೆ. ಹರಿಜನರಾದರೋ ಮಕ್ಕಳಿಗೆ ಮಾಸಿದ ಬಟ್ಟೆಗಳನ್ನು ಹಾಕಿ ಶಾಲೆಗೆ ಕಳುಹಿಸುವುದರಿಂದ ಶುಭ್ರವಾದ ಬಟ್ಟೆಗಳನ್ನು ಹಾಕಿಕೊಂಡು ಬರುವ ಮಕ್ಕಳಿಗೆ ಹರಿಜನರ ಮಕ್ಕಳನ್ನು ಕಂಡರೆ ಒಂದು ಕೀಳು ಭಾವನೆ ಬರುತ್ತದೆ. ಇದನ್ನು ಹೋಗಲಾಡಿಸಲು ಹರಿಜನರ ಮಕ್ಕಳಿಗೆ ಬಟ್ಟೆಗಳ ರೂಪದಲ್ಲಿ, ಪುಸ್ತಕಗಳ ರೂಪದಲ್ಲಿ ಸಹಾಯ ಮಾಡಿ ಇತರ ಉತ್ತಮವರ್ಗದ ಮಕ್ಕಳಲ್ಲಿ ಯಾವ ಕೀಳು ಭಾವನೆಯೂ ಬಾರದಂತೆ ನೋಡಿಕೊಳ್ಳಬೇಕಾದ್ದು ಆವಶ್ಯಕ. ಎಲ್ಲರೂ ವಿದ್ಯಾವಂತರಾದರೆ ಕೀಳು, ಮೇಲು ಎಂಬ ಭಾವನೆ ಅಳಿಸಿಹೋಗುತ್ತದೆ. ಅನೇಕ ಹರಿಜನರಿಗೆ ತಮ್ಮ ಮಕ್ಕಳಿಗೆ ಹೊಟ್ಟೆಗೆ ಹಾಕಲು ಮತ್ತು ಬಟ್ಟೆಗಳನ್ನೊದಗಿಸಲು ಶಕ್ತಿಯಿಲ್ಲ. ಆದುದರಿಂದ ಅವರು ಮಕ್ಕಳನ್ನು ಶಾಲೆಗೆ ಕಳುಹಿಸಲು ಅನುಕೂಲವಾಗುವಂತೆ ಹರಿಜನರ ಮಕ್ಕಳಿಗೆ ಊಟಕ್ಕೆ, ಬಟ್ಟೆಗೆ ಅವಕಾಶ ಮಾಡಿಕೊಡಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ಯೋಜನೆಯ ಪ್ರಕಾರ ಹರಿಜನರಿಗೆ ಎಲ್ಲಾ ಊರುಗಳಲ್ಲೂ ಬೇರೆ ಜಾಗವನ್ನು ಅಕ್ವೈರ್ ಮಾಡಿ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡುತ್ತಿದ್ದಾರೆ. ಆದರೆ ಇದರಿಂದ ಅವರು ಇತರ ಪಂಗಡಗಳವರ ಜೊತೆಯಲ್ಲಿ ವಾಸಮಾಡಲು ಅವಕಾಶವಿಲ್ಲದೆ ಪ್ರತ್ಯೇಕ ಭಾವನೆ ಬೆಳೆಯಲು ಅವಕಾಶವಿದೆ. ಹಳ್ಳಿಗಳಲ್ಲಿ ಇದು ಹೆಚ್ಚಾಗಿ ನಡೆಯುತ್ತಿದೆ. ಆದುದರಿಂದ ಇನ್ನುಮುಂದೆ ಉತ್ತಮಪಂಗಡಗಳವರ ಮಧ್ಯೆ ಹರಿಜನರು ವಾಸಿಸಲು ಅವಕಾಶ ಒದಗಿಸಬೇಕು. ಹಾಗೆಮಾಡಿ ಅವರಿಗೆ ನಲ್ಲಿ, ದೀಪ, ಚರಂಡಿ ಮುಂತಾದ ಅನುಕೂಲಗಳನ್ನೊದಗಿಸಿದರೆ ಇತರರೊಂದಿಗೆ ಬೆರೆತು ಅಸ್ಪೃಶ್ಯತಾ ಭಾವನೆ ಅಳಿಸಿಹೋಗಲು ಅವಕಾಶವಾಗುತ್ತದೆ. ಇಷ್ಟು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮಿ, ಗ್ರಾಮಾಭಿವೃದ್ಧಿ ವಿಷಯದಲ್ಲಿ ಮಾತನಾಡಲು ನಮ್ಮ ಅಧ್ಯಕ್ಷರು ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದನೆಗಳನ್ನರ್ಪಿಸುತ್ತೇನೆ. ಇದು ದೇಶದ ಆಡಳಿತದಲ್ಲಿ ಒಂದು ಪ್ರಾಮುಖ್ಯವಾದ ವಿಷಯವಾಗಿದೆ. ನಮ್ಮ ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ ಹಳ್ಳಿಯನ್ನು ಡಿಲ್ಲಿ ಮಾಡಬೇಕೆಂಬ ಆಶೆಯಿದೆ. ಪ್ರತಿಗ್ರಾಮದಲ್ಲೂ ಒಡವರು ಎಲಾ ಜಾತಿಗಳಲ್ಲೂ ಇದ್ದಾರೆ. ಆದರೆ ಹರಿಜನರು ಹಿಂದಿನಿಂದಲೂ ಬಹಳ ಹಿಂದುಳಿದಿದ್ದುದರಿಂದ, ಅನೇಕವಾಗಿ ತೊಂದರೆಗೊಳಗಾಗಿದ್ದುದರಿಂದ ಅವರನ್ನು ಮುಂದುವರಿಸಬೇಕೆಂಬ ಅಭಿಪ್ರಾಯದಿಂದ ಸರ್ಕಾರದವರು ಅನೇಕವಾಗಿ ಅವರಿಗೆ ಸಹಾಯ ಮಾಡುತ್ತಿದ್ದಾರೆ, ಇನ್ನೂ ಹೆಚ್ಚು ಸಹಾಯಮಾಡಲು ಸಂತೋಷ. ಪ್ರತಿಯೊಂದು ಊರಿನಲ್ಲೂ, ಪ್ರತಿ ಕೋಮಿನಲ್ಲೂ ಬಡವರಿರುವುದರಿಂದ ಎಷ್ಟು ಜನರಿಗೆ ಜಮೀನಿದೆ, ಎಷ್ಟು ವಿದ್ಯಾವಂತರಿದ್ದಾರೆ ಎಂದು ಪ್ರತಿ ಊರಿನಲ್ಲೂ, ಪ್ರತಿ ಕೋಮಿನಲ್ಲೂ ಪರಿಶೀಲಿಸಿ, ಸರ್ವೆ ಮಾಡಿ ಬಡವರು ಯಾರಿದ್ದಾರೋ ಅವರಲ್ಲಿ ಪ್ರತಿಯೊಬ್ಬರಿಗೂ ಅನುಕೂಲವಾಗುವ ಹಾಗೆ ಜನರಲ್ ಹಾಸ್ಟಲ್ ಏರ್ಪಾಡುಮಾಡಿ ಸಹಾಯ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಜಾತಿಯ ಆಧಾರದ ಮೇಲೆ ಹಾಸ್ಟಲ್ ತೆಗೆಯಬಾರದು. ಬಡಮಕ್ಕಳು ಯಾವ ಜಾತಿಯವರೇ ಆಗಲಿ ಎಲ್ಲರಿಗೂ ಹಾಸ್ಟೆಲನಲ್ಲಿ ಅವಕಾಶ ಕೊಡಬೇಕು. ಈಗ ದೇಶದಲ್ಲಿ ಜಾತಿಯೆಂಬುದೇ ಇರಬಾರದೆಂದು ಸರ್ಕಾರ ಹೇಳುತ್ತಿರುವಾಗ ಜಾತಿ ಎಂಬ ಶಬ್ದವನ್ನು ತೊಡೆದುಹಾಕಬೇಕೆಂದು ಸೂಚಿಸುತ್ತೇನೆ. ಹರಿಜನರು ಮಾತ್ರ, ಒಂದೇ ಜಾತಿಯವರು ಒಂದು ಹಾಸ್ಟಲಿನಲ್ಲಿರುವುದರಿಂದ ಅವರ ನಡವಳಿಕೆ ಬದಲಾಯಿಸಲು ಕಷ್ಟವಾಗುತ್ತದೆ. ಎಲ್ಲಾ ಕೋಮುಗಳವರೂ ಇರುವ ಕಡೆ ನಡೆವಳಿಕೆ ಬದಲಾಯಿಸಿ ಮುಂದುವರಿಯಲು ಅನುಕೂಲವಾಗುತ್ತದೆ. ಪೂರ್ವದಿಂದಲೂ ವಂಶಪಾರಂಪರ್ಯವಾಗಿ ವಿದ್ಯಾವಂತರಾಗುತ್ತಿರುವವರ ಮನೆತನದವರ ಮಕ್ಕಳು ಸಾಮಾನ್ಯವಾಗಿ ಯಾವಾಗಲೂ ವಿದ್ಯಾವಂತರಾಗುತ್ತಾರೆ ಮತ್ತು ಅವರು ಬುದ್ಧಿವಂತರಾಗಿರುತ್ತಾರೆ, ಮೆರಿಟ್‌ನಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಹೆಚ್ಚು ನಂಬರನ್ನು ಪಡೆಯುತ್ತಾರೆ. ಹೀಗೆ ಅಂಥವರು ನೂರಾರು ವರ್ಷಗಳಿಂದ ವಿದ್ಯಾವಂತರಾಗುತ್ತಿದ್ದಾರೆ. ಅದೇ ಹಳ್ಳಿಯ ಮಕ್ಕಳು ಈಗ ಸ್ವಲ್ಪ ಕಾಲದಿಂದ ಮಾತ್ರ ವಿದ್ಯಾವಂತರಾಗುತ್ತಿರುವುದರಿಂದ ಅವರಿಗೆ ಪರೀಕ್ಷೆಗಳಲ್ಲಿ ಕಡಮೆ ನಂಬರು ಬರುತ್ತದೆ. ಬರೀ ಮೆರಿಟ್‌ಮೇಲೆ ಈಗ ಕಾಲೇಜುಗಳು ಮುಂತಾದಕಡೆ ಸೀಟುಗಳನ್ನು ಹಂಚುತ್ತಿರುವುದರಿಂದ ಹಳ್ಳಿ ಮಕ್ಕಳಿಗೆ ಸೀಟು ಸಿಕ್ಕುವುದು ಕಷ್ಟವಾಗಿದೆ. ಆದುದರಿಂದ ಸರ್ಕಾರದವರು ಇದನ್ನು ಪರಿಶೀಲಿಸಿ ಮೆರಿಟ್ ಇಲ್ಲದ ಹಳ್ಳಿಗರಿಗೂ ಸ್ವಲ್ಪವಾದರೂ ಸೀಟುಗಳನ್ನು ಕೊಡಲು ವ್ಯವಸ್ಥೆಮಾಡಿ ಅವರು ಮುಂದುವರೆಯಲು ಅವಕಾಶ ಮಾಡಿಕೊಡಬೇಕು. ಯಾವಾಗಲೂ ಹಳ್ಳಿಗಳು ಮುಂದುವರಿಯಬೇಕೆಂದು ಸರ್ಕಾರ ಹೇಳುತ್ತಿದೆ. ಯಾವ ರೀತಿ ಮುಂದುವರಿಯಬೇಕು ? ಒಂದು ಊರಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟರೆ ಅದು ಮುಂದುವರಿಯುವುದಿಲ್ಲ, ಚರಂಡಿ ಮಾಡಿದರೆ ಮುಂದುವರಿಯುವುದಿಲ್ಲ. ಪ್ರತಿ ಬಡ ಮಗುವಿಗೂ ಪಾಠಶಾಲೆಗೆ ಹೋಗಲು ಅವಕಾಶವಾಗುವಂತೆ ಪುಸ್ತಕ, ಬಟ್ಟೆಬರೆ, ಊಟ ಇತ್ಯಾದಿಗೆ ಅವಕಾಶ ಮಾಡಿಕೊಡಲು ವ್ಯವಸ್ಥೆ ಮಾಡಬೇಕು. ಒಂದೇ ಕೋಮಿನ ಹಾಸ್ಟಲು ಮಾಡಲು ಅವಕಾಶ ಕೊಡಬಾರದು. ಸರ್ಕಾರದವರು ಇದಕ್ಕೆ ಬಹಳ ಪ್ರಾಮುಖ್ಯತೆ ನೀಡಬೇಕು.

ಇನ್ನೊಂದು ಅಕ್ವಿಜಿಷನ್ ವಿಚಾರ. ಹಳ್ಳಿ ಅಭಿವೃದ್ಧಿಯಾಗುವುದಕ್ಕೆ ಅಲ್ಲಿರುವ ಕೆಲವು ಜಮೀನುಗಳನ್ನು ಅಕ್ವೈರ್ ಮಾಡಬೇಕಾಗುತ್ತದೆ. ಆದರೆ ರೈತರು ಜಮೀನನ್ನು ಬಿಟ್ಟುಕೊಡುವಾಗ ತಕರಾರು ಮಾಡುತ್ತಾರೆ. ಕೆಲವು ಹೆಚ್ಚು ಬೆಲೆಬಾಳುವ ಜಮೀನಾಗಿರುತ್ತವೆ. ಅದೂ ಅಲ್ಲದೆ ವಂಶಪಾರಂಪರ್ಯವಾಗಿ ಬಂದಿರುವ ಕೆಲವು ಜಮೀನುಗಳಿರುತ್ತವೆ. ಅವನ್ನು ವಿಲೇ ಮಾಡುವುದಕ್ಕೆ ಕೆಲವರಿಗೆ ಇಷ್ಟವಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಅವರಿಗೆ ಬೇರೆ ಜಮೀನನ್ನು ಕೊಟ್ಟು ಗ್ರಾಮಗಳಲ್ಲಿ ಸೈಟಿಗೆ ಅವಕಾಶ ಮಾಡಬೇಕು. ಈಗ 15 ವರ್ಷಗಳಾದರೂ ಅಕ್ವಿಜಿಷನ್ ಕ್ರಮ ಮುಗಿಯುತ್ತಿಲ್ಲ, ವ್ಯಾಜ್ಯ ನಡೆಯುತ್ತದೆ; ಅಕ್ವೈರ್

(ಶ್ರೀ ಜೆ. ದೇವಯ್ಯ)

ಆಗುವುದು ಬಹಳ ನಿಧಾನ. ನಮ್ಮಲ್ಲಿ ನಾಲ್ಕು ಗುಂಟೆ ಅಕ್ವೈರ್ ಆಗಬೇಕಾದ್ದು ನಾಲ್ಕು ವರ್ಷಗಳಿಂದ ನಿಂತಿದೆ. ಒಂದು ತಿಂಗಳ ಕೆಳಗೆ ಮಂಡ್ಯಕ್ಕೆ ರೆವೆನ್ಯೂ ಮಂತ್ರಿಗಳು ಬಂದಾಗ ಇದನ್ನು ಹೇಳುವುದಕ್ಕೆ ಅವಕಾಶವಾಗಲಿಲ್ಲ. ಆರು ತೆಂಗಿನಮರಗಳಿರುವ ಆ ಪ್ರದೇಶ ಇನ್ನೂ ಅಕ್ವೈರ್ ಆಗದೆ ನಾಲ್ಕು ಲಕ್ಷ ರೂಪಾಯಿಗಳ ನಷ್ಟವಾಗಿದೆ. ಈಗ ಮೂರು ಮೈಲಿ ಫಾಸಲೆ ಬಳಸಿಕೊಂಡು ಬರಬೇಕಾಗಿದೆ. ರೆವೆನ್ಯೂ ಮಂತ್ರಿಗಳು ಬಂದು ನೋಡಿ ಸೌಕರ್ಯ ಮಾಡಿಕೊಡಬೇಕು. ಈಗ ಬಹಳ ಕಷ್ಟವಾಗಿದೆ, ಗೊಬ್ಬರ ತೆಗೆದುಕೊಂಡು ಹೋಗಲು ಅವಕಾಶವಿಲ್ಲ, ಬಸ್ ತಿರುಗಾಡಲು ಅವಕಾಶವಿಲ್ಲ. ಅಕ್ವೈರ್ ಆಗುವುದು ಬಹಳ ನಿಧಾನವಾಗಿ ಜನರಿಗೆ ತೊಂದರೆಯಾಗಿರುವುದರಿಂದ ಇದನ್ನು ಬೇಗ ಅಕ್ವೈರ್‌ಮಾಡಿ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಈಗ ಹಿಂದುಳಿದವರಿಗೆ ಸಹಾಯಮಾಡಲು ರೈತರ ಹೊಟ್ಟೆಯಲ್ಲಿ ಹುಟ್ಟಿದ ಶ್ರೀಮತಿ ಯಶೋಧರಮ್ಮನವರು ಮಂತ್ರಿಗಳಾಗಿದ್ದಾರೆ. ಈ ಸಮಯದಲ್ಲಿ ಹಳ್ಳಿಗಾಡಿನಲ್ಲಿರುವ ಹೆಂಗಸರ ಕಷ್ಟವನ್ನು ಹೋಗಲಾಡಿಸುವುದಕ್ಕೆ ಹಳ್ಳಿಗಳಲ್ಲಿ ತಿರುಗಬೇಕು, ಹೆಂಗಸರು ಯಾವ ಸ್ಥಿತಿಯಲ್ಲಿದ್ದಾರೆಂದು ನೋಡಿ ಅವರಿಗೆ ಬುದ್ಧಿವಾದ ಹೇಳಬೇಕು. ಹಳ್ಳಿ ಹೆಂಗಸರು ಎಷ್ಟು ರೂಪಾಯಿಗಳ ಸೀರೆ ಉಡುತ್ತಿದ್ದಾರೆ, ಯಾವ ಮಟ್ಟದಲ್ಲಿದ್ದಾರೆ ವಿದ್ಯಾವಂತರಾಗಿದ್ದಾರೆಯೆ, ಬಡವರೆ ಎಂದು ಪರಿಶೀಲನೆ ಮಾಡಬೇಕು. ಇದೊಂದು ಒಳ್ಳೆಯ ಸಮಯ, ಹಳ್ಳಿಗಾಡು ಅಭಿವೃದ್ಧಿಯಾಗಲು ಒಳ್ಳೆಯ ಅವಕಾಶ. ಯಾವ ಜನಾಂಗವೇ ಆಗಲಿ ಭೇದ ಮಾಡದೆ ಎಲ್ಲ ಜನಾಂಗಕ್ಕೂ ಒಂದೇ ಹಾಸ್ಟಲು ಮಾಡಬೇಕು. ಮೊದಲು ಇದನ್ನು ಮಂಡ್ಯ ಟೌನಿನಲ್ಲಿ ಜಾರಿಗೆ ತರಬೇಕು, ಹಾಗೆ ಮಾಡುತ್ತಾರೆಂದು ನಂಬುತ್ತೇನೆ.

ಶಾಲೆಯ ವಿಚಾರ ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು.—ಈಗ ಸಭೆ ಮುಂದುವರಿದು ಮೂರೂವರೆ ಗಂಟೆಗೆ ಮತ್ತೆ ಸೇರುತ್ತದೆ. ಆಗ ಮಾನ್ಯ ಸದಸ್ಯರು ಐದು ನಿಮಿಷ ಮಾತನಾಡಬಹುದು.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

ಶ್ರೀ ಜೆ. ದೇವಯ್ಯ.—ಜಮೀನುಗಳನ್ನು, ಯಾರಿಗೆ ಜಮೀನಿಲ್ಲವೋ ಅವರಿಗೆ ಕೊಡುವುದಕ್ಕೆ ಸರ್ಕಾರದವರು ಈಗ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಎಷ್ಟು ಜನ ಹಾಗೆ ಜಮೀನು ತೆಗೆದುಕೊಂಡಿದ್ದವರಲ್ಲಿ ವಿಲೇವಾರಿ ಮಾಡಿಬಿಟ್ಟಿದ್ದಾರೆ, ಎಷ್ಟು ಜನ ಇನ್ನೂ ಇಟ್ಟುಕೊಂಡು ಅದರಿಂದ ಜೀವನ ನಡೆಸುತ್ತಿದ್ದಾರೆ ಎಂಬದನ್ನೂ ಸರ್ಕಾರದವರು ಸ್ವಲ್ಪ ಪರಿಶೀಲನೆ ಮಾಡಬೇಕಾದ್ದು ಅವಶ್ಯಕ. ಅಲ್ಲದೆ, ಹರಿಜನರಿಗೆ ಜಮೀನು ಕೊಡುವಾಗ ಕೆಲವರಿಗೆ ಮುಫತ್ತಾಗಿಯೂ, ಇನ್ನು ಕೆಲವರಿಗೆ ಕಿಮ್ಮತ್ತಿನ ಮೇಲೆಯೂ ಕೊಡುವ ವ್ಯವಸ್ಥೆಯಿದೆ. ಕಿಮ್ಮತ್ತಿಗೆ ಪಡೆಯಬೇಕೆನ್ನುವವರು, ದುಡ್ಡಿಲ್ಲದೆ ಬೇರೆಯವರಿಂದ ಸಾಲ ತೆಗೆದುಕೊಂಡು ಜಮೀನನ್ನು ಪಡೆದ ಕೊಂಡು ಆಮೇಲೆ, ಆ ಸಾಲ ತೀರಿಸುವುದಕ್ಕೆ ರಹ ಇಲ್ಲದೆ ಜಮೀನನ್ನು ಮಾರಿಬಿಡುತ್ತಿದ್ದಾರೆ. ಆದ್ದರಿಂದ ಯಾರಿಗೆ ಜಮೀನು ಕೊಡುತ್ತಾರೆಯೋ ಅವರು ಕೊಟ್ಟ ಜಮೀನನ್ನು ಕನಿಷ್ಠವಾಗಿ ಕೆಲವು ನಿಗದಿಯಾದ ವರ್ಷಗಳವರೆಗಾದರೂ ಮಾರಕೂಡದೆಂದು ಕಡ್ಡಾಯವನ್ನು ವಿಧಿಸಬೇಕು; ಮತ್ತು ಯಾರಾದರೂ ಆ ರೀತಿ ಜಮೀನು ಮಾರಿದ್ದರೆ ಅಂಥವರಿಂದ ಆ ಜಮೀನನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ಎಷ್ಟೋ ಜನ ಅನುಕೂಲಸ್ಥರು ಹರಿಜನರ ಹೆಸರಿನ ಮೇಲೆ ಜಮೀನು ತೆಗೆದುಕೊಂಡಿರುವುದನ್ನು ನಾನು ಬಲ್ಲೆ. ಆದ್ದರಿಂದ ಈ ಅಂಶವನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಹರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸಾಮಾನುಗಳನ್ನು ಕೊಡುವ ವ್ಯವಸ್ಥೆಯಿದೆ. ಈ ವರ್ಷವೇನೋ ಅದನ್ನು ನಿಲ್ಲಿಸಬೇಕೆಂದು ಮಾಡಿದ್ದಾರೆಂದು ಕೇಳಿದೆ. ಈಗಾಗಲೇ ಕೆಲವರು ಮನೆಗಳನ್ನು ಕಟ್ಟಹೊರಟು ಅರ್ಧಮರ್ಧ ಆಗಿ ನಿಲ್ಲಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸಾಮಾನುಗಳಿಗೆ ಕಾಂಟ್ರಾಕ್ಟ್ ಕೊಟ್ಟು, ಒಳ್ಳೆಯ ಸಾಮಾನುಗಳು ಬರುತ್ತಿಲ್ಲ. ಸರ್ಕಾರದವರು ಕಂಟ್ರಾಕ್ಟರುಗಳು ಎಂಥ ಮರವನ್ನು ಒದಗಿಸುತ್ತಿದ್ದಾರೆ. ಯಾವ ಜಾತಿ ಮರಗಳನ್ನು ಯಾವ ದರದಲ್ಲಿ ಕೊಟ್ಟಿದ್ದಾರೆ, ಇವೆಲ್ಲವನ್ನು ವಿಚಾರಮಾಡಿ ಸಾಮಾನುಗಳನ್ನು ಒದಗಿಸುವ ಏರ್ಪಾಡು ಮಾಡಬೇಕು. ಈ ವರ್ಷವೇನಾದರೂ ಗ್ರಾಂಟನ್ನು ನಿಲ್ಲಿಸುವುದಾದರೆ, ಅರ್ಧಮರ್ಧ ಆಗಿರುವ ಕೆಲಸಗಳು ಮುಗಿಯುವುದಕ್ಕೆ ತಕ್ಕ ಸಹಾಯ ಮಾಡಬೇಕೆಂದು ನಾನು ಹೇಳುತ್ತೇನೆ.

ಆಮೇಲೆ, ಹರಿಜನರಿಗೆ ಸಹಾಯ ಮಾಡಬೇಕೆಂದು ಹೇಳಿ ತಾಲ್ಲೂಕ್ ಬೋರ್ಡಿನಲ್ಲಿ ಹಣವೊದಗಿಸಿ ಅದನ್ನು ಹಂಚುವ ಅಧಿಕಾರ ಕೊಟ್ಟಿದ್ದಾರೆ. ಈ ಹಣದಿಂದ ಎತ್ತು, ಕೈಗಾರಿಕಾ ಸಾಮಾನು, ವ್ಯವಸಾಯದ ಮುಟ್ಟುಗಳು, ಕುರಿಗಳು ಇವನ್ನೆಲ್ಲಾ ಕೊಟ್ಟು ಹರಿಜನರಿಗೆ ಸಹಾಯ ಮಾಡಬೇಕೆಂದು ತಾಲ್ಲೂಕ್ ಬೋರ್ಡಿಗೆ ಅಧಿಕಾರ ಕೊಟ್ಟಿದ್ದಾರೆ. ಹೀಗೆ ಕೊಟ್ಟಿರುವಾಗ, ತಾಲ್ಲೂಕ್ ಬೋರ್ಡಿನಲ್ಲಿರತಕ್ಕ ಮೆಂಬರುಗಳು ಯಾರು ಯಾರಿಗೆ, ಎಂತೆಂತಹವರಿಗೆ ಈ ಹಣ ವಿಲೇವಾರಿ ಮಾಡಿದ್ದಾರೆಂಬದನ್ನು ಸರ್ಕಾರದವರು ಸ್ವಲ್ಪ ಪರಿಶೀಲನೆ ಮಾಡಬೇಕು. ಏಕೆಂದರೆ ಎಷ್ಟೋ ಸಂದರ್ಭಗಳಲ್ಲಿ ತಾಲ್ಲೂಕ್ ಬೋರ್ಡಿನ ಹರಿಜನ ಮೆಂಬರುಗಳು ಈ ಹಣವನ್ನು ತಮ್ಮ ಸಂಬಂಧೀಕರಿಗೆ ಕೊಟ್ಟಿರುವುದುಂಟು. ಆದ್ದರಿಂದ ಸರ್ಕಾರದವರು ಗ್ರಾಂಟು ಕೊಟ್ಟಮೇಲೆ ಅದರಿಂದ ಯಾರು ಯಾರಿಗೆ ಸಹಾಯವಾಯಿತೆಂಬದನ್ನು ವಿಚಾರ ಮಾಡುವುದು ಅಗತ್ಯ. ಈಗ ತಾಲ್ಲೂಕ್ ಬೋರ್ಡುಗಳಲ್ಲಿ ನಡೆಯುತ್ತಿರುವುದು ಬಹಳ ಅನ್ಯಾಯ, ತಾವು ಪ್ರವಾಸ ಹೋದ ಕಾಲದಲ್ಲಿ ಈ ಸಂಬಂಧದಲ್ಲಿ ಪಟ್ಟಿ ತರಿಸಿ ಯಾರ್ಯಾರಿಗೆ ಕೊಟ್ಟಿದ್ದಾರೆಂಬದನ್ನು ತನಿಖೆಮಾಡಿಸಿ ನೋಡಬೇಕೆಂದು ಹೇಳುತ್ತೇನೆ.

ಹರಿಜನರ ವಿಷಯದಲ್ಲಿ ಇನ್ನೊಂದು ಸಂಗತಿಯನ್ನು ಹೇಳಬೇಕಾಗಿದೆ. ಈ ಜನರಿಗೆ ಇತರ ವಿಧದಲ್ಲಿ ಸಹಾಯ ಮಾಡುವುದಕ್ಕಿಂತಲೂ ವಿದ್ಯಾಭ್ಯಾಸ ಮುಂದುವರಿಸುವುದಕ್ಕೆ ಏನೇನು ಮಾಡಬೇಕೋ ಅದನ್ನು ಒದಗಿಸುವ

ಏರ್ಪಾಡು ಮಾಡಬೇಕು. ಈ ರೀತಿ ಸಹಾಯ ಮಾಡುವುದರಲ್ಲಿ ಹರಿಜನರಿಗೆ ಮಾತ್ರವೇ ಮಾಡಬೇಕೆಂದು ಹೇಳುವುದಿಲ್ಲ. ಅವರಂತೆಯೇ ಹಿಂದುಳಿದವರಾದ ಅಗಸರು, ಭಜಂತ್ರಿಯವರು, ಕುಂಬಾರರು, ವರ್ದಿಯವರು ಮುಂತಾಗಿ ಎಷ್ಟೋ ಜಾತಿಯವರಿದ್ದಾರೆ. ಇವರನ್ನೂ ಕೂಡ ಗಮನದಲ್ಲಿಟ್ಟುಕೊಂಡು, ರರಿಸ್ಟರ್ ಮುಂತಾದುವುಗಳನ್ನು ಒದಗಿಸಿ ಸಹಾಯ ಮಾಡುವುದರ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಸಮಾಜ ಕಲ್ಯಾಣದ ವಿಚಾರ. ಮದ್ದೂರ್ ತಾಲ್ಲೂಕಿನಲ್ಲಿ ಇದಕ್ಕಾಗಿ ಬಹಳ ದುಡ್ಡು ಖರ್ಚಾಗಿದೆಯೆಂದು ನಾನು ಕೇಳಿ ತಿಳಿದಿದ್ದೇನೆ. ಆದರೆ, ಈ ಬಾಬಿಗೆ ಏನು ಖರ್ಚಾಗಿದೆ, ಅದರಿಂದ ಎಷ್ಟರಮಟ್ಟಿನ ಸಹಾಯವಾಗಿದೆಯೆಂಬದನ್ನು ನೀವು ನೋಡುತ್ತಿಲ್ಲ. ಎಲ್ಲಾ ಕೋಮಿನವರಿಗೂ ಇದರ ಪ್ರಯೋಜನ ಲಭಿಸಬೇಕು. ಹಳ್ಳಿಯಲ್ಲಿ ಯಾರು ಯಾರಿಗೆ ಸಹಾಯವಾಗಿದೆಯೆಂಬುದನ್ನು ತಾವು ದಯವಿಟ್ಟು ನೋಡಿ. ದುಡ್ಡು ಖರ್ಚಾದ ಹಾಗೆ ನ್ಯಾಯವಾಗಿ ಜನರಿಗೆ ಅನುಕೂಲ ಲಭಿಸಿದೆಯೇ ಎಂಬದನ್ನು ತಾವು ನೋಡಿ. ಹಳ್ಳಿಯಲ್ಲಿ ಅನೇಕ ಹೆಂಗಸರು ವಿಧವೆಯರಾಗಿ ಕಷ್ಟದಲ್ಲಿದ್ದಾರೆ. ಗಂಡ ತಂದು ಹೊಟ್ಟೆಗೆ ಹಾಕದೆ ಕೂಲಿಮಾಡಿ ಹೊಟ್ಟೆ ಹೊರೆವ ಅನೇಕ ಹೆಂಗಸರಿದ್ದಾರೆ. ಆದ್ದರಿಂದ ಎಷ್ಟು ಜನ ಇಂಥವರು ಇದ್ದಾರೆ. ತಾವು ರಿಪೋರ್ಟ್ ತರಿಸಿ ನೋಡಿದ್ದೀರಾ? ಇನ್ನೊಂದೇನೆಂದರೆ ಸರ್ಕಾರದವರು ಕೆಲಸಗಳನ್ನು ಕೊಡುವುದರಲ್ಲಿ ಆಯಾ ಡಿಸ್ಟ್ರಿಕ್ಟಿನವರಿಗೇ ಆಸ್ಪದವಿಲ್ಲದಂತಾಗಿದೆ. ಉದಾಹರಣೆಗೆ ಬೆಳಗೊಳದಲ್ಲಿ ಒಂದು ಕಾಗದದ ಕಾರ್ಖಾನೆ ನಡೆಯುತ್ತಿದೆ. ಆ ಕಾರ್ಖಾನೆಯಲ್ಲಿ ಕೆಲಸಕ್ಕೆ ಸ್ಥಳದ ಜನರಿಗೇ ಅವಕಾಶವಿಲ್ಲವಾಗಿದೆ. ಆ ತಾಲ್ಲೂಕಿನಲ್ಲಿ ಜಮೀನು ಕಳೆದುಕೊಂಡಿರುವವರು ಅನೇಕರಿದ್ದಾರೆ ಅಂಥವರಿಗೆ ಕೂಡ ಅಲ್ಲಿ ಜಾಗವಿಲ್ಲ! ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ನೋಡಿ ; ಅಲ್ಲಿ ಆ ಡಿಸ್ಟ್ರಿಕ್ಟಿನವರನ್ನು ಬಿಟ್ಟು ಬೇರೆ ಎಲ್ಲಾ ಡಿಸ್ಟ್ರಿಕ್ಟಿನವರಿಗೂ ಕೆಲಸ ಇದೆ. ಎಲ್ಲಾ ಬೇರೆ ಕಡೆಯವರಿಗೇ ಸಿಕ್ಕುತ್ತದೆ. ಕೆಲಸ ಕೊಡುವುದಕ್ಕೇನೋ ಎಂಪ್ಲಾಯ್‌ಮೆಂಟ್ ಆಫೀಸಿದೆ. ಅಲ್ಲಿ ಕೆಲಸಕ್ಕೆ ರಿಜಿಸ್ಟರ್ ಮಾಡಿಸಿಕೊಂಡವರಿಗೇ ಕೆಲಸ ಕೊಡುತ್ತಾರಂತೆ. ಯಾರು ಯಾರೋ ಬೇರೆ ಡಿಸ್ಟ್ರಿಕ್ಟಿನವರು ಬಂದು ರಿಜಿಸ್ಟರ್ ಮಾಡಿಸಿಕೊಂಡು ಬಿಡುತ್ತಾರೆ. ಹೀಗಾಗಿ ಆ ಆಫೀಸಿನ ಮಗ್ಗುಲು ಮನೆಯಲ್ಲಿರುವವರಿಗೂ ಕೂಡ ಕೆಲಸ ಸಿಕ್ಕದ ಸಂದರ್ಭಗಳಿವೆ. ಎಷ್ಟೋ ಜನ ಅಲ್ಲಿನ ಹರಿಜನರೇ ಅಲ್ಲ, ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಬಂದು ಅಲ್ಲಿ ಕೆಲಸ ಕೇಳುವುದಕ್ಕೆ ಬರುತ್ತಾರೆ. ಅವರಿಗೆ ಕೆಲಸ ಕೊಡಿಸೋಣವೆಂದರೆ ಅವಕಾಶವೇ ಇಲ್ಲ. ಆದ್ದರಿಂದ ಆಯಾ ತಾಲ್ಲೂಕಿನಲ್ಲಿರುವ ಈ ಸಣ್ಣ ಕೆಲಸಗಳನ್ನಾದರೂ ಆಯಾ ತಾಲ್ಲೂಕಿನವರಿಗೆ ಅವರು ಯಾವ ಕೋಮಿನವರೇ ಆಗಿರಲಿ ಅವರಿಗೆ ಸಿಕ್ಕುವಂತೆ ಮಾಡಬೇಕೆಂದು ಹೇಳಿ, ಸಮಾಜ ಕಲ್ಯಾಣ ಶಾಖೆಯು ನಮ್ಮ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಈ ವರ್ಷ ಇನ್ನೂ ಹೆಚ್ಚಿನ ಕಾರ್ಯ ನಡೆಸಬೇಕೆಂದು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ Rural Development Demand No. 21, ಇದರ ಬಗ್ಗೆ ಕೆಲವೊಂದು ಸೂಚನಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಈಗಾಗಲೇ ಕೆಲವರು ಇಲ್ಲಿ ಹೇಳಿದಂತೆ ಮೂಲ ಪಾಠಶಾಲೆಗಳನ್ನೆಲ್ಲಾ General School ಆಗಿ ಎಂದರೆ ಎಲ್ಲ ವರ್ಗದ ಮಕ್ಕಳಿಗೂ ಅನುಕೂಲವಾಗುವಂತೆ ಒಟ್ಟಿಗೆ ಸ್ಥಾಪನ ಮಾಡಬೇಕು. ಹರಿಜನ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಯಲಿಕ್ಕೆಂದು ಸ್ಲೇಟು ಬುಕ್ಕುಗಳು, ಉಡುಪು ಇತ್ಯಾದಿಗಳನ್ನು ಕೊಡುತ್ತಿದ್ದಾರೆ. ಆದರೆ ಈ ಹುಡುಗರನ್ನು ಇತರ ಹುಡುಗರೊಡನೆ ಒಟ್ಟಿಗೆ ಕಲೆತು ವಿದ್ಯೆ ಕಲಿಯುವಂತೆ ಮಾಡಿದರೆ ಅವರ ಸಂಸ್ಕೃತಿ ಒಳ್ಳೆಯದಾಗಲಿಕ್ಕೆ ಸಾಧ್ಯವಾದೀತು. ಮದರಾಸು ಏರಿಯಾದಲ್ಲಿ ಈಗಲೂ ಕೆಲವು ಕಡೆ ಹರಿಜನರಿಗಾಗಿ ಪ್ರತ್ಯೇಕವಾದ ಸ್ಕೂಲುಗಳಿವೆ. ಆದುದರಿಂದ ಇಂತಹ ಸ್ಕೂಲುಗಳ ಬದಲಾಗಿ ಎಲ್ಲ ಸ್ಕೂಲುಗಳನ್ನು ಜನರಲ್ ಸ್ಕೂಲಾಗಿ ಮಾಡಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ. ಇದರಿಂದ ದಲಿತವರ್ಗದವರ ಅಭಿವೃದ್ಧಿಯು ಹೆಚ್ಚಾಗುವುದಕ್ಕೆ ಸಾಧ್ಯವಾದೀತು. ಹಿಂದುಳಿದವರೆಂದು ಈ ವರ್ಗದ ಜನರಿಗೆ ಸವಲತ್ತುಗಳನ್ನು ಕೊಡುತ್ತಿದ್ದಾರೆ. ಇಂತಹ ಸವಲತ್ತುಗಳನ್ನು ಜನರಲ್ ಸ್ಕೂಲುಗಳಿಗೂ ಒದಗಿಸಿಕೊಟ್ಟರೆ ಆಗಲೂ ಯಾವ ತೊಂದರೆಯೂ ಆಗಲಾರದು.

ದಲಿತವರ್ಗದಲ್ಲಿ ಗಿರಿಜನರ ಪರಿಸ್ಥಿತಿಯನ್ನು ಕೆಲವು ಭಾಗದಲ್ಲಿ ನೋಡಿದರೆ ಬಹಳ ವಿಷಾದವಾಗುತ್ತದೆ. ಅವರಿಗೆ ಸರಕಾರದಿಂದ ವಿಶೇಷ ಸವಲತ್ತುಗಳಿವೆ ಎಂದು ಹೇಳಿದರೂ ಅವರು ನಂಬುತ್ತಿಲ್ಲ. ಏಕೆಂದರೆ ಅವರು ಯಾವಾಗಲೂ ಗುಡ್ಡಗಾಡುಗಳಲ್ಲಿಯೇ ವಾಸಿಸುತ್ತಿರುತ್ತಾರೆ. ಅವರನ್ನು ಮುಂದೆ ತರುವುದಕ್ಕೆ ವಿಶೇಷ ಪ್ರಯತ್ನ ಮಾಡಬೇಕೆಂದು ಕೇಂದ್ರ ಸರಕಾರದವರು ಯೋಜನೆ ಹಾಕಿದ್ದಾರೆ. ರಾಜ್ಯ ಸರಕಾರದವರೂ ಸಹ ಅದನ್ನು ಅನುಸರಿಸುತ್ತಾರೆ. ಕೇಂದ್ರ ಸರಕಾರದವರೂ ಬೇಕಾದಷ್ಟು ಯೋಜನೆಗಳನ್ನು ಹಾಕಿದ್ದಾರೆ. ಅದರ ಪ್ರಕಾರ ನಮ್ಮ ರಾಜ್ಯ ಸರಕಾರದವರು ಸಹ ಈ ವರ್ಗದ ಜನರನ್ನು ಶ್ರದ್ಧೆ ವಹಿಸಿ ಮುಂದಕ್ಕೆ ತಂದು ಅವರ ಕಷ್ಟ ನಿವಾರಣೆ ಮಾಡಬೇಕೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇವರಿಗೆ ಸರಕಾರದಿಂದ ಸಿಕ್ಕಬೇಕಾದ ಸವಲತ್ತುಗಳೆಲ್ಲ ಸಿಕ್ಕುವಂತೆ ಪ್ರಯತ್ನ ಮಾಡಬೇಕು. ಈ ವರ್ಗದ ಜನರಿಗೆ ಇಷ್ಟು ಅನುಕೂಲತೆಗಳಿವೆ ಎಂದು ಹೇಳಿದರೆ ಅವರು ನಂಬುವುದೇ ಇಲ್ಲ. ಏಕೆಂದರೆ ಏನೋ ನಮ್ಮನ್ನು ವಂಚನೆ ಮಾಡಿ ಮೋಸಮಾಡುತ್ತಾರೆ ಎನ್ನುವ ಮನೋಭಾವನೆಯಿಂದ ಇವರು ಮುಂದೆ ಬರಲು ಹಿಂಜರಿಯುತ್ತಿದ್ದಾರೆ. ಇವರಲ್ಲಿ ಸಾಕಷ್ಟು ತಿಳಿವಳಿಕೆಯನ್ನು ಉಂಟು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಸೋಷಿಯಲ್ ವೆಲ್‌ಫೇರು ಇನ್ಸ್‌ಪೆಕ್ಟರುಗಳಿದ್ದಾರೆ. ಇವರಲ್ಲಿ ಕೆಲವರು ರಚನಾತ್ಮಕವಾದ ಕೆಲಸಗಳನ್ನು ಮಾಡುತ್ತಿಲ್ಲ. ಕೆಲವು ಆಫೀಸರುಗಳು ಅಲ್ಲಿಂದಿಲ್ಲಿಗೆ ಟೂರು ಮಾಡಿಕೊಂಡು ಶಾಲೆಗಳನ್ನು ನೋಡಿ ರಿಮಾರ್ಕು ಬರೆದು ಬರುತ್ತಿದ್ದಾರೆ. ಇದು ಬಹು ವಿಷಾದಕರವಾದ ಸಂಗತಿ. ಗರ್ಲ್ಸ್ ಹಾಸ್ಟಲುಗಳೆಂದಿವೆ. ಕೆಲವು ಕಡೆಗಳಲ್ಲಿ ಇಂತಹ ಹಾಸ್ಟಲುಗಳಲ್ಲಿ ಸಾಕಷ್ಟು ಹುಡುಗಿಯರು ಇರುವುದಿಲ್ಲ. ಈ ಅಧಿಕಾರಿಗಳು ಈ ಹಾಸ್ಟಲುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹುಡುಗಿಯರನ್ನು ತಂದು ಸೇರಿಸಿ ಮುಂದಕ್ಕೆ ತರಲಿಕ್ಕೆ ಪ್ರಯತ್ನ ಮಾಡಬೇಕು. ಈ ತರಹದ ರಚನಾತ್ಮಕವಾದ ಕೆಲಸವನ್ನು ಮಾಡಿದರೆ ಈ ಜನಕ್ಕೆ ಅನುಕೂಲವಾಗುತ್ತದೆ. Women Welfare Centres ಎಂದಿವೆ. ಈ ಸೋಷಿಯಲ್ ವೆಲ್‌ಫೇರು ಇನ್ಸ್‌ಪೆಕ್ಟರುಗಳು ಇವನ್ನೆಲ್ಲಾ ಸರಿಯಾಗಿ visit ಮಾಡುತ್ತಿಲ್ಲ. ಕೇವಲ ಒಂದು ಎರಡು ವರ್ಷ

(ಶ್ರೀ ಎಸ್. ಸುಬ್ಬಯ್ಯಾ ನಾಯಕ್)

ಗಳೊಳಗೆ ಹಳ್ಳಿಯಿಂದ ಹಳ್ಳಿಗೆ ಟ್ರಾನ್ಸ್‌ಫರ್ ಮಾಡುವುದು ಸರಿಯಲ್ಲ. ಇದು ಬಹಳ ವಿಷಾದದ ಸಂಗತಿ. ಈ ಗುಡ್ಡಗಾಡಿನ ಜನರನ್ನು ಯಾವುದೇ ರೀತಿಯಿಂದಲಾದರೂ ಮುಂದಕ್ಕೆ ತರಲಿಕ್ಕೆ ಸರಕಾರದವರು ಸೂಕ್ತ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. 170ಕ್ಕಿಂತಲೂ ಹೆಚ್ಚು Wcmen Welfare Centres ಇವೆ. ಇದಕ್ಕಾಗಿ ಒಬ್ಬರು ಅಸಿಸ್ಟೆಂಟ್ ಡೈರೆಕ್ಟರ್ ಫಾರ್ ವಿಮೆನ್ ವೇಲ್‌ಫೇರ್ ಎಂದಿದ್ದಾರೆ. ಇವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಟ್ಟಿರುವಂತೆ ಕಾಣುವುದಲ್ಲ. ಇವರು ಒಬ್ಬರು ಮಹಿಳಾ ಅಧಿಕಾರಿಗಳಾಗಿದ್ದಾರೆ. ಇವರು ಸ್ಟೇಟಿನಲ್ಲೆಲ್ಲಾ ತಿರುಗಾಡಬೇಕಾಗುತ್ತದೆ. ಇಂತಹವರಿಗೆ ತಿರುಗಾಡಲು ವಾಹನ ಸೌಕರ್ಯವಿಲ್ಲ. ಇವರಿಗಾಗಿ ಒಂದು ವ್ಯಾನ್ ಕೊಡಬೇಕು. ಹಳ್ಳಿಗಾಡಿನಲ್ಲೆಲ್ಲಾ ಸಂಚರಿಸಬೇಕಗುತ್ತದೆ. ಇದಕ್ಕಾಗಿ ಒಂದು ವಾಹನವನ್ನು ಇವರಿಗೆ ಕೊಡುವುದು ಅಗತ್ಯ.

ಆರ್ಥಿಕ ಸ್ಥಿತಿಯಲ್ಲಿ ಹಿಂದೆ ಉಳಿದಿರುವ ಹರಿಜನ ಗಿರಿಜನರಿಗಾಗಿ ಬಜೆಟ್ಟಿನ ಒಟ್ಟು ಮೊತ್ತದಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ವಿದ್ಯಾಭ್ಯಾಸಕ್ಕೆ ಕೊಡಬೇಕು. ಈಗ ಕೊಟ್ಟಿರುವುದು ಸಾಕಷ್ಟಿಲ್ಲ. ಇದರಂತೆ ಸ್ಕಾಲರ್‌ಷಿಪ್ಪುಗಳು ಅರ್ಧ ಅಂಶ ವಿದ್ಯಾರ್ಥಿಗಳಿಗೂ ಸಿಕ್ಕುತ್ತಿಲ್ಲ. ಈಗ ಸ್ಕಾಲರ್‌ಷಿಪ್ಪುಗಳನ್ನು ಸರಿಯಾಗಿ ಕೊಡುತ್ತಿಲ್ಲ. ಇದನ್ನು ಶಾಲೆಗೆ ಹೋಗುವ ಮಕ್ಕಳ ಮನೆಗಳಿಗೇ ಕೊಡುವಂತಹ ಕಾರ್ಯಕ್ರಮವನ್ನು ತರಬೇಕೆಂದು ಸಲಹೆ ಮಾಡುತ್ತೇನೆ. ಈಗಾಗಲೇ ಹರಿಜನರಿಗೆ ಮಾತ್ರ ಮೆರಿಟ್ ಸ್ಕಾಲರ್‌ಷಿಪ್ಪು ಕೊಡುತ್ತಿದ್ದಾರೆ. ಇದನ್ನು ಗಿರಿಜನ ವಿದ್ಯಾರ್ಥಿಗಳಿಗೂ ಕೊಡಬೇಕು. ಗಿರಿಜನರಿಗೆ ನಂಬಿಕೆಬರುವ ರೀತಿಯಲ್ಲಿ ತಿಳಿಸಿ ಇವರನ್ನು ಮುಂದಕ್ಕೆ ತರಲು ತಕ್ಕ ಪ್ರಯತ್ನವನ್ನು ಕೈಗೊಳ್ಳಬೇಕು ಹರಿಜನ ಗಿರಿಜನರಿಗಾಗಿ ಸಂಘ ಸಂಸ್ಥೆಗಳಿವೆ ಮತ್ತು ಹಾಸ್ಟಲ್ಲುಗಳಿವೆ Women Welfare Centres ಗಳಿವೆ. Mobile Health Units ಗಳಿವೆ. ಇವುಗಳಲ್ಲಿ ಕೆಲಸಮಾಡುತ್ತಿರುವ ನೌಕರರುಗಳಿಗೆ ನಾಲ್ಕೈದು ತಿಂಗಳುಗಳ ಕಾಲ ಸಂಬಳ ಕೊಡದೇ ಇರುವ ಸ್ಥಿತಿ ಬರುತ್ತಿದೆ. ಈ ರೀತಿಯಾಗದೆ ಇಂತಹ ಪ್ರಾಮುಖ್ಯವಾದ ನೌಕರಿಯಲ್ಲಿರುವವರಿಗೆ ಸಲ್ಲಬೇಕಾದ ಸಂಬಳ ಬೇಗ ಮುಟ್ಟುವಂತೆ ಮಾಡಬೇಕು. ಕೆಲವು ಹಾಸ್ಟಲ್ಲುಗಳಲ್ಲಿ ಅಡಿಗೆಯವನಿಗೆ ತಿಂಗಳಿಗೆ ಅರವತ್ತು ರೂಪಾಯಿಗಳಷ್ಟು ಸಂಬಳ ಕೊಡುತ್ತಿದ್ದಾರೆ. ಅದೇ ರೀತಿ ಇರುವ ಇನ್ನು ಕೆಲವು ಹಾಸ್ಟಲ್ಲುಗಳಲ್ಲಿರುವ ಅಡಿಗೆ ಕೆಲಸವನ್ನು ಮಾಡುತ್ತಿರುವವರಿಗೆ 38 ರೂಪಾಯಿಗಳಷ್ಟು ಸಂಬಳ ಕೊಡುತ್ತಿದ್ದಾರೆ. ಇದನ್ನು ಬೇಗನ ಈಕ್ವೇಷನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದರಲ್ಲಿ ಲೀಗಲ್‌ಏಡ್ ಎನ್ನುವ ಒಂದು ಹೆಡ್ ಇದೆ. ಇದರಂತೆ ಖರ್ಚು ಆಗದಿರಬಹುದು. ಕೆಲವೊಂದು ವೇಳೆ ಈ ಬಾಬಿನಿಂದ ಸಹಾಯ ಪಡೆಯಬೇಕೆಂದು ಕೇಳಿದವರಿಗೆ ಸಿಕ್ಕಲಿಲ್ಲ. ಇದರ ಆವಶ್ಯಕತೆ ಇದೆ. ಅವೂ ಲ್ಯಾಂಡು ರಿಫಾರಂ ಕಾನೂನನ್ನು ತರುವ ಈ ಸಮಸ್ಯಾತ್ಮಕ ಕಾಲದಲ್ಲಿ ಹರಿಜನ ಗಿರಿಜನರ ಬಗ್ಗೆ ಕೊಟ್ಟಿರುವ ಲೀಗಲ್ ಏಡನ್ನು ಕೊಡದಿರುವುದು ಸರಿಯಾಗಲಾರದು. ಲೀಗಲ್‌ಏಡ್ ಎನ್ನುವುದು ಹರಿಜನರಿಗೆ ಮಾತ್ರವಲ್ಲದೆ ಗಿರಿಜನರಿಗೆ ಮತ್ತು ಇತರ ಎಲ್ಲ ಬಡಜನರಿಗೂ ದೊರಕುವಂತೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಇದೇ ಸಭೆಯಲ್ಲಿ ಹಿಂದಿದ್ದ ಮಂತ್ರಿವರ್ಯರು ಷೆಡ್ಯೂಲ್ಡ್ ಟ್ರೈಬ್ಸ್‌ಗಳಿಗೇ ಒಂದು ಪ್ರತ್ಯೇಕವಾದ ಬೋರ್ಡನ್ನು ಮಾಡಬೇಕೆಂದು ಕೇಳಿಕೊಂಡಿದ್ದಕ್ಕೆ ಆಗಲಿ ಎಂದು ಹೇಳಿದ್ದರು. ಆದರೆ ಆ ಬೋರ್ಡು ಇದುವರೆಗೂ ಜಾರಿಗೆ ಬಂದಿಲ್ಲ. ಷೆಡ್ಯೂಲ್ಡ್ ಟ್ರೈಬ್ಸ್‌ಗಳವರು ಯಾವ ಒಂದು ವಿಚಾರದಲ್ಲೇ ಆಗಲಿ ಆರ್ಥಿಕವಾಗಿ ಆಗಲಿ ವಿದ್ಯಾಭ್ಯಾಸದಲ್ಲಾಗಲೀ ಹೀಗೆ ಪ್ರತಿಯೊಂದು ಬಾಬಿನಲ್ಲೂ ಬಹಳ ಹಿಂದುಳಿದಿದ್ದಾರೆ. ಅವರ ಪರಿಸ್ಥಿತಿ ಹೀಗೆ ಬಹಳ ವಿಭಿನ್ನವಾಗಿರುತ್ತದೆ. ಆದುದರಿಂದಲೇ ನಾನು ಅವರಿಗೊಂದು ಪ್ರತ್ಯೇಕ ಬೋರ್ಡನ್ನು ರಚನೆ ಮಾಡಿ ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ಆದೇಶವೂ ಸಹ ಹೀಗೇ ಇರುತ್ತದೆ. ಆದರೆ ಈ ಹೊತ್ತು ನಮ್ಮ ರಾಜ್ಯ ಸರ್ಕಾರದವರು ಈ ಷೆಡ್ಯೂಲ್ಡ್ ಟ್ರೈಬಿನಲ್ಲಿ ನಾಮೆಡಿಕ್ ರೇಸಿನವರನ್ನು ಎಕ್ಸ್‌ಕ್ರಿಮಿನಲ್ ಟ್ರೈಬ್ಸ್ ಜನಗಳನ್ನೂ, ಒಡ್ಡರನ್ನೂ, ಲಂಬಾಣಿಗಳನ್ನೂ ಹೀಗೇ ಎಷ್ಟೋ ಪಂಗಡಗಳನ್ನು ಸೇರಿಸಿದ್ದಾರೆ. ಹೀಗಾಗಿ ಈ ದಿವಸ ಯಾರು ನಿಜವಾಗಿ ಈ ಷೆಡ್ಯೂಲ್ಡ್ ಟ್ರೈಬ್‌ಗೆ ಸೇರಿದ್ದಾರೋ ಅವರಿಗೆ ಯಾವ ಪ್ರಯೋಜನಗಳೂ ದೊರೆಯದಂತಾಗಿದೆ. ಇನ್ನು ಈ ಷೆಡ್ಯೂಲ್ಡ್ ಟ್ರೈಬ್ಸ್‌ಗಳ ಕ್ಷೇಮಾಭಿವೃದ್ಧಿಗಾಗಿ ಕೇವಲ ಎಂ.ಎಲ್.ಎ. ಗಳನ್ನು ಆ ಸಮಿತಿಗೆ ಸೇರಿಸಲಾಗುತ್ತಿದೆ. ಇದು ಸಾಲದು. ಇವರ ಜೊತೆಗೆ ಇತರ ವರ್ಗದ ಸಮಾಜ ಕಾರ್ಯಕರ್ತರುಗಳನ್ನೂ ಸಮಾಜ ಹಿತೈಷಿಗಳನ್ನೂ ಸೇರಿಸಿಕೊಂಡು ಕೆಲಸ ಮಾಡಿದರೆ ಈ ಕಾರ್ಯ ಇನ್ನೂ ಉತ್ತಮವಾಗಿ ನಡೆಯಬಹುದೆಂದು ನಾನು ತಿಳಿಸುತ್ತೇನೆ. ಸಾಮಾನ್ಯವಾಗಿ ಷೆಡ್ಯೂಲ್ಡ್ ಟ್ರೈಬಿನ ಜನರಿಗೆ ಇನ್ನೂ ತಿಳಿವಳಿಕೆ ಬಹಳ ಕಡಮೆ. ಆದುದರಿಂದ ಇವರ ಬಗ್ಗೆ ಪ್ರಚಾರ ನಡೆಸತಕ್ಕ ಬಾಬಿಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕು. ಆಗೇನಾದರೂ ಇದರಿಂದ ಸ್ವಲ್ಪ ಸಹಾಯವಾಗಬಹುದು. ಒಂದೊಂದು ಜಿಲ್ಲೆಗೂ ನಾಲ್ಕಾರು ಪ್ರಚಾರ ಸಮಿತಿಗಳಿರಬೇಕು. ತಾಲ್ಲೂಕ್ ಮಟ್ಟದಲ್ಲೂ ಒಂದೊಂದು ತಾಲ್ಲೂಕಿನಲ್ಲಿ ಒಂದು, ಎರಡು ಪ್ರಚಾರದ ಕಾನ್‌ಫರೆನ್ಸ್‌ಗಳನ್ನು ನಡೆಸಬೇಕು. ಪ್ರಚಾರಕರ ಸಂಖ್ಯೆ ಜಾಸ್ತಿ ಆಗಬೇಕು. ಅಥವಾ ಈಗಿರತಕ್ಕ ಪ್ರಚಾರಕರೇ ಈ ಕಾರ್ಯವನ್ನು ಇನ್ನೂ ಹೆಚ್ಚಾಗಿ ಪ್ರಚಾರ ಮಾಡುವಂತೆ ಒತ್ತಾಯ ಮಾಡಬೇಕು. ಆದರೆ ಅದೇನು ಕಾರಣದಿಂದಲೋ ಈ ದಿವಸ ಸರ್ಕಾರದವರು ಒದಗಿಸಿರತಕ್ಕ ಸೌಲಭ್ಯಗಳನ್ನು ಅನುಭವಿಸಲು ಅವರಿಗೆ ಸವಲತ್ತೇ ಇಲ್ಲವೊ ಅಥವಾ ಅವರಿಗೆ ಆ ಭಾಗ್ಯವೇ ಇಲ್ಲವೋ ಅಥವಾ ಅವರಿಗೆ ಈ ಅವಕಾಶಗಳಲ್ಲಿ ಇರುವುದು ಗೊತ್ತೇ ಇಲ್ಲವೋ ಒಂದೂ ಗೊತ್ತಾಗುತ್ತಿಲ್ಲ. ಸರ್ಕಾರದವರು 1951ನೇ ಸೆನ್ಸಸ್ ಪ್ರಕಾರ ಲೆಕ್ಕ ಹಾಕಿ ನಮ್ಮ ರಾಜ್ಯದಲ್ಲಿ ಒಂದು ಲಕ್ಷ ಚಿಲ್ಲರೆ ಈ ಷೆಡ್ಯೂಲ್ಡ್ ಟ್ರೈಬ್ಸ್ ಜನಗಳಿದ್ದಾರೆಂದು ತಿಳಿಸಿದ್ದಾರೆ. ಆದರೆ ನನ್ನ ತಿಳಿವಳಿಕೆಯ ಪ್ರಕಾರ ಅವರು ಈ ಸಂಖ್ಯೆಗಿಂತ ಇಮ್ಮಡಿ-ಮುಮ್ಮಡಿಯಾಗಿದ್ದಾರೆಂದು ಹೇಳುತ್ತೇನೆ. ಇಂಥಾ ದೊಡ್ಡ ಜನಾಂಗದಲ್ಲಿ ಒಬ್ಬ ಪದವೀಧರರಿಲ್ಲ. ಅಷ್ಟೇ ಅಲ್ಲ ಕಾಲೇಜಿನಲ್ಲಿ ಓದತಕ್ಕ ಒಬ್ಬಿಬ್ಬರು ಹುಡುಗರು ಸಹ ಇಲ್ಲವೆನ್ನುವಾಗ ಈ ಜನಾಂಗ ಎಷ್ಟರಮಟ್ಟಿಗೆ ವಿದ್ಯೆಯಲ್ಲಿ ಹಿಂದುಳಿದಿದ್ದಾರೆಂಬುದು ಕಾಣುತ್ತಿದೆ. ಆದುದರಿಂದ ಈ ಜನಾಂಗದವರೂ ಸಹ ವಿದ್ಯೆಯಲ್ಲಿ ರಾಜ್ಯದಲ್ಲಿರತಕ್ಕ ಇತರ ಜನಾಂಗಗಳ ಸಮಕ್ಕೆ ಶೇಕಡ ೨೦ ರಷ್ಟು ಬರುವಂತೆ ಮಾಡಲು ಇವರಿಗೆ ಸ್ಪೆಷಲ್ ಸೌಕರ್ಯಗಳನ್ನು ಒದಗಿಸಬೇಕು. ಮೇಲಾಗಿ ಸರ್ಕಾರದಲ್ಲಿ ನೌಕರಿಗಳನ್ನು

ಕೊಡುವಾಗ ಈ ಜನಾಂಗದವರು ಇತರರ ಮಟ್ಟಕ್ಕೆ ಬರಲು ಸಾಧ್ಯವಿಲ್ಲದ್ದರಿಂದ ಇವರು ಎಸ್.ಎಸ್.ಎಲ್.ಸಿ. ಯಲ್ಲಿ ತೇರ್ಗಡೆಯಾಗದಿದ್ದರೂ ಎಸ್.ಎಸ್.ಎಲ್.ಸಿ. ತೇರ್ಗಡೆಯಾದವರ ಸರಿಸಮಾನವೆಂದು ಭಾವಿಸಿ ಈ ವರ್ಗದ ಹುಡುಗರಿಗೆ ಕೆಲಸಗಳನ್ನು ಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ಮೊಬೈಲ್ ಹೆಲ್ತ್ ಯೂನಿಟ್‌ಗಳಲ್ಲಿ ಮಿಡ್‌ವೈಫ್ಸ್ ಇದ್ದಾರೆ. ಅವರಿಗೆ ಈ ದಿವಸ ಆಯಾಗಳ ಸಹಾಯವಿಲ್ಲ. ಅವರು ಆರು ಎಂಟು ಮೈಲಿ ಕಾಡುಗಳಲ್ಲಿ ಮಲೆನಾಡಿನಲ್ಲಿ ತಿರುಗಾಡಬೇಕಾಗುತ್ತದೆ. ಒಬ್ಬೊಬ್ಬರೇ ಹೋಗಿ ಬರಬೇಕಾದರೆ ಬಹಳ ತೊಂದರೆಗಳಿವೆ. ಮದ್ರಾಸಿನಲ್ಲಿ ಅಲ್ಲಿಯ ಮಿಡ್‌ವೈಫ್ಸ್‌ಗಳಿಗೆ ಆಯಾಗಳನ್ನು ಕೊಟ್ಟಿದ್ದಾರೆ. ಇಲ್ಲಿಯೂ ಸಹ ಈ ಮೊಬೈಲ್ ಹೆಲ್ತ್ ಯೂನಿಟ್‌ಗಳಲ್ಲಿರುವ ಮಿಡ್‌ವೈಫ್ಸ್‌ಗಳಿಗೆ ಆಯಾಗಳನ್ನು ಸಹಾಯಕ್ಕೆ ಒದಗಿಸಿಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ಇಲ್ಲಿ ಕೆಲವರು ಈ ಹರಿಜನ-ಗಿರಿಜನರ ಭೂಮಿಯನ್ನು ಇತರರು ಕೊಂಡುಕೊಳ್ಳುತ್ತಿದ್ದಾರೆಂದು ಹೇಳಿದರು. ಇದಕ್ಕೆ ಮದ್ರಾಸಿನಲ್ಲಿ ಅವಕಾಶವಿಲ್ಲ. ಅಲ್ಲಿ ಹರಿಜನರ ಭೂಮಿಯನ್ನು ಯಾರೂ ಕೊಂಡುಕೊಳ್ಳುವ ಹಾಗಿಲ್ಲ. ಇಲ್ಲಿಯೂ ಹಾಗೇ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—(Addressing Sri V. S. Patil) I request the Honourable Member to finish his speech as early as possible, at least within ten minutes.

†Sri V. S. PATIL (Belgaum I).—At least fifteen minutes, Sir. So far as these demands are concerned, I will speak on Demands Nos. 21, 23, 6 and 8. As the time is very short, I will try to be as brief as possible on these various Demands. The first Demand is No. 21, *i.e.*, Rural Development. So far as this Demand is concerned, I have heard Honourable Members speak of scheduled castes and tribes, *i.e.*, Harijans and Girijans. But none of them, it appears, has touched the question of criminal tribes. On our side, we have got certain communities, which are designated as criminal tribes and they are forced by circumstances, by their situation and by the then prevailing conditions to commit crimes. They are known as Naiks on our side and they are practically always living on the hill sides or in forests. Their main business was to commit thefts or robberies and dacoities and maintain themselves. During the British regime they were styled as criminal tribes and most of them were seggregated in colonies. After independence, our Government have released them and styled them as free colonist, because they have become free. Free from what? That is the point to be considered. Free colonists or Harijans or these good and beautiful names do not come to their help to improve their local conditions. These criminal tribes are very honest and I can say on the floor of this House that rarely any community is so honest as they. If they once promise anything to you, they will give up even their lives or anything they have got to fulfil their promise. But such honest people have been forced to commit these crimes, because, they were not given any land. All the land which their forefathers possessed were usurped by others by cunning or by some other means and so these people have been driven into the forests to eke out their livelihood. One thing which I can say, Sir, is that the policy of the Congress Government on prohibition has come to their help. They have taken up to this lucrative business and during the last fifteen years, at least on our side, thefts, dacoities and robberies have been reduced to practically nothing. There are no dacoities now because they are following this small scale business on a very large scale. The British Government, *i.e.*, the Bombay Government, looking to the incidence of incessant committing of this illicit distillation had imposed more than a lakh of rupees as collective fine on a dozen villages. But our Government is very kind. They have wiped out those fines and exempted them.

4-00 P.M.

This shows how keen the Congress Government is about the enforcement of prohibition. That is why I should like to suggest that the children of these people must be taken out of those surroundings and educated. If you keep them under those very conditions, then I do not think it is possible for us to have honest and law-abiding citizens out of those children. The best course would be to segregate them from their criminal surroundings and to keep them away from their parents and educate them. This must be done immediately otherwise it would be very difficult to improve that community.

(SRI V. S. PATIL)

Then there is another thing. We are trying to improve the backward and down-trodden communities, but may I say that the present Government of this State is trying to create another community which would be termed in course of time as the most backward community, namely the Maratha community. They are being neglected every where purposely and intentionally. This Government is trying to put them down in every field or sphere of life That is why I say that even though we are trying to improve the other communities our Government is trying to create some more communities to be placed under the heading of backward communities.

Then coming to the demand, State Excise Duties, a perusal of page (15) of the budget memorandum will show that our revenue is decreasing year by year while the expenditure on this is increasing every year. This is really a strange thing. Instead of keeping the present prohibition policy in force, the Congress Party should think twice or thrice to make some improvement upon it if they cannot completely wipe it out at once. They may not be able to wipe it out at once, but at least it can be done in stages. When we are running so heavily in debts, when we are having so many big schemes and plans to be enforceed, when money is in short supply, it is high time that we thought of getting more money by doing away with prohibition. We find in to-day's news paper that in the Madras State there has been a flare-up against the increase in taxes. That may come here also because it is a contagious disease. So I should like to request Government that in order to have more money for the various plans and schemes, we should try to find out some way out of the present prohibition policy and collect more money. The question of drinking is a luxury. When we are taking luxuries here, why should we not tax this drinking also as luxury and increase our revenue ? If that is done I think we need not go for raising loans and put our future generation into debts.

Then coming to the next demand Registration, I would like to say that in Bombay area, some taluks were reserved for photo registration. This is a very good system because you get the certified copy by photograph and we can get the actual words in the original documents copied by photograph. This is a very easy and permanent method which can overcome so many difficulties. At Belgaum practically 95 per cent of the documents registered in the Office are in Marathi. When we apply for a certified copy there is no person knowing reading and writing Marathi and one has to wait for months to get such a certified copy because there is no person there who can read and write Modi script correctly. So if we introduce throughout the whole State this system, certainly all these difficulties of appointing such candidates for copying that script will be removed. The signature, the thumb impression and everything can be copied as it is in the original. In law courts when a question arises as to the genuineness of the documents, it becomes very easy to prove it if the copy is a photo copy. So we should try to introduce this sort of registration instead of the present system of writing by hand.

Then coming to Other Taxes and Duties, the main collection is from taxes on consumption of electricity. I have no objection to Government imposing such taxes, but they must also take into consideration what is being charged by the companies to the consumers. We at Belgaum and other places where there are private concerns supplying electricity have to pay charges which are horribly double or treble the charges paid by people in Mysore and Bangalore. So where the charges of the electricity companies are higher, there the taxes of Government must be lowered or exemption from such taxes must be given in those areas. That will bring us on par with the consumers of electricity in Bangalore and Mysore. Here a man who consumes ten units pays a certain amount, but for similar consumption the man at Belgaum and other places has to pay double that

amount. This disparity between the amount paid by the consumer in Bangalore and the amount paid by the consumer in Belgaum and other places must be wiped out by Government. The remedy for that is that the tax levied on those parts must be either reduced or the Government must force the companies to bring down their rates to the level of the rates charged by Government here. For several years we are trying to get injustice done away with. I hope Government will pay attention to this and remove this disparity and put us on a par with the other people in the State.

ಶ್ರೀಮತಿ ಚಂಪಾಬಾಯಿ ಭೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಬೇಡಿಕೆಗಳಿಗೆ ನನ್ನ ಅನುಮೋದನೆಯನ್ನು ಕೊಡುತ್ತ ನಾನು ಒಂದೆರಡು ಸಲಹೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಈ ಸರ್ಕಾರ ಬಂದು ಹದಿನೈದು ವರ್ಷಗಳ ಮೇಲಾಯಿತು. ಹರಿಜನರ ಉದ್ಧಾರ ಬರೀ ಬಾಯಿಮಾತಿನಲ್ಲಿ ನಡೆದಿದೆಯೇ ಹೊರತು ಕೃತಿಯೊಳಗೆ ಏನೂ ಆಗಿಲ್ಲವೆನ್ನುವುದು ನನ್ನ ಅಭಿಪ್ರಾಯ.

ಹರಿಜನರ ಮಕ್ಕಳಿಗೆ ಪುಸ್ತಕ, ಅರಿವೆ, ಪಾಟಿ ಇವುಗಳನ್ನು ಕೊಡುವುದರಿಂದ ಅವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಪ್ರತಿಯೊಬ್ಬ ಹರಿಜನರ ಮಕ್ಕಳಿಗೂ, ಅವರು ಪ್ರೈಮರಿ ಶಾಲೆಯಲ್ಲಿ ಅಥವಾ ಹೈಸ್ಕೂಲಿನಲ್ಲಿ ಓದುತ್ತ ಇರಲಿ, ಹದಿನೈದು ರೂಪಾಯಿ ಸ್ಕಾಲರ್‌ಶಿಪ್ ಕೊಡಬೇಕು ಮತ್ತು ಹರಿಜನರ ಉದ್ಧಾರಮಾಡಬೇಕು ಎಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಹದಿನೈದು ವರ್ಷಗಳಿಂದ, ರಾಮರಾಜ್ಯ ಮಾಡುತ್ತೇವೆಂದೂ ಹರಿಜನರ ಕಲ್ಯಾಣ ಮಾಡುತ್ತೇವೆಂದೂ ಹೇಳುತ್ತಿದ್ದಾರೆ. ಆದರೆ ಏನೊಂದೂ ಆಗಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಶ್ರೀಮತಿ ಯಶೋಧರಮ್ಮನವರು ಒಂದು ಕಂದನತಾಯಿಯಾಗಿ ಅವರು ಸಮಾಜದ ತಾಯಿಯಾಗಲಿ ಎಂದು ಸಮಾಜ ಕಲ್ಯಾಣ ಖಾತೆಯನ್ನು ಒಪ್ಪಿಸಿದ್ದಾರೆ. ಈ ಖಾತೆಯಲ್ಲಿ ಏನು ಅನನುಕೂಲತೆಯಾಗಿವೆ, ಹಣವೆಲ್ಲ ಹೇಗೆ ಖರ್ಚಾಗಿದೆ ಎಂಬುದನ್ನು ಪರಿಶೀಲಿಸಬೇಕು. 20 ವರ್ಷಗಳಿಂದ ಸಮಾಜ ಕಲ್ಯಾಣ ಎಂದು ಹೇಳಿಕೊಂಡು ಹೊರಟಿದ್ದಾರೆಯೋ ಆ ಕಲ್ಯಾಣ ಆಗುತ್ತಿದೆ ಎಂದು ನನಗನ್ನಿಸುವುದಿಲ್ಲ. ನೂರರಲ್ಲಿ ಹತ್ತು ಭಾಗ ಕೂಡ ಸಮಾಜ ಕಲ್ಯಾಣವಾಗಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಡಿಸ್ಟ್ರಿಕ್ಟ್‌ಗಳಲ್ಲಿ ಕೆಲವು ಸಮಾಜ ಕೇಂದ್ರಗಳನ್ನು ತೆಗೆಯುತ್ತಿದ್ದಾರೆ ಕೆಲವು ಕಡೆ ಹೊಲಿಗೆ ಕೇಂದ್ರಗಳನ್ನು ತೆಗೆದಿದ್ದಾರೆ. ಇಲ್ಲಿ ತರಪೇತು ಪಡೆಯಲು ಎಲ್ಲರನ್ನೂ ಗಂಡ ಇದ್ದ ಹೆಣ್ಣು ಮಕ್ಕಳನ್ನೇ ತರುತ್ತಿದ್ದಾರೆ. ಗಂಡ ಇಲ್ಲದ ಹೆಣ್ಣು ಮಕ್ಕಳನ್ನೂ ಹೆಚ್ಚು ಸಂಖ್ಯೆಯಲ್ಲಿ ಸೇರಿಸಿಕೊಂಡು ಅವರಿಗೆ ಶಿಕ್ಷಣವನ್ನು ಕೊಡಬೇಕು. ಈ ಹೊಲಿಗೆ ಕೇಂದ್ರಗಳಲ್ಲಿ ಗಂಡುಮಕ್ಕಳನ್ನು ಸೂಪರ್‌ವೈಸ್ ಮಾಡುವ ಕೆಲಸಕ್ಕೆ ನೇಮಿಸಬಾರದೆಂದು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕಾಲೇಜ್‌ನೊಳಗೆ ಏನಾಗಿದೆ ಎಂದರೆ 25 ರೂಪಾಯಿ ಸ್ಕಾಲರ್‌ಶಿಪ್ ಕೊಡುತ್ತೇವೆಂದು ಹೇಳುತ್ತಾರೆ. ವರ್ಷ ಆಖೈರಾದರೂ ಇನ್ನೂ ತನಕ 25 ನಯೇ ಪೈಸೆ ಮಕ್ಕಳಿಗೆ ಸಿಕ್ಕಿಲ್ಲ. ಅವರಿಗೆ ಪ್ರತಿ ತಿಂಗಳು ಸಿಕ್ಕುವಂತೆ ಏರ್ಪಾಡು ಮಾಡಬೇಕು.

ಹೈಸ್ಕೂಲುಗಳಲ್ಲಿ ಒಂದು ಮಗುವನ್ನು ಶಾಲೆಯಲ್ಲಿ ಸೇರಿಸಲಿಕ್ಕೆ ಹೋದರೆ ಹದಿಮೂರು ರೂಪಾಯಿ ಫೀ ತುಂಬಬೇಕು. ಇದು ಹಿಂದೆ ಇದ್ದಿಲ್ಲ. ಇಂಥ ಕಾರ್ಯಗಳಿಂದ ಹರಿಜನರ ಉದ್ಧಾರವಾಗುವುದಿಲ್ಲ. ಕಾರಣ ಹೈಸ್ಕೂಲು ಪ್ರವೇಶದ ಕಾಲಕ್ಕೆ ಫೀ ತೆಗೆದುಕೊಳ್ಳಬಾರದು.

ಸರ್ಕಾರದವರನ್ನು ಈಗ ಕೇಳಿಕೊಳ್ಳುವುದೇನೆಂದರೆ ಹೈಸ್ಕೂಲಿನಲ್ಲಿ 13 ರೂಪಾಯಿ ಫೀ ತಗೆದುಕೊಳ್ಳುವುದನ್ನು ಕಡಮೆಮಾಡಬೇಕು. ಈಗ ಕಾಲೇಜಿನಲ್ಲಿ 40 ರೂಪಾಯಿ ಪ್ರಕಾರ ಕೊಡುವ ಸ್ಕಾಲರ್‌ಶಿಪ್ಪನ್ನು 55 ರೂಪಾಯಿ ಮಾಡಬೇಕು, ಅಲ್ಲದೆ ಪುಸ್ತಕ, ಪಾಟಿ ಇವುಗಳ ಜೊತೆಗೆ ಪ್ರಾಥಮಿಕ ಶಾಲೆಗಳಲ್ಲಿ ಓದುವ ಹರಿಜನ ಮಕ್ಕಳಿಗೆ ಹತ್ತು ರೂಪಾಯಿ ಸ್ಕಾಲರ್‌ಶಿಪ್ ಕೊಡಬೇಕು.

ಎಂಪ್ಲಾಯ್‌ಮೆಂಟ್ ಆಫೀಸಿನವರು ಒಂದು ಲಿಸ್ಟ್ ಮಾಡುತ್ತಾರೆ. ಮೂರು ತಿಂಗಳ ಮೇಲೆ ರಿನ್ಯೂ ಮಾಡುತ್ತಾರೆ. ಆಗ ಹಿಂದಿನ ನಂಬರು ತೆಗೆದು ಹಾಕುತ್ತಾರೆ. ಮತ್ತೆ ಆ ಮನುಷ್ಯ ಹಳ್ಳಿಯಿಂದ ಬಂದು ರಿನ್ಯೂಮಾಡಿ ನಂಬರು ಹಚ್ಚಿಸಿಕೊಳ್ಳಬೇಕಾದರೆ ಇದರಿಂದ ಅವನಿಗೆ ತೊಂದರೆಯಾಗುತ್ತದೆ. ಒಂದು ಸಲ ಹೆಸರು ಕೊಟ್ಟು ರಿಜಿಸ್ಟರುಮಾಡಿದ ಮೇಲೆ ನೌಕರಿ ಸಿಕ್ಕುವ ತನಕ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ರಿಜಿಸ್ಟರದಲ್ಲಿ ಹೆಸರು ಇರಬೇಕು ಎಂದು ಹೇಳುತ್ತೇನೆ.

ಈಗ ಸೋಷಿಯಲ್ ವೆಲ್‌ಫೇರ್ ಆಫೀಸರ್ ಎಂದು ನೇಮಕ ಮಾಡಿದ್ದಾರೆ. ಅವರಿಗೆ ಸಹಾಯಮಾಡಲು ಇನ್ಸ್‌ಪೆಕ್ಟರರೆಂದು ನೇಮಕ ಮಾಡಿದ್ದಾರೆ. ನಾಲ್ಕು ಮಂದಿಯನ್ನು ನೇಮಿಸುವಾಗ ಒಬ್ಬ ಹೆಣ್ಣುಮಗಳನ್ನು ನೇಮಿಸಬೇಕಾಗಿತ್ತು ಎಂದು ನನ್ನ ಅಭಿಪ್ರಾಯ. ಕೆಲಸ ಮಾಡುವ ಹೆಣ್ಣುಮಕ್ಕಳ ಕೆಲಸವನ್ನು ಸೂಪರ್‌ವೈಸ್ ಮಾಡಲು ಹೆಣ್ಣುಮಕ್ಕಳು ಇನ್‌ಸ್ಪೆಕ್ಟರಾಗಿದ್ದರೆ ಅನುಕೂಲವೆಂದು ಹೇಳುತ್ತೇನೆ.

ಶಿಶು ವಿಹಾರಗಳೆಂದು ತೆಗೆದಿರುತ್ತಾರೆ. ಇಲ್ಲಿ ಮಕ್ಕಳಿಗೆ ಹಾಲು ಸಿಕ್ಕುವುದಿಲ್ಲ, ಬಿಸ್ಕತ್ತು ಸಿಕ್ಕುವುದಿಲ್ಲ ಶಿಶುಗಳಿಗೆ ಮಾತ್ರ ಹಾಲನ್ನು ಕೊಡದೆ ಮನೆಗಳಿಗೆ ಒಯ್ಯುತ್ತಾರೆ. ಈ ರೀತಿ ಮಾಡುವುದಕ್ಕೆ ಆಸ್ಪದ ಕೊಡಬಾರದು. ಅನುಭವವಿದ್ದ ಜನರಿಗೆ ಸೀನಿಯಾರಿಟಿ ಕೊಡಬೇಕು ಬಿ.ಎ. ಪಾಸ್ ಆಗಿರುತ್ತಾರೆಂದು ಸೀನಿಯಾರಿಟಿ ಕೊಟ್ಟರೆ ಕೆಲಸ ಚೆನ್ನಾಗಿ ಆಗುವುದಿಲ್ಲ. ಕಂದಾಯ ಖಾತೆಯಲ್ಲಿ ಹಾಯರ ಪರೀಕ್ಷೆ ಪಾಸಾಗಿದ್ದ ಸೀನಿಯರ ಹರಿಜನ ನೌಕರದಾರರಿಗೆ ಪ್ರಮಾಣಕ್ಕನುಸರಿಸಿ ಬಡತಿ ಕೊಡಬೇಕು ಎಂದು ಅರಿಕೆಮಾಡಿಕೊಳ್ಳುತ್ತಿದ್ದೇನೆ.

ಹರಿಜನರಿಗೆ ಸೀನಿಯಾರಿಟಿ ಕೊಡುವಾಗ ಕಾನೂನು ಕಾಯಿದೆ ಎಲ್ಲ ತಂದು ಇಡುತ್ತೀರಿ. ಇದರಿಂದ ಹರಿಜನರು ಉದ್ಧಾರವಾಗುವುದಿಲ್ಲ. ಕಾನೂನು ತಂದು ಅಡಚಣೆ ಮಾಡುತ್ತಿದ್ದೀರಿ. ಅವರಿಗೆ ಯಾವುದಾದರೂ ಒಂದು ಕಂಡೀಷನ್ ಮಾಡಿರಿ. ಹರಿಜನರಿಗೆ ನೂರಕ್ಕೆ 18ರಂತೆ

(ಶ್ರೀಮತಿ ಚಂಪಾಬಾಯಿ ಭೋಗಲೆ)

ಸ್ಥಾನವಾದರೂ ಕೊಡಿರಿ. ಹರಿಜನರ ಸೀನಿಯಾರಿಟಿ ಪಟ್ಟಿಯನ್ನು ಯೋಗ್ಯರೀತಿಯಿಂದ ತಯಾರಿಸಿ ಅವರಿಗೆ ನ್ಯಾಯ ದೊರೆಯುವಂತೆ ವ್ಯವಸ್ಥೆಮಾಡಬೇಕೆಂದು ತಿಳಿಸಿ, ನನಗೆ ಹತ್ತು ಮಿನಿಟು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳು.

Sri S. RAJAGOPAL (Kolar gold Fields).—Mr. Speaker, Sir I rise to say a few words on this demand concerning the Social Welfare Department. This Department is meant purely for the upliftment of the Scheduled Castes and Scheduled Tribes socially and economically.

Firstly, I want to mention here how this Government has failed to encourage these Scheduled Castes and Scheduled Tribes. After a long time and after a long struggle, this Government and particularly the Chief Minister has expanded the Ministry.

Here, Sir, while I thank him for the goodwill to increase the strength of the Scheduled Caste Ministers from two to three, I am very sorry to say that they have not been treated well according to the expectations. After Sri Rama, the Hon'ble Sri Nijalingappa returned from the Forest and he has sent Hon'ble Sri Rachaiah to the Forest. The Hon'ble Sri Mallikarjunaswamy has been made Deputy Minister for Planning. I do not know what sort of planning he is going to make. So, I cannot understand this sort of attitude. It shows what sort of encouragement the Scheduled Castes and Scheduled Tribes can expect from the Government.

The next thing concerns K.G.F. There is a Sanitary Board nominated by this Government. For so many years they failed to provide an elected body for K.G.F.; in spite of so many demands, so many struggles and agitations, they are carrying on with a nominated Sanitary Board. Even in that nominated Board, the Scheduled Castes who comprise 80 per cent of the population of K.G.F. area have been given only one representation. Is this the way that they encourage the Scheduled Castes and Scheduled Tribes I want to know from the Hon'ble Minister for Social Welfare. The next thing is about hostel facilities in K.G.F. There are only two hostels. As I have already mentioned, 80 per cent of the population are mostly poor workers belonging to Scheduled Castes. They are only having accommodation for fity students. So, I request the Hon'ble Social Welfare Minister to consider this serious problem and provide more hostels to boys and girls. The next thing I would like to mention is about the distribution of amelioration fund in K.G.F. area. There is a Committee consisting of non-scheduled Caste people and only one or two people belonging to Scheduled Castes and they all belong to Congress. I am very sorry to say that. There are already trade unions, which represent scheduled Caste workers and also communist party and the Republican Party of India. In spite of that, none of them are able to find a place in that Committee. This money has been distributed only through Congress people there. I want to place this problem before the Hon'ble Minister for Social Welfare and I request her to look into it and seriously consider that this fund is not meant to be distributed only by the Congress people and that Committee should be of a representative character and in that view I request the Hon'ble Minister for Social Welfare to expand that committee so that it may consist of all shades of people belonging to different colours, creeds and parties. Then only it will be a common body which every one will try to appreciate. I, therefore, request the present Minister for Social Welfare to treat this problem as a serious one. With these words, I conclude.

ಶ್ರೀ ಜೆ ಎಲ್. ಕಬಾಡಿ (ಬಡೋರ್ಗಲ್).—ಸಭಾಪತಿಗಳೆ, ನಾನು ಬಹಳ ವೇಳೆ ತೆಗೆದುಕೊಳ್ಳದೇ ಕೇವಲ ಒಂದೆರಡು ಮುಖ್ಯವಾದ ಪಾಯಿಂಟುಗಳನ್ನು ಹೇಳಬೇಕೆಂದಿದ್ದೇನೆ.

ಈಗ ಹರಿಜನರು ಆರ್ಥಿಕ ದೃಷ್ಟಿಯಿಂದ, ಸಾಮಾಜಿಕ ದೃಷ್ಟಿಯಿಂದ, ಶೈಕ್ಷಣಿಕ ದೃಷ್ಟಿಯಿಂದ ಮುಂದುವರಿಯಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ಈಗ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ; ಅದರಿಂದ ಹರಿಜನರು ಆರ್ಥಿಕ ದೃಷ್ಟಿಯಿಂದ ಮುಂದುವರಿಯುವುದಕ್ಕಾಗುತ್ತದೆಯೇ ಎಂದು ನೋಡಬೇಕು. ಹರಿಜನರಿಗೆ ಸಂಬಂಧಪಟ್ಟಂಥ ಲೆದರ್ ಇಂಡಸ್ಟ್ರಿ ಮೇಲೆ ಹಾಕಿರುವಂಥ ಟ್ಯಾಕ್ಸನ್ನು ನೋಡಿದರೆ ಅದರಿಂದ ಹರಿಜನರಿಗೆ ಎಷ್ಟು ಅನ್ಯಾಯವಾಗಿದೆ

ಎನ್ನುವುದು ಗೊತ್ತಾಗುತ್ತದೆ. ಈ ತರಿಗೆ ಬಹಳ ದುಃಖಕರವಾದ ಸಂಗತಿ. ಆದರೆ ನಾನು ಫೈನಾನ್ಸ್ ಮಂತ್ರಿಗಳಲ್ಲೂ, ಸಂಬಂಧಪಟ್ಟ ಅಧಿಕಾರಿಗಳಲ್ಲೂ ಹರಿಜನರಿಗೆ ಇಂಥಿಂಥ ಕಾನೂನು ಮೇಲೆ ತರಿಗೆ ಹಾಕಬಾರದು, ಹರಿಜನರಿಗೆ ವಿನಾಯಿತಿ ಕೊಡಬೇಕೆಂದು ಹೇಳಿದ್ದರೂ ಸಹಿತ, ಏನೇನೋ ಕಾರಣ ಹೇಳಿ ಟ್ಯಾಕ್ಸ್‌ನ್ನು ಆಫೀಸರರು ಹಾಕುತ್ತಿದ್ದಾರೆ. ಇದಕ್ಕೆ ಮಾತ್ರ ಫೈನಾನ್ಸ್ ಮಿನಿಸ್ಟರು ಹೆಚ್ಚಿಗೆ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟಿನಲ್ಲಿ ಕೊಲಂಬೋ ಪ್ಲಾನ್ ಪ್ರಕಾರ ಟ್ರೇನಿಂಗಿಗೆ ಕಳುಹಿಸಬೇಕೆಂದು ಇದೆ. ಆ ಇಲಾಖೆಯಲ್ಲಿ ಯಾರೋ ಒಬ್ಬರು ಮುಂಬಯಿಯ ಕರ್ನಾಟಕದಲ್ಲಿ ಗ್ರಾಜುಯೇಟ ಆದ ಆಫೀಸರು ಇದ್ದರೂ ಸಹ, ಹರಿಜನರ ಮೇಲಿರುವ ದ್ವೇಷದಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಸೆಲೆಕ್ಟ್ ಆಗಿದ್ದರೂ, ಸೆಲೆಕ್ಟ್ ಆಗಲೇ ಇಲ್ಲ ಎಂದು ಹೇಳುವ ರೂಢಿ ಹಳೆ ಮೈಸೂರಿನ ಅಧಿಕಾರಿಗಳಲ್ಲಿ ಬಂದಿದೆ. ಎಲ್ಲಿಯವರೆಗೆ ಹರಿಜನರ ಬಗ್ಗೆ ಅಲಕ್ಷ್ಯವಿರುತ್ತದೆಯೋ ಎಲ್ಲಿಯವರೆಗೆ ಅವರ ಬಗ್ಗೆ ಮನೋಭಾವನೆ ಬದಲಾವಣೆಯಾಗುವುದಿಲ್ಲವೋ, ಅಲ್ಲಿಯತನಕ ಹರಿಜನರ ಉದ್ಧಾರವಿಲ್ಲವೆಂದು ಹೇಳಬಯಸುತ್ತೇನೆ.

ಸುಪ್ರೀಂ ಕೋರ್ಟ್ ನಿರ್ಣಯದ ಪ್ರಕಾರ, ನಮಗೆ ಪ್ರಮೋಷನ್ನಿಗೆ ರಿಸರ್ವೇಷನ್ ಇದೆ; ಸುಪ್ರೀಂ ಕೋರ್ಟಿನವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸರ್ವಿಸಿನಲ್ಲಿ ಬಡ್ತಿ ಕೊಡುವ ಶೇಕಡ 18 2/3ರ ಬಗ್ಗೆ ರಿಸರ್ವೇಷನ್ ಫಿಕ್ಸ್ ಮಾಡಿದ್ದಾರೆ, ಆದ್ದರಿಂದ ಅಷ್ಟನ್ನು ಪ್ರಮೋಷನ್ ಕೊಡುವವೇಳೆಗೆ ಕೊಡಲಿಕ್ಕೇಬೇಕು. ಸುಪ್ರೀಂ ಕೋರ್ಟಿನವರು ನಿರ್ಣಯ ಕೊಟ್ಟರೂ, ಅದನ್ನು ಇಲ್ಲಿಯವರೆಗೂ ಯಾವದೇ ಆಫೀಸರುಗಳಾಗಲೀ, ಮತ್ತು ಯಾವದೇ ಖಾತೆಗಳಾಗಲಿ ಅನ್ವಯಿಸಿಕೊಂಡು ಬಂದಿಲ್ಲ. ಈಗ ಎಲ್ಲ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಎಲ್ಲಾ ಖಾತೆಗಳಲ್ಲಿ ಎಲ್ಲಾ ಅಧಿಕಾರಿಗಳೂ ಸುಪ್ರೀಂ ಕೋರ್ಟಿನ ತೀರ್ಪನ್ನು ತೀವ್ರಗತಿಯಿಂದ ಜಾರಿಗೆ ಕೊಡುವಂತೆ ಮಾಡಬೇಕು; ನ್ಯಾಯವಾಗಿ, ಘಟನಾತ್ಮಕವಾಗಿ ಹರಿಜನರಿಗೆ ಏನು ದೊರೆಯಬೇಕೋ ಅದನ್ನು ದೊರಕಿಸಿ ಕೊಡಬೇಕು. ಸುಪ್ರೀಂ ಕೋರ್ಟಿನ ನಿರ್ಣಯ ಆಗಿ ಎರಡು ವರ್ಷವಾಗಿದ್ದರೂ ಸಹ, ಇಲ್ಲಿಯವರೆಗೂ ಅದನ್ನು ಜಾರಿಗೆ ಕೊಡಲಿಲ್ಲವೆಂದರೆ, ಅತೀವ ದುಃಖದ ಸಂಗತಿಯಾಗಿದೆ. ಅಲ್ಲದೆ ಹರಿಜನರಿಗಾಗಿ ಮನೋಭಾವನೆ ಬದಲಾಯಿಸಬೇಕೆಂದು ಬಾಯಿಯಲ್ಲಿ ಸುಮ್ಮನೆ ಹೇಳುವದಾಗಿದೆಯೆ ಹೊರತು ಕೃತಿಯಲ್ಲಿ ಯಾರೂ ತೋರಿಸುತ್ತಿಲ್ಲವೆಂದು ಹೇಳಬೇಕಾಗಿದೆ.

ಅಗ್ರಿಕಲ್‌ಚರಲ್ ಕಾಲೋನಿಗಳಿಗೆಂದು ನಮ್ಮ ಸ್ಟೇಟಿಗೆ ಕೆಲವೊಂದು ಫಂಡ್ ಬರುತ್ತದೆ. ಎಷ್ಟೋ ಅಗ್ರಿಕಲ್‌ಚರಲ್ ಕಾಲೋನಿಗಳಿಗೆ ಯೋಗ್ಯವಾದ ಕಡೆ ಸ್ಥಳ ಕೊಡದೇನೆ, ಆ ಫಂಡಿನ ಲಾಭ ಸಿಗದೆ ಹೋಗಿದೆ, ಯಾರದೋ ಒತ್ತಾಯದಂತೆ ಅಗ್ರಿಕಲ್‌ಚರಲ್ ಕಾಲೋನಿಗಳನ್ನು ಯೋಗ್ಯವಾದ ಸ್ಥಳದಲ್ಲಿ ಮಾಡದೇ ಇರುವುದರಿಂದ, ಕೇಂದ್ರ ಸರ್ಕಾರದ ಹಣ ಲ್ಯಾಪ್ಸ್ ಆಗಿದ್ದು ಉಂಟು. ಮಂತ್ರಿವರ್ಯರು ಇದರ ಬಗ್ಗೆ ಹೆಚ್ಚು ಲಕ್ಷ್ಯ ವಹಿಸಬೇಕು.

ಇನ್ನು ಮಕ್ಕಳಿಗಾಗಿ ರೆಸಿಡೆನ್ಷಿಯಲ್ ಸ್ಕೂಲ್‌ಗಾಗಿ ಒಂದು ಸ್ಕೀಮ್ ಹಾಕಿಕೊಂಡಿದ್ದರೂ ಸಹ ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೂ ಆ ಸ್ಕೀಮ್ ಪ್ರಾರಂಭ ಮಾಡಿಲ್ಲ. ಇದು ಏನು ತೋರಿಸಿಕೊಡುತ್ತದೆಂದರೆ, ಏನೇನೋ ಸ್ಕೀಮು ಮಾಡುತ್ತಾರೆ, ಆ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರಕ್ಕೆ ಆಗಿಲ್ಲವೆಂದು ಇಲ್ಲಿ ಹೇಳಬೇಕಾಗಿದೆ. ಟೆಕ್ನಿಕಲ್ ಸ್ಕೂಲುಗಳಿಗೆ, ಹಾಸ್ಟಲುಗಳು ನಮ್ಮ ರಾಜ್ಯದಲ್ಲಿ ಎಲ್ಲಿಯೂ ಇಲ್ಲ.

Supply of bullock, milch cow, subsidy for development of poultry and sheep breeding farm ಮೊದಲಾದ ಎಷ್ಟೋ ಸ್ಕೀಮುಗಳ ಬಗ್ಗೆ ಒಂದು-ಎರಡು ಸಾವಿರ ರೂಪಾಯಿ ಏನು ಇಟ್ಟಿದ್ದಾರೋ, ಅವೂ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬುಗಳ ಜನರುಗಳಿಗೆ ಗೊತ್ತಿಲ್ಲ. ಈ ಹಣ ಯಾರಿಗೂ ಕೊಟ್ಟಿಲ್ಲ.

Removal of Untouchability Act ಪ್ರಕಾರ ಕಾನೂನು ಬದ್ಧವಾಗಿ ಎಲ್ಲೆಲ್ಲಿ ನಡೆದುಕೊಳ್ಳುವುದಿಲ್ಲವೋ, ಅಲ್ಲಿ ಕ್ರಮ ತೆಗೆದುಕೊಳ್ಳಲು ಜನರಿಗೆ ಲೀಗಲ್ ಏಡ್ ಕೊಡಬೇಕೆಂಬ ಒಂದು ಕಾಯಿದೆ ಇದೆ. ಅದು ಯಾರಿಗೂ ಗೊತ್ತಿಲ್ಲದೆ ಇರುವುದು ಬಹಳ ಶೋಚನೀಯವಾದ ಸಂಗತಿ. ಇದು ಎಲ್ಲಾ ಆಗಬೇಕಾದರೆ ನಮ್ಮಲ್ಲಿ ಇರುವ ಸ್ಕೀಮುಗಳ ಪ್ರಚಾರವಾಗಬೇಕು. ಇದಕ್ಕೆ, ತಿಳುವಳಿಕೆ ಕೊಡುವಂಥ ಆಫೀಸರುಗಳು ಇಲ್ಲ, ಸರಿಯಾದ ಟ್ರೇನಿಂಗ್ ಹೊಂದಿದ ಜನ ಇಲ್ಲ. ಆ ದೃಷ್ಟಿಯಿಂದ ನೋಡಿದರೆ ನಮ್ಮ ಸಮಾಜ ಕಲ್ಯಾಣ ಖಾತೆ ಬಹಳ ಹಿಂದುಳಿದಿದೆ ಈ ಪ್ರಚಾರಕಾರ್ಯ ಯಾವರೀತಿ ಕೈಕೊಳ್ಳಬೇಕು ಎಂದು ನಿರ್ಧರಿಸುವುದಕ್ಕೆ ಒಂದು ಪಾಲಿಸಿ ಕಮಿಟಿಯೆಂದು ಮಾಡಿತ್ತು. ಆ ಪಾಲಿಸಿ ಕಮಿಟಿಯವರು ಏನೇನು ಸಲಹೆಗಳನ್ನು ಮಾಡಿದ್ದಾರೋ, ಅವುಗಳನ್ನು ಮಾನ್ಯ ಮಂತ್ರಿಗಳು ತಿಳಿದುಕೊಂಡು ಕಾರ್ಯರೂಪಕ್ಕೆ ತರುವುದಕ್ಕೆ ಏರ್ಪಾಡು ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಹೈಯರ್ ಸ್ಟಡೀಸಿಗೋಸ್ಕರ ಸ್ಕಾಲರ್‌ಷಿಪ್ಪುಗಳನ್ನು ಅವಾರ್ಡ್ ಮಾಡಲು ಕೆಲವೊಂದು ಹಣ ಇಟ್ಟಿದ್ದಾಗಿದೆ. ಆ ಹಣವನ್ನು ಸದುಪಯೋಗಿ ಮಾಡಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾಗಲಿ ಸಂಬಂಧಪಟ್ಟ ಮಂತ್ರಿಗಳಾಗಲಿ ತಮ್ಮ ತಮ್ಮ ಖಾತೆಯಲ್ಲಿ ಯಾರನ್ನಾದರೂ ಕಳುಹಿಸಲಿಕ್ಕೆ ಶಕ್ಯ ವಿದ್ದಲ್ಲಿ ಹೈಯರ್ ಸ್ಟಡಿಗಾಗಿ ಹರಿಜನರಲ್ಲಿ ಯಾರುಯಾರಿದ್ದಾರೆಂದು ತಿಳಿದುಕೊಂಡು ಅವರನ್ನು ಕಳುಹಿಸಲಿಕ್ಕೆ ಶಕ್ಯವಿದೆ. ಕ್ವಾಲಿಫಿಕೇಷನ್ ಇರುವವರಲ್ಲಿ ಯಾರುಯಾರನ್ನು ಕಳುಹಿಸಬಹುದು ಎಂದು ಲಿಸ್ಟ್ ತಯಾರುಮಾಡಿ ಸರಿಯಾದ ಟ್ರೇನಿಂಗ್ ತೆಗೆದುಕೊಳ್ಳುವುದಕ್ಕೆ ಅವರನ್ನು ಕಳುಹಿಸಿಕೊಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

4-30 P.M.

ಇನ್ನೊಂದು ವಿಚಾರ. ಈ ಮೈಸೂರು ರಾಜ್ಯದಲ್ಲಿ ಕೇವಲ ಒಂದು ಜಾತೀಯ ತಳಹದಿಯ ಮೇಲೆ ಈ ಬೋರ್ಡಿಂಗ್ ಹೋಮ್‌ಗಳು ರಚನೆಯಾಗುತ್ತಿವೆ. ಇಂಥಾದ್ದನ್ನು ಸರ್ಕಾರದವರು ಮೊದಲು ತಪ್ಪಿಸಬೇಕು. ಕಾಸ್ಮಾಪಾಲಿಟನ್ ಹಾಸ್ಟಲ್‌ಗಳನ್ನು ಮಾಡಬೇಕು. ಆ ಕಾಲಕ್ಕೆ ಹರಿಜನರು ಬಹತೇಕ ಸಂಖ್ಯೆಯಿಂದ ಸವರ್ಣೀಯರೊಂದಿಗೆ ಸೇರಿಕೊಂಡು ಸುಸಂಸ್ಕೃತರಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ನಮ್ಮ ರಾಷ್ಟ್ರ ಜಾತ್ಯತೀತರಾಷ್ಟ್ರವಾಗಲು ಒಂದು ಒಳ್ಳೆಯ ಮಾರ್ಗವನ್ನು ಕಲ್ಪಿಸಿಕೊಟ್ಟಂತಾಗುತ್ತದೆಂದು ನಾನು ಹೇಳಬಯಸುತ್ತೇನೆ.

(ಶ್ರೀ ಜೆ. ಎಲ್. ಕಬಾಡಿ)

ಇನ್ನು ಮನೆಗಳನ್ನು ಕಟ್ಟಿಕೊಡುವ ವಿಷಯವಾಗಿ ಕೇವಲ 800 ರೂಪಾಯಿಗಳನ್ನು ಕೊಡುತ್ತೇವೆ ಎಂಬುದಾಗಿ ಸರ್ಕಾರದವರು ಹೇಳುತ್ತಿದ್ದಾರೆ. ಇದಕ್ಕಿಂತ ಮತ್ತೊಂದು ಸಲಹೆಯನ್ನು ನಾನು ಸೂಚನೆ ಮಾಡುತ್ತೇನೆ. ಮೊದಲು ಬೊಂಬಾಯಿ ರಾಜ್ಯದಲ್ಲಿ ಪಿ. ಡಬ್ಲ್ಯು. ಆರ್. ಸ್ಕೀಮು 19 ರ ಪ್ರಕಾರ ಅವರಿಗೆ 1,500 ರೂಪಾಯಿಗಳ ಬಿನ್ ಬಡ್ಡಿ ಸಾಲ ಮತ್ತು 500 ರೂಪಾಯಿಗಳಷ್ಟು ಸಬ್ಸಿಡಿ ಕೊಟ್ಟು ಇಪ್ಪತ್ತು ವರ್ಷಗಳ ಸಮಕಂತುಗಳ ಮೂಲಕ ವಸೂಲು ಮಾಡುವ ವ್ಯವಸ್ಥೆ ಇತ್ತು. ಆ ಪ್ರಕಾರ ಅನೇಕ ಜನರು ಎಷ್ಟೋ ಸೊಸೈಟಿಗಳನ್ನು ಮಾಡಿಕೊಂಡು ಅಲ್ಲಿ ಈ ಸ್ಕೀಮನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಆದರೆ ಇಲ್ಲಿ ಈ ಪುಕ್ಕಟೆ 400 ರೂಪಾಯಿಗಳನ್ನು ಮನೆಗಳನ್ನು ಕಟ್ಟುವುದಕ್ಕಾಗಿ ಕೊಡುವಾಗ ನನ್ನ ಮಾನ್ಯ ಸದಸ್ಯರ ಸೂಚನೆಯ ಪ್ರಕಾರ ಅವರಿಗೆ ಆ ಹಣದಲ್ಲಿ ಕೈಸೇರುವುದು ಕೇವಲ ನೂರು ಅಥವಾ 150 ರೂಪಾಯಿಗಳು ಎಂದು ಹೇಳಿದರು. ಅಷ್ಟು ಹಣವಾದರೂ ಅವರಿಗೆ ಮುಟ್ಟುತ್ತದೋ ಇಲ್ಲವೋ ಎಂಬ ಸಂದೇಹವನ್ನೂ ಸಹ ಅವರು ವ್ಯಕ್ತಪಡಿಸಿದರು. ಅಂದಮೇಲೆ ಆ ಬಡರೈತರು ಯಾವರೀತಿ ಮನೆಕಟ್ಟಿಕೊಳ್ಳಬಹುದು ಎಂಬುದನ್ನು ಈ ಮಾನ್ಯ ಸಭಾ ಸದಸ್ಯರು ಮತ್ತು ಸರ್ಕಾರ ಯೋಚನೆಮಾಡಬೇಕೆಂದು ನಾನು ಹೇಳುತ್ತೇನೆ. ಆದ್ದರಿಂದ ಇನ್ನು ಮುಂದಾದರೂ ಸರ್ಕಾರದವರು ದೀರ್ಘವಾಗಿ ಆಲೋಚನೆ ಮಾಡಿ ಉತ್ತಮವಾದ ಮನೆಗಳನ್ನು ಅವರಿಗೆ ಕಟ್ಟಿಕೊಡುವ ಹಾಗೆ ವ್ಯವಸ್ಥೆ ಮಾಡಿದರೆ ಅದರಿಂದ ಅವರಿಗೆ ಬಹಳ ಒಳ್ಳೆಯದಾಗುತ್ತದೆ ಮತ್ತು ಅನುಕೂಲವೂ ಆಗುತ್ತದೆ. ಈ ಬಗ್ಗೆ ಕೂಡಲೇ ಒಂದು ಸ್ಕೀಮನ್ನು ತಯಾರುಮಾಡಬೇಕೆಂದು ನಾನು ಸರ್ಕಾರದವರಲ್ಲಿ ಅರಿಕೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದರಿ).—ಸನ್ಮಾನ್ಯ ಅಧ್ಯಕ್ಷರೇ, ಈಗ ಮುಖ್ಯವಾಗಿ ನಮ್ಮ ಮುಂದಿರುವ ಬೇಡಿಕೆಯು ಪ್ರಶ್ನೆ ಸೋಷಿಯಲ್ ವೆಲ್ಫೇರ್. ಈ ವಿಚಾರವನ್ನು ಬಹಳ ಕೂಲಂಕಷವಾಗಿ ಪರಿಶೀಲಿಸಿ ಬೇರೆ ಬೇರೆ ಸದಸ್ಯರು ತಮ್ಮ ತಮ್ಮ ಸಲಹೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಇದರಲ್ಲಿ ಈ ಹರಿಜನ ಎಂಬ ಪ್ರಶ್ನೆಯನ್ನು ತೆಗೆದುಕೊಳ್ಳುವಾಗ ಮಾನ್ಯ ಶ್ರೀಮಾನ್ ಪಾಟೀಲರು ಹೇಳಿದ ಕ್ರಿಮಿನಲ್ ಟ್ರೈಬ್ಸ್ ನನಗೆ ಜ್ಞಾಪಕಕ್ಕೆ ಬರುತ್ತದೆ. ಗಾಂಧೀಜಿಯವರು ಎಲ್ಲಾ ಜನರು ದೇವರ ಮಕ್ಕಳು ಎನ್ನುವ ಅಭಿಪ್ರಾಯದಲ್ಲಿ ಅವರನ್ನು ಹರಿಜನರು ಎಂದು ಕರೆಯುತ್ತಿದ್ದರು ಈಗ ನಾವು ಸಮಾಜರಹಿತ ರಾಷ್ಟ್ರವನ್ನು ಕಟ್ಟುವಾಗ ರಾಷ್ಟ್ರದಲ್ಲಿರತಕ್ಕ ಎಲ್ಲಾ ಜನರು ಹರಿಜನರು ಎಂದು ಹೆಸರು ಕೊಟ್ಟಿದ್ದರೆ ಆಗ ಹರಿಜನರೆಲ್ಲ ಒಂದು, ಹರಿಜನ ಸಮಾಜ ಸೇವಕರು ಇನ್ನೊಂದು ಎಂಬುದಾಗಿ ಹೇಳಿ ಎರಡು ಸಮಾಜ ಪಂಗಡಗಳಾಗುತ್ತಿದ್ದುವು. ಶ್ರೀಮಾನ್ ಪಾಟೀಲರು ಹೇಳಿದ ಹಾಗೆ ಈ ಹರಿಜನ ಸೇವಕರು ಕೂಡ ಒಂದು ರೀತಿ ಕ್ರಿಮಿನಲ್ ಟ್ರೈಬ್ಸ್ ಸ್ಥಾನವನ್ನು ಆವರಿಸಿಕೊಂಡಿದ್ದಾರೆ. ಎಂದು ಹೇಳಿದರೆ ಏನೂ ತಪ್ಪಾಗಲಾರದು. ಗಾಂಧೀಜಿಯವರಾದರೂ ಬ್ರಿಟಿಷರ ಕಾಲದಲ್ಲಿ ಇದ್ದುಕೊಂಡು ಉತ್ತಮವಾದ ಜೀವನವನ್ನು ಸಾಗಿಸಿ ನ್ಯಾಯವಾದ ಮಾರ್ಗಕ್ಕೆ ಬಂದಿದ್ದರು ಎಂಬುದಾಗಿ ನಾವು ತಿಳಿದಿರುತ್ತೇವೆ. ಇವತ್ತಿನ ದಿವಸ ನಾನು ಈ ಸಭೆಯಲ್ಲಿ ಅನೇಕ ಭಾಷಣಕಾರರಿಂದ ತಿಳಿದಿರುವ ಪ್ರಕಾರ ಸರ್ಕಾರದವರು ಈ ಬಾಬಿಗೆ ಬಡ್ಜೆಟಿನಲ್ಲಿ ಎಷ್ಟು ಹಣವನ್ನೊದಗಿಸಿದ್ದಾರೆಯೋ ಅಷ್ಟು ಈ ಸಮಾಜ ಸೇವಾಕಾರ್ಯಗಳಿಗೆ ಖರ್ಚಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಅಧಿಕಾರಿಗಳ ಭತ್ಯರೂಪದಲ್ಲೂ, ಇನ್ನು ಕೆಲವು ದೊಡ್ಡ ದೊಡ್ಡ ಸ್ಟೇಟ್ ಬೋರ್ಡುಗಳ ರಚನೆಗಾಗಿಯೂ, ಬೋರ್ಡು ಸದಸ್ಯರ ಬಡ್ತಿಗಾಗಿಯೂ ಹೀಗೆ ಈ ಬಾಬಿಗೆ ಒದಗಿಸಿದ್ದ ಹಣದಪೈಕಿ ಹೆಚ್ಚಿನ ಅಂಶ ವಿನಿಯೋಗವಾಗಿ ದಲಿತ ವರ್ಗದವರ ಹಾಗೂ, ಹಿಂದುಳಿದ ಜಾತಿಗಳ ಅಭಿವೃದ್ಧಿಗೆ ಬಡ್ಜೆಟ್ಟಿನಲ್ಲಿ ಹೆಚ್ಚಿಗೆ ಹಣ ವಿನಿಯೋಗವಾಗಲಾರದು. ದಲಿತ ಹಾಗೂ ಹಿಂದುಳಿದವರ ಅಭಿವೃದ್ಧಿಗಾಗಿ ಹೆಚ್ಚು ಹಣ ಒದಗಿಸುವ ಅವಶ್ಯಕತೆ ಇದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಈ ವರ್ಗದವರ ಜೀವನ ಬಹಳ ಕಷ್ಟವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಒದಗಿಸಿರುವ ಸರ್ಕಾರಿ ಹಣದ ಹೆಚ್ಚಿನ ಅಂಶ ಸಮಾಜಸೇವಕರಪಾಲಿಗೆ ಹೋಗುತ್ತಿದೆ ಎಂಬುದು ಸ್ಪಷ್ಟವಾಗಿಯೇ ಇದೆ. ಈ ರೀತಿಯ ಸಾರ್ವಜನಿಕ ಹಣದ ದುರುಪಯೋಗವನ್ನು ಯಾವ ಸರ್ಕಾರವೂ ಸಹಿಸಲಾರದು. ಇಷ್ಟುಮಾತ್ರವೇ ಅಲ್ಲ ಈ ವಿಚಾರದಲ್ಲ ಒಂದು ಸರಿಯಾದ ಕಾಯಿದೆ ಬದ್ಧ ಕಮೀಷನ್ನನ್ನು ನೇಮಕಮಾಡಿ ಚೆನ್ನಾಗಿ ವಿಚಾರಮಾಡಿದರೆ, ನಿಜಾಂಶ ಬಯಲಾಗುತ್ತದೆ. ನ್ಯಾಯವಾದ ದಕ್ಷ ಅಧಿಕಾರಿಗಳನ್ನು ಈ ಇಲಾಖೆಗಳಲ್ಲಿ ನೇಮಿಸಿದರೆ, ಆಗ ನಿಜವಾದ ಪ್ರಯೋಜನ ಪಡೆದ ಕಕ್ಷಿಗಾರರು ಮತ್ತು ವಂಚಕರಾದ ಸೇವಕರು ಎಷ್ಟು ಜನರಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬರುತ್ತದೆ. ಅದಕ್ಕೆ ಬೇಕಾದ ಎಷ್ಟೋ ಸರಿಯಾದ ನಿದರ್ಶನಗಳನ್ನು ಈ ಸಭೆಯ ಮುಂದೆ ಕೊಡಬಹುದು. ಉದಾಹರಣೆಗಾಗಿ ಇತ್ತೀಚೆಗೆ ದಲಿತವರ್ಗದವರಿಗಾಗಿ ಅದರಲ್ಲೂ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅವರಿಗಾಗಿ ಅಗ್ರಿಕಲ್ಚರಲ್ ಕಾಲೋನಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವು ಕಡೆಗಳಲ್ಲಿ ಸ್ಥಾಪಿಸಲಾಗಿದೆ. ಹೊಂಬಾಳಯ್ಯ ನಗರವೆಂದು ಒಂದು ಕಾರ್ಕಾಳದ ಈದುಗ್ರಾಮದಲ್ಲಿದೆ. ಅಲ್ಲಿ 20 ಮನೆಗಳಿವೆ. ಪ್ರತಿಯೊಂದು ಎಕರೆಗೂ ಬೇಸಾಯ ಕೃಷಿಗಾಗಿ ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಅಗ್ರಿಕಲ್ಚರಲ್ ಕಾಲೋನಿಯನ್ನು ಕಟ್ಟಿಸಬೇಕೆಂದು ಆರಿಸಿದ ಸ್ಥಳದಿಂದ ಸುಮಾರು 50 ಸಾವಿರ ರೂಪಾಯಿಗಳಷ್ಟು ಮರವನ್ನು ತೆಗೆದು ಮಾರಲಾಯಿತು. ಆದರೆ ಈಗ ಅಲ್ಲಿ ಒಂದು ಚಿಕ್ಕ ಕುಟುಂಬ ಸಹ ಇಲ್ಲವೆಂಬುದು ತನಿಖೆ ಮಾಡಿದರೆ ಗೊತ್ತಾಗುತ್ತದೆ. ಹೆಸರು ಇದೆ; ಕಾಲೋನಿ ಇದೆ. ಆದರೆ ಹರಿಜನ ಕಂಟ್ರಾಕ್ಟರ್ ಕುಟುಂಬಗಳಲ್ಲಿ ಬೇಸರವಿಲ್ಲ ತುಂಬ ಪ್ರಯೋಜನ ಹೊಂದಿದ್ದಾನೆ. ಸರ್ಕಾರದ ಧಾರಾಳ ಹಣ ಮತ್ತು ಮರ ನಷ್ಟವಾಗಿದೆ.

ಹೀಗೆಯೇ ಮಾಲಾಕೊಲನಿ ಎಂಬ ಗ್ರಾಮದಲ್ಲಿ 20 ಮನೆಗಳನ್ನು ಕಟ್ಟಿದ್ದರಲ್ಲಿ ಅವುಗಳಪೈಕಿ 14 ಮನೆಗಳು ಬಿದ್ದಿವೆ. ಕೇವಲ ಆರು ಮನೆಗಳು ಮಾತ್ರ ಉಳಿದಿವೆ. ಅವರು ಬೇಸಾಯಗಾರರು ಅವರಿಗೆ ಉತ್ಪತ್ತಿಯಾಗುವವರೆಗೆ ಜೀವನದ ವೆಚ್ಚಕ್ಕಾಗಿ ಏನೂ ಮಾರ್ಗವಿರುವುದಿಲ್ಲ. ಇದೇ ರೀತಿಯಲ್ಲಿ ಪುತ್ತೂರಿನಲ್ಲೂ ಉಡುಪಿಯಲ್ಲೂ ಮತ್ತು ಬೆಳ್ತಂಗಡಿಯಲ್ಲೂ ಬೇಸಾಯ ಕಾಲೋನಿಗಳು ಏರ್ಪಟ್ಟು ಧಾರಾಳ ವೆಚ್ಚವಾಗಿದೆ. ಯಾವ ಕಾಲೋನಿಯಲ್ಲಿ ನೋಡಿದರೂ ಹರಿಜನ ಗಿರಿಜನರಲ್ಲಿ ಎಷ್ಟು ಕುಟುಂಬಗಳನ್ನು ಬೇಸಾಯಗಾರರಾಗಿ ಮಾಡಿದ್ದಾರೆ ಎಂಬ ಪ್ರಶ್ನೆಯನ್ನು ಸರ್ಕಾರ ಆಲೋಚನೆ ಮಾಡುವುದು ಅಗತ್ಯ. ಈ ವಿಚಾರ

ಸರಿಯಾಗಿ ನೋಡಿದ್ದೇ ಆದರೆ ಇದು ನಿಜವಾಗಿ ಕ್ರಿಮಿನಲ್ ವೇಸ್ಟ್ ಎಂದು ನಾನು ಹೇಳಿದರೆ ಅದೇನೂ ತಪ್ಪಾಗಲಾರದು.

ಇನ್ನು ವಿದ್ಯಾಭ್ಯಾಸದ ಪ್ರಶ್ನೆಯನ್ನು ನೋಡಿದರೆ ಸ್ಕಾಲರ್‌ಷಿಪ್ ಹಣವನ್ನು ವಿದ್ಯಾರ್ಥಿಗಳಿಗೆ ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ ಕೊಡುತ್ತಾರೆ. ಇದೇನು ಪ್ರಯೋಜನ? ಕಾಲಕ್ಕೆ ಸರಿಯಾಗಿ ಇದು ಮಕ್ಕಳಿಗೆ ಸಿಕ್ಕುವುದಿಲ್ಲ. ಫೇಲಾಗಿ ಮನೆಗೆ ಹೋದ ಮೇಲೆ ಆ ಸ್ಕಾಲರ್‌ಷಿಪ್ ಸಿಕ್ಕುತ್ತದೆ. ಇದು ಸರಿಯೇ ಎಂದು ನಾನು ಸರಕಾರವನ್ನು ಪ್ರಶ್ನೆ ಮಾಡಬೇಕಾಗಿದೆ. ಆದರೆ ಮದ್ರಾಸ್ ಸರ್ಕಾರದಲ್ಲಿ ಸ್ಕಾಲರ್‌ಷಿಪ್ ಕೊಡುವ ಪದ್ಧತಿಯೇ ಬೇರೆ. ಆಗಸ್ಟ್‌ನಲ್ಲಿ ಒಂದು ಕಂತು ಮತ್ತು ಡಿಸೆಂಬರ್‌ನಲ್ಲಿ ಒಂದು ಕಂತು—ಹೀಗೆ ಅಲ್ಲಿ ಎರಡು ಕಂತುಗಳಿದ್ದುವು. ಯಾವಾಗ ಮಕ್ಕಳು ಶಾಲೆಗೆ ಸೇರುತ್ತಾರೋ ಆಗಲೇ ಹಣದ ರೂಪದಲ್ಲಾಗಲೀ, ವಸ್ತುಗಳ ರೂಪದಲ್ಲಾಗಲೀ ಅಥವಾ ಪುಸ್ತಕಗಳ ರೂಪದಲ್ಲಾಗಲೀ ಈ ವಿದ್ಯಾರ್ಥಿವೇತನ ಕೊಡಬೇಕೆಂದು ನಾವು ಎಷ್ಟೋ ಸಲ ಹೇಳಿದ್ದರೂ ಇಲ್ಲಿ ಸರಕಾರಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅವರಿಗೆ ವಿದ್ಯಾರ್ಥಿವೇತನದ ಸೌಲಭ್ಯಗಳನ್ನು ಸಮಯಕ್ಕೆ ಸರಿಯಾಗಿ ಈ ಸರ್ಕಾರ ಕೊಡುವುದು ಬಹಳ ಅಗತ್ಯವಿದೆ. ಇದನ್ನು ಈ ಸರ್ಕಾರದವರು ಪೂರ್ಣವಾಗಿ ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಒತ್ತಾಯಮಾಡುತ್ತೇನೆ. ದಕ್ಷಿಣ ಕನ್ನಡದ ಪ್ರತ್ಯೇಕ ಹರಿಜನ ಗಿರಿಜನ ಶಾಲೆ ಮತ್ತು ವಿದ್ಯಾರ್ಥಿ ಭವನಗಳ ಆಡಳಿತ ಕುರಿತು ಹೇಳುವುದಾದರೆ, ಎಷ್ಟೋ ಕೀಳು ಮಟ್ಟವನ್ನು ಕಾಣಬಹುದು. ಇದು ಸುಧಾರಣೆಯಾಗಬೇಕು. ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗಳ ಬಗ್ಗೆ ಸಲಹಾ ಬೋರ್ಡ್ ರಚನೆಮಾಡಬೇಕು. ಅದಕ್ಕೆ ಲಕ್ಷಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡಬೇಕು ಎಂದು ಸರ್ಕಾರದವರು ಹೇಳುತ್ತಿದ್ದಾರೆ, ದಲಿತವರ್ಗದವರು ಮತ್ತು ಹಿಂದುಳಿದ ಸಮಾಜದವರು ಸೇರಿಕೊಂಡಿರುವ ಹಾಗೆ ಒಂದು ಸಮಿತಿಯನ್ನು ರಚನೆಮಾಡಿ ಅದರ ಮೂಲಕ ಈ ಜನಾಂಗದವರ ಅಭಿವೃದ್ಧಿಯನ್ನು ಮಾಡಬೇಕೆಂದು ಹೇಳಿದ್ದಾರೆ. ಆ ಬೋರ್ಡಿನಲ್ಲಿ ಕನಿಷ್ಠಪಕ್ಷ ಕಡಮೆ ಸಂಖ್ಯೆಯಲ್ಲಿ ಸದಸ್ಯರು ಇರುವಂತೆ ನೋಡಿ. ಅದರಲ್ಲಿ ನ್ಯಾಯವಾದಂಥ ಅಭಿಪ್ರಾಯವನ್ನು ಕೊಡತಕ್ಕ ಉತ್ತಮ ಜನರನ್ನು ತೆಗೆದುಕೊಳ್ಳಬೇಕು. ಆ ಕಾರ್ಯವನ್ನು ಮುಂದುವರಿಸುವಂತೆ ಮಾಡಿದರೆ ಒಳ್ಳೆಯದು. ಆ ರೀತಿ ಮಾಡದೆ ಇತ್ತೀಚೆಗೆ ಷೆಡ್ಯೂಲ್ಡ್ ಕ್ಯಾಸ್ಟಿಗೆ ಒಂದು ಬೋರ್ಡ್ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಒಂದು ಬೋರ್ಡ್ ಮಾಡಿದ್ದಾರೆ. ಹೀಗೆ ಪ್ರತಿಜಾತಿಗೆ ಒಂದು ಏಕೆ? ಹೀಗೆ ನಾನಾ ತರಹ ಜಾತೀಯ ಬೋರ್ಡುಗಳೂ ಸಂಸ್ಥೆಗಳೂ, ರಚನೆಯಾಗುತ್ತಾಬಂದು, ಸರ್ಕಾರದ ಹಣವನ್ನೆಲ್ಲಾ ಇಂತಹ ಬೋರ್ಡುಗಳಿಗೋಸ್ಕರವೇ ದುರ್ವ್ಯಯ ಮಾಡುವುದಕ್ಕೆ ಬದಲು ಕೇವಲ ಈ ಜನಾಂಗಗಳನ್ನೆಲ್ಲಾ ಒಳಗೊಂಡಿರತಕ್ಕ ಮತ್ತು ದಕ್ಷರಾದ ಜನಗಳುಳ್ಳ ಒಂದೇ ಒಂದು ಬೋರ್ಡನ್ನು ಅಥವಾ ಸಂಸ್ಥೆಯನ್ನು ರಚನೆಮಾಡಿ ಹಣವನ್ನು ಸದ್ವಿನಿಯೋಗ ಮಾಡಿದರೆ ದೇಶಕ್ಕೂ ಒಳ್ಳೆಯದಾಗುತ್ತದೆ, ಆ ಜನಾಂಗವೂ ಏಳಿಗೆಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನನ್ನ ಅನೇಕ ಮಾನ್ಯ ಸ್ನೇಹಿತರು ಹರಿಜನರ ಮತ್ತು ಗಿರಿಜನರ ಏಳಿಗೆಯ ಬಗ್ಗೆ ಅನೇಕ ಸೂತ್ರಗಳನ್ನು ಇಟ್ಟಿದ್ದಾರೆ. ಆ ವಿಷಯದಲ್ಲಿ ನಾನು ಹೆಚ್ಚು ವೇಳೆ ತೆಗೆದುಕೊಳ್ಳದೆ ಕೆಲವು ವಿಚಾರಗಳನ್ನು ಮಾತ್ರ ಮುಂದಿಡಬೇಕೆಂದು ನಿಂತಿದ್ದೇನೆ. ಈಗ ನಾವು ರೂರಲ್ ಡೆವಲಪ್‌ಮೆಂಟ್, ಅಂದರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಏಳಿಗೆಯ ಬಗ್ಗೆ ಸರ್ಕಾರದವರು ನಮ್ಮ ಬಡ್ಜೆಟ್ಟಿನಲ್ಲಿ 1 ಕೋಟಿ 19 ಲಕ್ಷ 61 ಸಾವಿರ ರೂಪಾಯಿಗಳ ಒಂದು ನಿಧಿಯನ್ನು ಸಂಗ್ರಹ ಮಾಡಿಟ್ಟಿದ್ದಾರೆ. ಈ ಬಗ್ಗೆ ವಿಚಾರಮಾಡುವುದಾದರೆ, ಈಗ ನಮ್ಮ ಮೈಸೂರು ರಾಜ್ಯದಲ್ಲಿ 25 ಸಾವಿರಕ್ಕೆ ಮೇಲ್ಪಟ್ಟು ಅಥವಾ 26 ಸಾವಿರ ಹಳ್ಳಿಗಳಿವೆ. ಆ ಗ್ರಾಮಗಳ ಪೈಕಿ ಅನೇಕ ಹಳ್ಳಿಗಳಲ್ಲಿ ಗಿರಿಜನರೂ ಮತ್ತು ಹರಿಜನರೂ ವಾಸಿಸುವುದೇ ಹೆಚ್ಚಾಗಿದೆ. ಅಂತಹ ಜನರಿಗೆ ಈಗ ಬೇಕಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಒದಗಿಸಿ ಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದರಲ್ಲೂ ಹೆಚ್ಚಿಗೆ ಆ ಗ್ರಾಮಗಳಲ್ಲಿ ಶೇಕಡ ಅರ್ಧಭಾಗದಷ್ಟು ಹಣ್ಣುಮಕ್ಕಳೇ ವಾಸಿಸುತ್ತಿರುವಾಗ ಆ ಜನರ ಏಳಿಗೆಗಾಗಿ ಅತ್ಯಲ್ಪ ಪ್ರಮಾಣದಲ್ಲಿಟ್ಟಿರುವ ಈ ನಿಧಿ ಏನೇನೂ ಸಾಲದೇ ಇರುವಂಥಾದ್ದಾಗಿದೆ. ಈ ವಿಷಯವನ್ನು ನಾನು ಸಮರ್ಥನೆ ಮಾಡುತ್ತಾ ಕೆಲವೊಂದು ಮಾತುಗಳನ್ನು ತಮ್ಮ ಮುಂದೆ ತರಲು ನಾನು ನಿಂತಿದ್ದೇನೆ.

ಈಗ ಅನೇಕ ಹಳ್ಳಿಗಳಲ್ಲಿ ಮುಖ್ಯವಾದ ಪ್ರಶ್ನೆ ಎಂದರೆ, ಹಳ್ಳಿಯ ಜನ ಹೊಟ್ಟೆಗೆ ಅನ್ನವಿಲ್ಲದಿದ್ದರೂ ಅಡ್ಡಿಯಿಲ್ಲ, ಮೈಗೆ ಬಟ್ಟೆ ಇಲ್ಲದಿದ್ದರೂ ಅಡ್ಡಿಯಿಲ್ಲ, ವಾಸಮಾಡುವುದಕ್ಕೆ ಒಂದು ಮನೆ ಬೇಕು, ಎನ್ನುವಂಥಾ ಭಾವನೆಯುಳ್ಳವರಾಗಿದ್ದಾರೆ. ಪಟ್ಟಣಗಳಲ್ಲಿ ವಾಸ ಮಾಡತಕ್ಕಂಥ ಜನರು ಹಳ್ಳಿಯಲ್ಲಿ ವಾಸಮಾಡತಕ್ಕಂಥ ಜನರ ಪರಿಸ್ಥಿತಿಯನ್ನು ಅರಿತಿರುವುದಿಲ್ಲ. ಇವೊತ್ತು ಹಳ್ಳಿಯಲ್ಲಿರತಕ್ಕ ಜನಗಳಿಗೆ ಒಂದು ಮನೆ ಕಟ್ಟಿಕೊಳ್ಳುವುದಕ್ಕೆ ಜಾಗ ಸಿಕ್ಕುವುದು ಬಹಳ ಕಷ್ಟವಾಗಿದೆ. ಮುಖ್ಯವಾಗಿ ಹಳ್ಳಿಯಲ್ಲಿರತಕ್ಕ ಹರಿಜನರು ಮತ್ತು ಹಿಂದುಳಿದ ವರ್ಗದವರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಜಾಗಗಳನ್ನು ಕೊಡಲು ಗ್ರಾಮವನ್ನು ಬಡಾವಣೆ ಮಾಡಬೇಕೆಂದರೆ ಅಲ್ಲಿ ಒಂದು ಎಕರೆ ಭೂಮಿ ಸಿಕ್ಕುವುದೂ ಬಹಳ ಕಷ್ಟವಾಗಿದೆ. ಒಂದಾನೊಂದು ಕಾಲದಲ್ಲಿ ಮನೆಯಲ್ಲಿ ಒಂದು ಕುಟುಂಬ ಇದ್ದದ್ದು ಇವೊತ್ತು ಆ ಒಂದು ಮನೆಯಲ್ಲಿ ಹತ್ತು ಕುಟುಂಬಗಳಾಗಿವೆ. ಆ ಹತ್ತು ಕುಟುಂಬಗಳ ಜನರು ಒಂದೇ ಮನೆಯಲ್ಲಿ, ಒಂದೇ ಕೋಣೆಯಲ್ಲಿ, ವಾಸಮಾಡುತ್ತಿದ್ದಾರೆ. ಅನೇಕ ಹಳ್ಳಿಗಳಲ್ಲಿ ಇಂಥಾ ಪರಿಸ್ಥಿತಿ ಇದೆ. ಈ ಒಂದು ದೃಷ್ಟಿಯಿಂದ ನಾನು ಸರ್ಕಾರದಲ್ಲಿ ಬೇಡಿಕೊಳ್ಳುವುದೇನೆಂದರೆ, ಮುಖ್ಯವಾಗಿ ಆದಷ್ಟು ಬೇಗನೆ ಹಿಂದುಳಿದವರ್ಗದವರಿಗೆ, ಹರಿಜನರಿಗೆ ಮತ್ತು ಗಿರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸೈಟುಗಳನ್ನು ಕಲ್ಪಿಸಿಕೊಟ್ಟು ಅವರು ಸುಖವಾಗಿ ವಾಸಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಬೇಕು.

ಇನ್ನು ಎರಡನೆಯದಾಗಿ ಹಳ್ಳಿಗಳಲ್ಲಿ ಸರ್ಕಾರದವರು ಮಾಡತಕ್ಕಂಥ ಕಾರ್ಯಗಳು ನಮ್ಮಲ್ಲಿ ಅನೇಕ ಇವೆ. ಮುಖ್ಯವಾಗಿ ವಿದ್ಯಾ ಸೌಕರ್ಯವನ್ನು ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ಒದಗಿಸಿ ಕೊಡಬೇಕು. ಈಗ ಸರ್ಕಾರದವರು ಹಳ್ಳಿಗಾಡಿನ ಅಭಿವೃದ್ಧಿಗಾಗಿ ಒದಗಿಸಿರತಕ್ಕಂಥ ಹಣವನ್ನು ಹಂಚಿದರೆ ಒಂದು ಹಳ್ಳಿಗೆ 617 ರೂಪಾಯಿಗಳು ಬರುತ್ತವೆ. ಈ ರೀತಿ ಹಣವನ್ನು ಒದಗಿಸುವುದಾದರೆ ಅದರಿಂದ ಬಡ ಜನಗಳು ಇರತಕ್ಕಂಥ ಒಂದು ಹಳ್ಳಿಯಲ್ಲಿ ಯಾವ ರೀತಿ ಕಲ್ಯಾಣವನ್ನು ಮಾಡುವುದಕ್ಕಾಗುತ್ತದೆ ಎನ್ನುವು

(ಶ್ರೀ ಶರಣಪ್ಪ)

ದನ್ನು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಈ ವಿಚಾರವನ್ನು ನಾನು ಸರ್ಕಾರದವರಲ್ಲಿ ಆಗ್ರಹ ಪೂರ್ವಕವಾಗಿ ಹೇಳುತ್ತೇನೆ. ಹಳ್ಳಿಗಳಲ್ಲಿರತಕ್ಕ ಜನಗಳಿಗೆ ಸರ್ಕಾರದವರು ಅನೇಕ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಹಳ್ಳಿಯ ಜನಗಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ಬಹಳ ಕಷ್ಟ. ಆ ಒಂದು ದೃಷ್ಟಿಯಿಂದ ಅವರಿಗೆ ನಿರ್ಮಲವಾದ ಕುಡಿಯುವ ನೀರಿನ ಸೌಕರ್ಯ ಮತ್ತು ಚಿಕಿತ್ಸೆಗಾಗಿ ಆಸ್ಪತ್ರೆಗಳು ಇವುಗಳು ಏರ್ಪಾಡು ಮಾಡಿದರೆ ಒಳ್ಳೆಯದು. ಹಳ್ಳಿಜನಗಳು ಆರೋಗ್ಯವಂತರಾಗಿರಬೇಕಾದ್ದು ಅವಶ್ಯಕ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಯೋಗ್ಯ ರೀತಿಯಿಂದ ನೋಡಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನೊಂದು ವಿಚಾರ. ಈಗ ಅನೇಕ ದೃಷ್ಟಿಗಳಿಂದಲೂ ನಮ್ಮ ಗ್ರಾಮಾಂತರ ಪ್ರದೇಶಗಳು ಬಹಳ ಹಿಂದುಳಿದಿವೆ. ಕೆಲವೊಂದು ಹಳ್ಳಿಗಳಲ್ಲಿ ಜನರು ಯಾವರೀತಿಯಿಂದ ವಾಸಮಾಡುತ್ತಿದ್ದಾರೆ ಎಂಬುದು ಕೂಡ ಎಷ್ಟೋ ಜನ ಪಟ್ಟಣಿಗರಿಗೆ ಗೊತ್ತಿರುವುದಿಲ್ಲ. ಈಗ ಯಾವುದಾದರೂ ಒಂದು ಹಳ್ಳಿಗೆ ಹೋಗಬೇಕಾದರೆ ಯಾವ ಮಾರ್ಗದಿಂದ ಹೋಗಬೇಕು ಎನ್ನುವಂಥಾದ್ದು ಗೊತ್ತಿರುವುದಿಲ್ಲ. ಆದ್ದರಿಂದ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ ಸಣ್ಣ ಸಣ್ಣ ಮಾರ್ಗಗಳನ್ನು ಮಾಡಬೇಕು. ಜನಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಮಾರ್ಗಸೌಕರ್ಯವನ್ನು ಒದಗಿಸಿಕೊಟ್ಟು ಜನಗಳಿಗೆ ಒಬ್ಬೊಬ್ಬರಿಗೊಬ್ಬರಿಗೆ ಸಂಪರ್ಕ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಸಮಾಜಕಲ್ಯಾಣ ಯೋಜನೆಯಲ್ಲಿ ಮುಖ್ಯವಾಗಿ ಹೆಣ್ಣು ಮಕ್ಕಳ ಅಭಿವೃದ್ಧಿಯ ಬಗ್ಗೆ ಒಂದೆರಡು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ ಸಮಾಜವನ್ನು ಅಭಿವೃದ್ಧಿ ಮಾಡಬೇಕಾದರೆ ನಾವೆಲ್ಲರೂ ಬೆರೆಯಬೇಕು, ಒಂದುಗೂಡಬೇಕು. ಆ ರೀತಿ ನಾವೆಲ್ಲರೂ ಒಟ್ಟಿಗೆ ಬೆರೆತು ಒಂದು ಉತ್ತಮವಾದ ಸಮಾಜವನ್ನು ಕಟ್ಟಬೇಕು. ಮುಖ್ಯವಾಗಿ ಹೆಣ್ಣುಮಕ್ಕಳಿಗೆ ಸಂಬಂಧಪಟ್ಟ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಹಳ್ಳಿಯ ಮಟ್ಟದಲ್ಲಿ ಸಣ್ಣ ಸಣ್ಣ ಸಭೆಗಳನ್ನು ಏರ್ಪಾಡು ಮಾಡತಕ್ಕ ಒಂದು ಕಾರ್ಯವನ್ನು ಸರ್ಕಾರದವರು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ರೂರಲ್ ಡೆವಲಪ್‌ಮೆಂಟ್ ಮತ್ತು ಸೋಷಿಯಲ್ ವೆಲ್‌ಫೇರ್ ಬೇಡಿಕೆಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇವೊತ್ತಿನ ದಿವಸ ಈ ಸಭೆಯಮುಂದೆ ಇಟ್ಟಿರುವ ಬೇಡಿಕೆಗಳಲ್ಲಿ ಅನೇಕ ಬಾಬುಗಳನ್ನು ಒಟ್ಟುಗೂಡಿಸಿದ್ದಾರೆ.

ಎಕ್ಸೈಜ್ ಡ್ಯೂಟಿ ವಿಷಯದಲ್ಲಿ ಹೇಳುವುದಾದರೆ, ಪಾನ ನಿರೋಧವನ್ನು ದೇಶದಾದ್ಯಂತ ಜಾರಿಗೆ ತರುತ್ತೇವೆಂದು ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚಿನಿಂದಲೂ ಹೇಳುತ್ತಿದ್ದಾರೆ. ಇತ್ತೀಚೆಗೆ ಇನ್ನು ಮೂರು ವರ್ಷಗಳಲ್ಲಿ ದೇಶಾದ್ಯಂತ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರುತ್ತೇವೆಂದು ಸರ್ಕಾರದವರು ಹೇಳಿದರು. ಆದರೆ ಕಾಂಗ್ರೆಸ್ ಸರ್ಕಾರ ಬಂದು 15 ವರ್ಷಗಳಾದರೂ ಕೂಡ ದೇಶದಾದ್ಯಂತ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತಂದಿಲ್ಲ. ಇದನ್ನು ನೋಡಿದರೆ ಇವರು ಪ್ರೊಹಿಬಿಷನ್ ಪಾಲಸಿಯನ್ನು ಬಿಟ್ಟಹಾಗೆ ಕಾಣುತ್ತದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಪ್ರೊಹಿಬಿಷನ್ ಪಾಲಸಿಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆಂದು ಹೇಳಿ ಸರ್ಕಾರದವರು ಅನೌನ್ಸ್ ಮಾಡಿದರೆ ಚೆನ್ನಾಗಿರುತ್ತದೆ.

ಇನ್ನೊಂದು ವಿಷಯ. ಈಗ ಸರ್ಕಾರದವರು ಎಕ್ಸೈಜು ಹರಾಜು ಹಾಕಬೇಕಾದರೆ ಡಿಸ್ಟ್ರಿಕ್ಟ್ ಮತ್ತು ಸಿಟಿ ಎಲ್ಲಾ ಒಟ್ಟಾಗಿ ಸೇರಿಸಿ ಹರಾಜು ಹಾಕುತ್ತಾರೆ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ, ಕೇವಲ ಬಂಡವಾಳಷಾಹಿಗಳಿಗೆ ಪ್ರೋತ್ಸಾಹ ಕೊಡುವುದಾಗಿದೆ. ಯಾವ ಸಣ್ಣ ಕಂಟ್ರಾಕ್ಟರೂ ಬಂದು ಬಿಡ್ ಮಾಡುವುದಕ್ಕಾಗುವುದಿಲ್ಲ. ಕಂಟ್ರಾಕ್ಟರುಗಳು ಹರಾಜಿಗೆ ಬಂದು ಬಿಡ್ ಮಾಡಿದರೆ ಅದು ಕೋಟ್ಯಾಂತರ ರೂಪಾಯಿಗಳಿಗೆ ಹೋಗುತ್ತದೆ. ಆದರೆ ಕಂಟ್ರಾಕ್ಟರುಗಳೇ ಹರಾಜಿಗೆ ಬರುವುದಿಲ್ಲ. ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಯಾರಿಗೋ ಅನುಕೂಲ ಮಾಡುವುದಕ್ಕಾಗಿ ಈ ಒಂದು ಹರಾಜಿನ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಎಕ್ಸೈಜ್ ಹರಾಜು ಹಾಕುವಾಗ ತಾಲ್ಲೂಕುಗಳೇ ಬೇರೆ ಹೋಬಳಿಗಳೇ ಬೇರೆ ಹರಾಜು ಹಾಕಿದರೆ ಒಳ್ಳೆಯದು. ಆ ರೀತಿ ಏತಕ್ಕೋಸ್ಕರ ಹರಾಜು ಹಾಕುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅದಕ್ಕೆ ಭಾಗದಾರರೂ ಕೂಡ ಬಹು ಮಂದಿ ಇದ್ದೇ ಇರಬೇಕೆಂದು ಕಾಣುತ್ತದೆ. ಅನೇಕವೇಳೆ ಈ ಎಕ್ಸೈಜ್ ಹರಾಜಿಗೆ ಸಂಬಂಧಪಟ್ಟ ನ್ಯೂನತೆಗಳನ್ನು ಸರ್ಕಾರದವರ ಗಮನಕ್ಕೆ ತಂದರೂ ಅವರು ಅವನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಏತಕ್ಕೆಂದರೆ ಸರ್ಕಾರದವರು ಯಾರಿಗೆ ಈ ಎಕ್ಸೈಜ್ ಕಂಟ್ರಾಕ್ಟ್ ಕೊಟ್ಟಿರುತ್ತಾರೆಯೋ ಅವರ ವಿಚಾರದಲ್ಲಿ ಇವರಿಗೆ ಯಾವುದೋ ಒಂದು ತರಹ ಅಭಿಮಾನವಿರುತ್ತದೆ. ಇದರ ಬಗ್ಗೆ ನಾವು ಎಷ್ಟೋ ಟೀಕೆಗಳನ್ನು ಮಾಡಿದರೂ ಅದಕ್ಕೆ ಗಮನಕೊಡುತ್ತಾ ಇಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಇನ್ನು ಸ್ಟ್ಯಾಂಪ್ ಡ್ಯೂಟಿಯ ವಿಚಾರದಲ್ಲಿ ಹೇಳುವುದಾದರೆ, ರೈತರು 100-200 ರೂಪಾಯಿಗಳ ಸಾಲಕ್ಕಾಗಿ ಯಾರೋ ಬೇರೆಯವರಿಗೆ ಒಂದು ಸಾವಿರ ಎರಡು ಸಾವಿರ ರೂಪಾಯಿಗಳಿಗೆ ಬೆಲೆಬಾಳುವ ತಮ್ಮ ಜಮೀನನ್ನು ಖರೀದಿಗೆ ಬರೆದುಕೊಟ್ಟಿರುತ್ತಾರೆ. ಅದನ್ನೇ ಹಿಂದಕ್ಕೆ ನಾಮಿನಲ್ ಸೇಲ್ ಮಾಡಿಕೊಂಡು ಬರೆಸಿಕೊಳ್ಳಬೇಕಾದರೆ ಅವರಿಗೆ 250–500 ರೂಪಾಯಿ ಜುಲ್ಮಾನೆ ಹಾಕುತ್ತಾರೆ. ಇದನ್ನು ವಜಾಮಾಡುವುದಕ್ಕೆ ರೈತ ಕೋರ್ಟಿಗೆ ಹೋಗಿ ಆ ಖರ್ಚನ್ನು ಕೊಡಬೇಕಾಗುತ್ತದೆ. ಅವನು ಬರೆದುಕೊಟ್ಟದ್ದನ್ನು ವಾಪಸ್ಸು ಬರೆಸಿಕೊಳ್ಳಬೇಕಾದರೆ ಸ್ಟ್ಯಾಂಪ್ ಡ್ಯೂಟಿ ಕೊಡಬೇಕು. ಫೈನ್ 250-500 ರೂಪಾಯಿ ಕೊಡಬೇಕು. ಈ ರೀತಿ ಮಾಡಿರುವುದರಿಂದ ಬಡವರು ಹಾಳಾಗಿಹೋಗುತ್ತಾರೆ. ಇಂಥ ಅನೇಕ ಕೇಸುಗಳು ಕೋರ್ಟಿನಲ್ಲಿವೆ.

ಇನ್ನು ಷುಗರ್‌ಕೇನ್ ಸೆಸ್ ಫಂಡಿನ ವಿಷಯದಲ್ಲಿ ಹೇಳುವುದಾದರೆ, ಈ ಷುಗರ್‌ಕೇನ್ ಸೆಸ್ ಫಂಡ್ ಎಲ್ಲಿ ಬರುತ್ತದೋ ಎಲ್ಲಿ ಹೋಗುತ್ತದೋ ಗೊತ್ತೇ ಆಗುವುದಿಲ್ಲ. ಈ ಷುಗರ್‌ಕೇನ್ ಸೆಸ್ ಆಡಳಿತಕ್ಕೆ ಒಂದು ಕಮಿಟಿಯನ್ನು ಮಾಡಿದರು. ಈ ಕಮಿಟಿಯಲ್ಲಿ

ಸರ್ಕಾರದವರು ನಾಮಿನೇಟ್ ಮಾಡಿರುವವರೇ ಇರುತ್ತಾರೆ. ಅನೇಕ ವೇಳೆ ಇದರ ಮೇಲೆ ಟೀಕೆ ಬಂದರೂ ಕೂಡ ಏತಕ್ಕೋಸ್ಕರ ಈ ಹಣ ವಿನಿಯೋಗ ವಾಗುತ್ತದೆ, ಎಷ್ಟರಮಟ್ಟಿಗೆ ಜನಗಳಿಗೆ ಅದರಿಂದ ಅನುಕೂಲವಾಗುತ್ತದೆ ಎನ್ನುವುದನ್ನು ನಾವು ಯಾವ ವರದಿಯಲ್ಲೂ ನೋಡಿಲ್ಲ. ಷುಗರ್‌ಕೇನ್ ಸೆಸ್ ಫಂಡಿಗೆ ಎಷ್ಟೋ ಲಕ್ಷ ರೂಪಾಯಿಗಳು ಬರುತ್ತವೆ. ಇಷ್ಟು ದುಡ್ಡನ್ನೂ ಯಾವ ರೀತಿ ಖರ್ಚುಮಾಡುತ್ತಾರೆಂಬುದೇ ಗೊತ್ತಾಗುವುದಿಲ್ಲ. ರೈತರಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸುವುದಕ್ಕೆ ಈ ಸೆಸ್ಸನ್ನು ರೈತನಿಂದ ವಸೂಲುಮಾಡುತ್ತಾರೆ. ಆದರೆ ಇದರಿಂದ ರೈತನಿಗೆ ನೂರಕ್ಕೆ ಹತ್ತು ರೂಪಾಯಿ ಕೂಡ ಬೆನಿಫಿಟ್ ಆಗುವುದಿಲ್ಲ.

ಇನ್ನು ಈ ಎಕ್ಸೈಜ್ ಡ್ಯೂಟಿನಲ್ಲಿ ಹಣ ಬರುತ್ತಾ ಇರುವುದು ಯಾವ ಯಾವ ರೀತಿಯಲ್ಲಿ ಕಡಮೆ ಯಾಗುತ್ತಾ ಇದೆ ಎನ್ನುವುದನ್ನು ಸ್ವಲ್ಪ ಪರಿಶೀಲನೆ ಮಾಡಬೇಕು. ಮತ್ತು ಟೊಬ್ಯಾಕೋಸೆಸ್ ಕೇಂದ್ರ ಸರ್ಕಾರದಿಂದ ಬರತಕ್ಕದ್ದನ್ನು ಪೂರ್ತಿ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಈ ಹೊಸ ವ್ಯವಸ್ಥೆಯಿಂದ ನಮಗೆ ಕಡಮೆ ಬರಬಹುದು ಎಂದು ಕಾಣುತ್ತಾ ಇದೆ. Entertainment Betting Tax ವರ್ಷ ವರ್ಷಕ್ಕೆ ಜಾಸ್ತಿ ಬರುತ್ತಾ ಇಲ್ಲ. ಬೆಟ್ಟಿಂಗ್ ನಿಲ್ಲಿಸಬೇಕೆಂದರೆ ನಿಲ್ಲಿಸಲೂ ಇಲ್ಲ. ಅದನ್ನೂ ಕೂಡ ಸ್ವಲ್ಪ ಚೆನ್ನಾಗಿ ನೋಡಬೇಕು.

Sri J. P. SARWESH (Sedum).—I would like to say a few words about the social welfare department. In this department Rs. 61.12 lakhs is provided for the upliftment and welfare of not only Scheduled costes but also the scheduled tribes and also of other backward classes and some nomadic and non-nomadic tribes. For all these tribles and classes, this sum of Rs. 61. 12 lakhs is provided for their education, economic upliftment, housing and other things. Within this limited amount we cannot expect any kind of progress of these classes of people. It is necessary that Government should think of some other means. All these years we used to get nothing but meagre amounts from the Agriculture Department, Co-operative Department and several other departments. Government should see that these departments give proper attention towards the upliftment of the scheduled castes and tribes, by spending a portion of their funds.

I wish to say something about the functioning of the Social Welfare department in the districts. Some years back, the welfare officer in the district used to be the sanctioning authority. To-day he is not. To-day, taluk boards are entrusted with the responsibility of distributing the funds. The work of the social welfare officer is nothing; he simply recommend the application of a member of Scheduled castes or the scheduled tribes to the taluk board. Even for agriculture colonies, very little amounts are provided and the taluk boards do not provide for the upliftment of the scheduled castes and tribes in their own budget. We have to see that some provision is made. The scheme of agriculture colonies is very good and something is to be done for their progress. I would suggest that in each taluk at least three colonies of 50 houses each should be sanctioned.

Regarding the Advisory Board for the scheduled castes and tribes, I would request the Hon'ble Minister concerned to go through the Second Report of the Backward Classes Commission by Sri Kant in which he has clearly stated that members of the scheduled castes and tribes should be made members of the Board.

Last time when we went to several districts, we got some idea of how the District Welfare Department was doing the upliftment work. I want to congratulate the social welfare department for having done a good deal in the educational field. Government has done wonderfully well on the education side. I want Government to pay some more attention and increase the strength in each hostel so that in this direction something tangible can be done for these classes of people. There are three kinds of hostels—one maintained and aided by the Education Department, one run by the Social Welfare Department and the third is aided hostel. Uniform rules should be made applicable to all these hostels and they should be followed and the inmates of the hostels should be looked after properly.

Sri G. VENKATAI GOWDA.—Mr. Speaker, sir, several Hon'ble Members of this House have confined their observations to rural development and social welfare departments actually. Since the time at my disposal is short, let me confine myself to the other demands that are placed for

(SRI G. VENKATAI GOWDA)

the approval of this House this afternoon. So far as registration is concerned, Honourable Members could see from 1960-61. ....

Sri K. LAKKAPPA (Hebbur).—I rise to a point of order. The Hon'ble Minister has not moved the Demands with respect to Registration and Excise and so the members are not entitled to discuss those Demands.

Mr. DEPUTY SPEAKER.—All the Demands are placed before the House.

Sri G. VENKATAI GOWDA.—So far as registration is concerned, from 1960-61 up to 1962-63, there is an increase in expenditure of Rs. 5,40,000 whereas there is an increased revenue of three lakhs of rupees and odd. That means the expenditure incurred is more than the revenue derived so far as registration is concerned. So I wish to ask the Government, what justification is there for there to come before the House and ask for a grant which is more than necessary. My submission is, when they are able to derive an increased revenue of about Rs. 3 lakhs, they want an additional expenditure of Rs. 5 lakhs and odd. Is there any justification for such a demand.? So far as the State excise duties are concerned, her also I fail to understand why there is increase so far as expenditure is concerned. It is natural that the revenue has gone down because of the introduction of prohibition. The revenue has correspondingly gone down while the expenditure of 1960-61 up to 1962-63 has risen by nearly Rs. 8,000. There is no reason why there should be additional expenditure when we have introduced prohibition and we are incurring loss so far as the revenue is concerned.

In respect of other Taxes and Duties the other day, I am told as I was not present, the Finance Minister made a statement that if the House were to extend co operation he would be willing to impose betting tax to the extent of 25 per cent. There is a provision in the Mysore Betting Tax Act that the State Government could impose a levy of 25 per cent on the betting tax and get more income in that regard. So far as the entertainment tax is concerned, there is a discretion left to the Government that they could levy to the extent of 15 percent of the entertainment tax revenue.

5-00 P.M.

In respect of rural development, the amount provided is very meagre with reference to the advancement of arguments that we have been making to establish Panchayat Raj and the Development Councils taking up local-self-government Institutions. Such being the case, there is every need that more funds have to be provided. Not only that, but more powers have to be given to all these bodies to see that the development activities are carried through.

In respect of social welfare, much has been said by Hon'ble Members. I should say that more amounts have got to be asked for so far as the Social Welfare Department is concerned. The amount provided for is meagre if we take into consideration the magnitude of the work that we have to do. So far as economic and other aids that are given to these people are concerned, I think that in many a case, this is going to waste. Some constructive policy has to be laid down to see that their condition is bettered to an extent that is expected by the Government. In fact, for the last fifteen years, Government have not reviewed to what extent the amelioration work regarding the scheduled castes and tribes has been improved, to what extent they have been able to give them aid and how many people have been benefited, etc. They have not made a review of the work accomplished. In fact, Government ought to have reviewed it to see that those people are really helped wherever they are.

So far as the education of these Scheduled Castes and Tribes people is concerned, more amounts have got to be provided and more grants have to be provided. Now, for a student, they are paying Rs 15 per month for ten months in a year. This amount is inadequate if we take into consideration the existing prices and other

circumstances. I am, therefore, appealing to Government to enhance this amount by at least three Rupees, *i.e.*, make it Rs. 18 per boarder.

More number of women and Child Welfare centres have to be started. Wherever the population of Scheduled caste is more than four or five *hundred*, they should have one such centre. But no useful purpose is served if we take into consideration the magnitude of this problem. Therefore, it is absolutely necessary that more centres have to be located and also see that the money allotted to these centres is usefully spent and some benefit is derived. With these observations, I close my talk.

†ಶ್ರೀಮತಿ ಯಶೋಧರ ದಾಸಪ್ಪ (ಸಮಾಜ ಕಲ್ಯಾಣ ಶಾಖೆಯ ಸಚಿವರು).—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣದ ವಿಚಾರವಾಗಿ ಅನೇಕ ಮಾನ್ಯ ಸದಸ್ಯರುಗಳು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಟೀಕೆಗಳನ್ನೂ ಮಾಡಿದ್ದಾರೆ. ಇದೊಂದು ಸಂತೋಷ. ಒಳ್ಳೆಯ ಸರಿಯಾದಂತಹ ಟೀಕೆಗಳು ಬಂದರೆ ಅವನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬಹುದು. ಸರಿಯಾದ ಟೀಕೆಗಳನ್ನು ಮಾಡಿದರೆ ಅದೇನೂ ತಪ್ಪಲ್ಲ. ಸರಿಯಾದ ಆಧಾರದ ಮೇಲೆ ಬರುವಂತಹ ಟೀಕೆಗಳನ್ನು ಸರ್ಕಾರ ಸರಿಪಡಿಸಿಕೊಳ್ಳುವುದು ಅಗೌರವವೇನಲ್ಲ.

ಮೊದಲನೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ರಂಗನಾಥ್‌ರವರು ಹೇಳಿದ ವಿಚಾರದಲ್ಲಿ ಅನೇಕ ಸಲಹೆಗಳು ಬಹಳ ರಚನಾತ್ಮಕವಾಗಿವೆ. ನಾನು ಇಲ್ಲಿ ಸುಮಾರು ಮೂರು ತಿಂಗಳಿನಿಂದ ಮಂತ್ರಿಯಾಗಿದ್ದೇನೆ. ಅವರು ಹೇಳಿದಂತೆ ನಾನು ಹಿಂದೆ ಗ್ರಾಮಾಂತರ ಸೇವೆಯ ಕೆಲಸಗಳನ್ನು ಬಹಳ ದಿನದಿಂದ, ಹರಿಜನರ ಗಿರಿಜನರ ಗ್ರಾಮಸೇವಾ ಕೆಲಸಗಳನ್ನು ಮಾಡುತ್ತಿದ್ದೆ. ಅದರ ವಿಚಾರವಾಗಿ ಹೆಚ್ಚಿಗೆ ಗೊತ್ತಿರುವುದರಿಂದ ಇದರಲ್ಲಿರತಕ್ಕ ಲೋಪದೋಷಗಳು ನನಗೆ ವೇದ್ಯವಾಗಿವೆ. ಇದನ್ನು ಸರಿಪಡಿಸುವುದಕ್ಕೆ ಹೆಚ್ಚಾಗಿ ಮಾನ್ಯ ಸದಸ್ಯರೆಲ್ಲರ ನೆರವನ್ನು ಕೇಳುತ್ತಿದ್ದೇನೆ. ಸಮಾಜ ಕಲ್ಯಾಣ ಕೇವಲ ಹಣವನ್ನು ಕೊಡುವುದರಿಂದಲೇ ಆಗುವುದಿಲ್ಲ. ತಾವು ಹೇಳಿದಹಾಗೆ, ಸಾಮಾನ್ಯವಾಗಿ ಸ್ವಾತಂತ್ರ್ಯ ಬಂದಮೇಲೆ, ಹರಿಜನರಿಗೆ, ಗಿರಿಜನರಿಗೆ ವಿಶೇಷವಾದ ಸಹಾಯವನ್ನು ಕೇಂದ್ರ ಸರಕಾರದವರು ಕೊಡುತ್ತಿದ್ದಾರೆ. ನಮ್ಮ ಸರಕಾರದವರೂ ಒದಗಿಸುತ್ತಿದ್ದಾರೆ. ನಿಮಗೆ ಇದರ ಅಂಕಿಅಂಶಗಳನ್ನು ಕೊಡಲು ಹೆಚ್ಚಿನ ಸಮಯ ತೆಗೆದುಕೊಳ್ಳಬೇಕಾಗುವುದರಿಂದ ಅದನ್ನು ಅಲಾಯಿದಾ ತಮಗೆಲ್ಲರಿಗೂ ಒದಗಿಸಿ ಕೊಡುತ್ತೇನೆ. ಮೂರನೆಯ ಯೋಜನೆಯಲ್ಲಿ ಎಷ್ಟು ಕೆಲಸಗಳಿವೆ, ಎಷ್ಟು ಹಾಸ್ಟಲ್ಲುಗಳಾಗಿವೆ, ಎಷ್ಟು ಕಾಲೋನಿಗಳಾಗಿವೆ ಮನೆಗಳಾಗಿವೆ, ಎನ್ನುವ ವಿಚಾರಗಳಲ್ಲಿ ಇನ್ನೂ ಎಷ್ಟು ಮುಂದುವರಿಯಬೇಕು ಎನ್ನುವ ಅಂಕಿಅಂಶಗಳೊಡನೆ ತಮ್ಮೆಲ್ಲರಿಗೂ ನಮ್ಮ ಖಾತೆಯಿಂದ ಬರುವಂತೆ ಏರ್ಪಾಡುಮಾಡುತ್ತೇನೆ. ಸಾಮಾನ್ಯವಾಗಿ ಇಲ್ಲಿ ಹೇಳಿರತಕ್ಕ ಕೆಲವು ಸಲಹೆಗಳ ಬಗ್ಗೆ ಕೆಲವೇ ನಿಮಿಷಗಳಷ್ಟು ಕಾಲವನ್ನು ತೆಗೆದುಕೊಂಡು ಹೇಳುತ್ತೇನೆ.

ದೇಶದಲ್ಲಿ ಈಗ ಸರಿಯಾದ ಸಮಾಜ ಕಲ್ಯಾಣ ಆಗುತ್ತಿಲ್ಲ ಎಂದು ಹೇಳುವಂತೆ ನನಗೂ ಸಹ ಮೂರೂವರೆ ತಿಂಗಳಿನಿಂದ ಕೆಲವು ಕಡೆಯಿಂದ ವರದಿಗಳು ಬರುತ್ತಿವೆ. ಅದು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಜನಗಳೂ ಕೂಡ ಸರಿಯಾದ ರೀತಿಯಲ್ಲಿ ನಡೆಯದೇ ಹೋದರೆ ಅಧಿಕಾರಿಗಳಿಗೂ ತೊಂದರೆಯಾಗುತ್ತದೆ ಎನ್ನುವುದನ್ನು ಮರೆಯಬಾರದು. ಈಗ ಹಾಸ್ಟಲುಗಳನ್ನು ನಡೆಸುತ್ತಿದ್ದೇವೆ. ಅಲ್ಲಿ ಪ್ರತಿ ಮಕ್ಕಳಿಗೂ ಹದಿನೈದು ರೂಪಾಯಿನಂತೆ ಕೊಡಬೇಕೆಂದು ಇದೆ. ಅದು ಸರಿಯಾದ ರೀತಿಯಲ್ಲಿ ದೊರಕದೇ ಹೋದರೆ ಅದಕ್ಕೆ ಯಾರು ಯಾರು ಜವಾಬುದಾರರು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಯಾರೇ ಆಗಿರಲಿ, ಸಮಾಜ ಕಲ್ಯಾಣ ಜನರಿಂದ ಜನಗಳಿಗೆ ಆದರೆ ಜನಗಳಿಗೆ ಕಲ್ಯಾಣವಾಗುತ್ತದೆ. ದೇಶಕ್ಕೆ ಕಲ್ಯಾಣವಾಗುವಂತೆ ಮಾಡಬೇಕಾದರೆ ಅಧಿಕಾರಿಗಳಾಗಿರುವ ಜನರನ್ನು ತಾವೂ ಜನರೆಂದು ತಿಳಿದುಕೊಳ್ಳಬೇಕಾಗಿದೆ. ಈಗ ಸರಕಾರದವರೇನೋ ಹಣ ಕೊಡುತ್ತಾರೆ. ಅದು ಸರಿಯಾಗಿ ವಿನಿಯೋಗವಾಗದೇ ಹೋದರೆ, ನಮ್ಮೆಲ್ಲರ ಜವಾಬುದಾರಿ ಅದರಲ್ಲಿದೆ. ಯಾವ ಯಾವ ಕಡೆ ಈ ತರಹ ಇದೆ, ಅದಕ್ಕೆ ಸರಿಯಾದ ಚಿಕಿತ್ಸೆಗಳನ್ನು ಮಾಡುವುದಕ್ಕೆ ತಾವೆಲ್ಲರೂ ನೆರವು ಕೊಡಬೇಕು ಎಂದು ಹೇಳುತ್ತೇನೆ. Grant-in-Aid ಎಂದು ಹಾಸ್ಟಲುಗಳಿಗೆ ಹಣವನ್ನು ಕೊಡುತ್ತಿದ್ದಾರೆ. ಇದರಲ್ಲಿ ಸರಕಾರವೇ ನೇರವಾಗಿ ನಡೆಸುವ ಹಾಸ್ಟಲ್ಲುಗಳೂ ಇವೆ. ಕೆಲವು ಹಾಸ್ಟಲ್ಲುಗಳಿಗೆ ಲಂಪ್‌ಸಂ ಗ್ರಾಂಟನ್ನು ಕೊಡುತ್ತಿದ್ದಾರೆ. ಈರೀತಿ ಕೆಲವು ಹಾಸ್ಟಲುಗಳಿವೆ. ಕೆಲವು ಕಡೆಗಳಲ್ಲಿರುವ ಹಾಸ್ಟೆಲ್ಲುಗಳಲ್ಲಿ ಎಷ್ಟು ಜನರಿರಬೇಕೋ ಅಷ್ಟು ಜನ ಇಲ್ಲ ಎನ್ನುವುದು ತಿಳಿದುಬಂದಿದೆ. ಸರ್‌ಪ್ರೈಸ್ ವಿಸಿಟ್ ಮಾಡಿದಾಗ ಏನೇನು ವಿದ್ಯಮಾನಗಳು ನಡೆಯುತ್ತವೆ ಎನ್ನುವುದು ಗೊತ್ತಾಗುತ್ತದೆ. ಸರಕಾರಿ ಹಾಸ್ಟಲ್ಲುಗಳಲ್ಲಿಯೂ ಈರೀತಿ ಇದೆ. ಖಾಸಗೀ ಹಾಸ್ಟಲ್ಲುಗಳಲ್ಲಿಯೂ ಕೂಡ ಅನೇಕ ಲೋಪದೋಷಗಳಿವೆ. ಮನೆಕಟ್ಟುವುದಕ್ಕೆ ಹಣ ಕೊಡುತ್ತಿದ್ದರೂ ಅದು ಸರಿಯಾದ ರೀತಿಯಲ್ಲಿ ಜನಗಳ ಕೈಗೆ ಸೇರದೆ ಇದೆ ಎನ್ನುವುದರಲ್ಲಿ ಕೂಡ ಸತ್ಯಾಂಶವಿದೆ. ಇದನ್ನು ನೋಡಿ ಮನೆಗಾಗಿ ಕೊಡುವ ದುಡ್ಡನ್ನು ನಿಲ್ಲಿಸಿ ಇನ್ನು ಮುಂದೆ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಖರ್ಚು ಮಾಡಬೇಕೆಂದು ಯೋಚಿಸಿದ್ದೇವೆ. ಆದರೆ ಜನರಿಗೆ ಮನೆ ಬೇಕೇ ಬೇಕು. ಮನೆ ಇಲ್ಲದೇಹೋದರೆ, ಅದರಲ್ಲೂ ಹೆಣ್ಣುಮಕ್ಕಳಿಗೆ, ಬಾಣಂತಿ ಬಸುರಿಯರಿಗೆ ಕೆಲವು ಕಡೆ ತೊಂದರೆಯಾಗುತ್ತದೆ. ಅದರಲ್ಲೂ ಕೆಲವರು ಗುಡಿಸಿಲುಗಳಲ್ಲಿದ್ದಾರೆ. ಇಂತಹ ಜನಕ್ಕೆ ಖಂಡಿತವಾಗಿಯೂ ಮನೆಗಳ ಸೌಕರ್ಯವನ್ನು ಒದಗಿಸಬೇಕು. ಈಗ ಮನೆಗಳಿಗಾಗಿ ನಾನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಆದರೂ ಹೀಗೆ ಕೊಡುವ ಹಣ ಜನಗಳ ಕೈ ಸೇರದೆ ಕೆಲವು ಕಡೆ ಅರ್ಧಮರ್ಧ ಮನೆಗಳಾಗಿವೆ. ಇದನ್ನು ಪೂರ್ತಿ ಮಾಡಬೇಕೆಂಬ ಮನವಿ ಸರಕಾರದ ಗಮನಕ್ಕೆ ಬಂದಿದೆ. ಈಗ ಪುನಃ ಮನೆಗಳನ್ನು ಕಟ್ಟಬೇಕು ಎಂದು ಜನಗಳಿಂದ ಜಾಸ್ತಿ ಒತ್ತಾಯ ಬರುತ್ತಿದೆ. Economic uplift ಗಾಗಿ ಎಂದು ಈ ಸಲದ ಬಡ್ಜೆಟ್ಟಿನಲ್ಲಿ ಸುಮಾರು ಶೇಕಡಾ ಮುವ್ವತ್ತೆಂಟು ಪರ್ಸೆಂಟು ಎಂದಿದೆ. ಇದರಲ್ಲಿ ಶೇಕಡಾ

(ಶ್ರೀಮತಿ ಯಶೋಧರ ದಾಸಪ್ಪ)

ಮುವ್ವತ್ತರಷ್ಟು ಮಾತ್ರ ಖರ್ಚುಮಾಡಿ ಉಳಿದ ಶೇಕಡಾ ಎಂಟು ಪರ್ಸೆಂಟಿನಷ್ಟನ್ನು ಮನೆಗಳಿಗಾಗಿ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅದರಲ್ಲೂ ಅನೇಕ ಮನೆಗಳು ಅರ್ಧಮರ್ಧವಾಗಿವೆ. ಕೆಲವು ಕಡೆ ಆಗ್ರಿಕಲ್ಚರು ಕಾಲೋನಿಗಳ ಕೆಲಸ ನಿಂತು ಹೋಗಿದೆ. ಇದನ್ನೂ ಪೂರ್ತಿಮಾಡಬೇಕಾಗಿದೆ. ಕೇಂದ್ರ ಸರಕಾರದವರು ಈ ಕಾಲೋನಿಗಳನ್ನು ಮೂರನೇ ಯೋಜನೆಯಲ್ಲಿ ನಿಲ್ಲಿಸಿ ಮುನಿಸಿಪಾಲಿಟಿಗಳಲ್ಲಿ ಕೆಲಸಮಾಡುವ ಸ್ವೀಪರುಗಳು ಈಗ ದೇಶದಲ್ಲಿನ ಹೊಲಸನ್ನೆಲ್ಲಾ ತಲೆಯ ಮೇಲೆ ಹೊರುವುದನ್ನು ತಪ್ಪಿಸಿ ಅವರಿಗೆ ಒಳ್ಳೆಯ ಗಾಡಿಗಳನ್ನು ಮಾಡಿಸಬೇಕೆಂದು ಸಲಹೆ ಮಾಡಿದ್ದಾರೆ. ಇವರಿಗೂ ಮನೆಗಳನ್ನು ಕಟ್ಟಲು ಅವಕಾಶ ಮಾಡಿಕೊಡಬೇಕಾಗಿದೆ. ಮೂರನೆ ಯೋಜನೆಯಲ್ಲಿ ಕಾಲೋನಿಗಳಿಗಾಗಿ ಈ ರೀತಿಯಾಗಿ ಒದಗಿಸುತ್ತಿದ್ದೇವೆ.

ಮಾನ್ಯ ಸದಸ್ಯರು ಹೇಳುವ ಹಾಗೆ ಕಾಲೋನಿಗಳನ್ನು ಮಾಡಿದರೆ ಬಹಳ ಒಳ್ಳೆಯದು. ಇಪ್ಪತ್ತೈದು ಅಥವಾ ಐವತ್ತು ಮನೆಗಳನ್ನು ಒಂದು ಕಡೆ ಕಟ್ಟಬಹುದು. ನಾವು ಮನೆಗಾಗಿ ಕೊಡುವ 400 ರೂಪಾಯಿ ಅವರ ಕೈಗೆ ಹೋಗದೇಯಿರುವಂತೆ ಸೊಸೈಟಿಗಳಿಗೆ ಕೊಟ್ಟು ಅದರ ಜೊತೆಗೆ ಸಾಲವನ್ನು ಕೊಟ್ಟು ಅವರಿಗೆ ಚೆನ್ನಾಗಿ ಮನೆಗಳನ್ನು ಕಟ್ಟಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಜನರ ಕೈಯಲ್ಲಿ ಅಥವಾ ಮಧ್ಯಸ್ತಗಾರರ ಕೈಯಲ್ಲಿ ಹಣ ಸಿಕ್ಕಿ ವ್ಯರ್ಥವಾಗುವುದಕ್ಕೆ ಬದಲು ಸೊಸೈಟಿಗಳ ಮೂಲಕ ಮಾಡಿಸುವುದು ಒಳ್ಳೆಯದೆಂದು ನನ್ನ ಭಾವನೆ; ಮಾನ್ಯ ಸದಸ್ಯರೂ ಇದನ್ನು ಒಪ್ಪುತ್ತಾರೆಂದು ಭಾವಿಸುತ್ತೇನೆ.

ಎಲ್ಲಕ್ಕಿಂತ ತುಂಬಾ ಸಂತೋಷದ ವಿಚಾರವೆಂದರೆ, ಜನರಲ್ ಹಾಸ್ಟೆಲುಗಳನ್ನು ಮಾಡಿ ಎಂದು ಸದಸ್ಯರು ಹೇಳಿರುವುದು. ಹರಿಜನರು ಮತ್ತು ಗಿರಿಜನರಿಗಾಗಿ ನಮ್ಮ ಸರ್ಕಾರ ಮತ್ತು ಕೇಂದ್ರ ಸರ್ಕಾರದವರು ಏನು ಧನಸಹಾಯ ಕೊಡುತ್ತಾರೋ ಅದರಲ್ಲಿ ಒಂದು ಕಾಸೂ ಪೋಲಾಗುವುದಿಲ್ಲ. ಜನರಲ್ ಹಾಸ್ಟೆಲ್‌ಗಳನ್ನು ಮಾಡಿದರೆ ಆ ಜನರಲ್ಲಿ ಒಂದು ಶಂಕೆ ಹುಟ್ಟಬಹುದು. ಹರಿಜನರ ಹಣವನ್ನು ಬೇರೆಯವರಿಗೂ ಉಪಯೋಗ ಮಾಡುತ್ತಾರೆಂಬ ಭಾವನೆ ಬರಬಹುದು. ಇನ್ನು ಕೆಲವು ಹರಿಜನ ಹಾಸ್ಟೆಲುಗಳು ನಡೆಯುತ್ತಿವೆ. ಅವುಗಳನ್ನು ಸಾರ್ವಜನಿಕ ಹಾಸ್ಟೆಲುಗಳಾಗಿ ಮಾಡಿ ಅವನ್ನು ನೋಡಿಕೊಳ್ಳಲು ಹೆಚ್ಚಿನ ವ್ಯವಸ್ಥೆಯನ್ನು ಮಾಡಿದರೆ ಅದರಿಂದ ಕೆಲವರ ಮನಸ್ಸಿನಲ್ಲಿ ಕೆಟ್ಟ ಭಾವನೆ ಬರಬಹುದು. ಹೀಗೆ ಆ ಜನರಲ್ಲಿ ಏನೋ ಒಂದು ಭಾವನೆ ಬರಬಾರದು. ಹರಿಜನರಿಗೆ, ಗಿರಿಜನರಿಗೆ ಮತ್ತು ಇತರ ಹಿಂದುಳಿದ ಪಂಗಡದವರಿಗೆ ಬೇರೆ ಬೇರೆ ಫಂಡಿನಿಂದ ಹಣ ಕೊಡುವುದು. ಬೇರೆಯವರು ತಾವೂ ಈ ಹಾಸ್ಟೆಲುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತೇವೆಂದರೆ ಏನೂ ಅಡ್ಡಿಯಿಲ್ಲ. ಈಗ ಮದರಾಸು ಸರ್ಕಾರದಲ್ಲಿ ಒಂದು ವ್ಯವಸ್ಥೆ ಮಾಡಿದ್ದಾರೆ. ಮೂರನೆಯ ಒಂದು ಭಾಗವನ್ನು ಜನರು ಹಾಕಿಕೊಂಡರೆ ಸರ್ಕಾರ ಕೂಡ ಒಂದು ಭಾಗವನ್ನು ಕೊಟ್ಟು ಇಂಥ ಹಾಸ್ಟೆಲುಗಳಿಗೆ ಉತ್ತೇಜನ ಕೊಡುತ್ತಾರೆ. ಹಳ್ಳಿಗಳಲ್ಲಿ ಅನೇಕ ಹಿಂದುಳಿದ ಪಂಗಡದವರಿರುತ್ತಾರೆ. ಅಗಸರು ಮತ್ತು ಇತರ ಜಾತಿಯವರಿರುತ್ತಾರೆ. ಅವರ ಮಕ್ಕಳೂ ಇಂಥ ಹಾಸ್ಟೆಲುಗಳಿಗೆ ಬಂದರೆ ಉತ್ತೇಜನ ಕೊಡಬೇಕೆಂಬುದು ಸರ್ಕಾರದ ಅಭಿಪ್ರಾಯ. ಇದರಿಂದ ಎಲ್ಲ ಜನರಿಗೂ ಒಳ್ಳೆಯದು. ಹರಿಜನರ ಮಕ್ಕಳೂ ಬೇರೆಯವರ ನಡೆನುಡಿಗಳನ್ನು ನೋಡಿ ಎಲ್ಲ ವಿಷಯಗಳಲ್ಲಿಯೂ ಸುಧಾರಿಸುತ್ತಾರೆಂಬುದರಲ್ಲಿ ಅನುಮಾನವಿಲ್ಲ. ಹದಿನಾರು ವರ್ಷಗಳಿಂದ ಹೆಣ್ಣುಮಕ್ಕಳ ಗ್ರಾಮಸೇವಾ ಶಿಬಿರ ಮಹಾತ್ಮಾಗಾಂಧಿಯವರ ಆಶೀರ್ವಾದದಿಂದ ನಡೆಯುತ್ತಿದೆ. ಅಲ್ಲಿ ಹರಿಜನರು ಮತ್ತು ಬೇರೆ ಹೆಣ್ಣು ಮಕ್ಕಳ ಒಟ್ಟಿಗೆ ಶಿಕ್ಷಣ ಪಡೆಯುವುದರಿಂದ, ಅವರ ನಡೆನುಡಿ ಆಚಾರ ವ್ಯವಹಾರಗಳಲ್ಲಿ ಯಾವ ರೀತಿಯಲ್ಲಿಯೂ ಭೇದವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ. ಎಲ್ಲರೂ ಸಮ್ಮಿಳಿತವಾಗಿ, ನಾವೆಲ್ಲರೂ ಒಂದೇ ಎಂಬ ಭಾವನೆ ಬಂದರೆ ಒಳ್ಳೆಯದು. ಸಣ್ಣ ಮಕ್ಕಳಿಂದಲೂ ಇಂಥ ಶಿಕ್ಷಣವನ್ನು ಕೊಟ್ಟರೆ ದೇಶಕ್ಕೆ ಕಲ್ಯಾಣವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲ ಸದಸ್ಯರೂ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಮಾಡಬೇಕೆಂದು ಹೇಳಿರುವುದೂ ಸರ್ಕಾರದವರೂ ಹಾಗೆಯೇ ಮಾಡಬೇಕೆಂದಿರುವುದೂ ಬಹಳ ಸಂತೋಷದ ವಿಷಯ.

ವಿದ್ಯಾರ್ಥಿವೇತನಗಳು ಬರುವುದು ನಿಧಾನವಾಗುತ್ತದೆಂದು ಹೇಳಿದರು. ಇದನ್ನು ಸ್ವಲ್ಪಮಟ್ಟಿಗೆ ಒಪ್ಪಿಕೊಳ್ಳಬೇಕಾಗುತ್ತದೆ. ಈ ಸಲ ಈ ಹಣ ಜಾಗ್ರತೆ ಸರಿಯಾದ ಸಮಯಕ್ಕೆ ಸಿಗಲು ಏರ್ಪಾಡು ಮಾಡುತ್ತಾರೆ. ಹೀಗೆಯೇ ಎತ್ತುಗಳಿಗಾಗಿ ಕೊಡುವ ಹಣ, ಬೀಜಕ್ಕಾಗಿ ಕೊಡುವ ಹಣ, ಹೀಗೆ ಯಾವುದಕ್ಕೆ ಕೊಟ್ಟರೂ ಅದು ಜನರಿಗೆ ಸಮಯಕ್ಕೆ ಸರಿಯಾಗಿ ಸಿಕ್ಕದೇ ಹೋದರೆ ತೊಂದರೆಯಾಗುತ್ತದೆಯೆಂಬುದರಲ್ಲಿ ಅನುಮಾನವಿಲ್ಲ. ಆದಷ್ಟು ಜಾಗ್ರತೆ ಒದಗಿಸುವಂತೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆ.

ಇನ್ನು ಸೋಷಿಯಲ್ ವೆಲ್‌ಫೇರ್ ಅಧಿಕಾರಿಗಳ ಮತ್ತು ರೆವಿನ್ಯೂ ಇನ್‌ಸ್ಪೆಕ್ಟರು ಇವರ ವಿಚಾರದಲ್ಲಿ ಟೀಕೆ ಬಂತು. ಈಗ ಸಮಾಜಕಲ್ಯಾಣ ಖಾತೆಯನ್ನು ಹೆಣ್ಣುಮಕ್ಕಳ ಕೈಗೆ ಕೊಟ್ಟಿರುವುದರಿಂದ, ಹೆಣ್ಣುಮಕ್ಕಳಿಗೆ ಸಂಬಂಧಪಟ್ಟ ವಿಷಯಗಳ ಮೇಲ್ವಿಚಾರಣೆಗೆ ಅವರನ್ನೇ ಹೆಚ್ಚು ಹೆಚ್ಚಾಗಿ ನೇಮಕಮಾಡಬೇಕೆಂಬ ಯೋಚನೆ ನನ್ನಲ್ಲಿದೆ. ಸರ್ಕಾರಕ್ಕೂ ಇದೇ ಅಭಿಪ್ರಾಯವಿದೆ. ಯಾವುದೇ ಒಂದು ಹೊಸ ಸುಧಾರಣೆಯನ್ನು ಕಾರ್ಯಗತಮಾಡುವಾಗ ಕೆಲವು ಲೋಪದೋಷಗಳು ಬರುತ್ತವೆ. ಹಳ್ಳಿಗಳಲ್ಲಿರುವ ಹೆಣ್ಣು ಮಕ್ಕಳು ಹೊರಗೆ ಬಂದು ಇಂಥ ಶಿಕ್ಷಣ ತೆಗೆದುಕೊಳ್ಳುವಾಗ ಹೊಸ ವಾತಾವರಣದಿಂದಲೋ ಅಥವಾ ಅಧಿಕಾರಿಗಳಲ್ಲಿರುವ ದೋಷದಿಂದಲೋ ಕೆಲವು ಲೋಪದೋಷಗಳು ಕಂಡುಬಂದರೂ ಸಾರ್ವಜನಿಕರೂ ಹಾಗೂ ಸರ್ಕಾರ ಸೇರಿ ಅವುಗಳನ್ನು ನಿವಾರಿಸಲು ಸರಿಯಾದ ರೀತಿಯಲ್ಲಿ ಬದಲಾವಣೆ ಮಾಡುವುದು ಅವರ ಕರ್ತವ್ಯ. ಕೆಲವು ಕಡೆ ದೂರುಗಳು ಬಂದಿವೆ. ಕೆಲವು ಮಾನ್ಯ ಸದಸ್ಯರು ಕೂಡ ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸಮಾಡದೆ ಅವರನ್ನು ಅಲ್ಲಿಂದ ವರ್ಗ ಮಾಡಬೇಕೆಂದು ಅನೇಕ ಸಂದರ್ಭಗಳಲ್ಲಿ ಒತ್ತಾಯ ಮಾಡುತ್ತಾರೆ. ಈ ವಿಷಯದಲ್ಲಿ ನನಗನಿಸುತ್ತದೆ, ಒಂದು ರೋಗವಿದ್ದರೆ ಅದನ್ನು ಇಲ್ಲಿಂದ ಇನ್ನೊಂದು ಕಡೆಗೆ ವರ್ಗಮಾಡುವುದರಿಂದ ಪ್ರಯೋಜನವಿಲ್ಲ. ಒಬ್ಬ ಅಧಿಕಾರಿ ಒಂದು ಕಡೆ ಸರಿಯಾಗಿ ನಡೆದುಕೊಳ್ಳದೇಹೋದರೆ ಆತನನ್ನು ಬೇರೆ ಕಡೆ ಹಾಕಿದರೆ ಪ್ರಯೋಜನವಿಲ್ಲ. ನಮಗೆ ಬೇಡವಾದವರನ್ನು ಬೇರೆ ಕಡೆ ಹಾಕಿದಹಾಗಾಗುತ್ತದೆ. ಇದು ಸರಿಯಲ್ಲ. ಒಬ್ಬ ಅಧಿಕಾರಿಯಲ್ಲಿ ಲೋಪದೋಷ ಕಂಡುಬಂದರೆ

ಅದನ್ನು ಪರಿಶೀಲಿಸಿ ಶಿಕ್ಷೆ ಮಾಡಬೇಕೆಂದು ಕಂಡು ಬಂದರೆ, ಯಾವ ರೀತಿ ಶಿಕ್ಷೆ ಮಾಡಬೇಕೋ ಆ ರೀತಿ ಮಾಡುವುದರಲ್ಲಿ ತಪ್ಪೇನೂ ಇಲ್ಲ, ಇದನ್ನು ಸರ್ಕಾರ ಮಾಡಬೇಕು. ಏಕೆಂದರೆ, ಮುಂದಿನ ಜನಾಂಗದ ಶೀಲ, ನಡತೆ ಸರಿಯಾಗಿರುವಂತೆ ದೇಶ ಮತ್ತು ಸಮಾಜ ಬಹಳ ಮುತುವರ್ಜಿಯಿಂದ ನಡೆದುಕೊಳ್ಳದೇ ಹೋದರೆ ಮುಂದೆ ಬಹಳ ಹಾನಿಕರ ಎನ್ನುವುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಆದುದರಿಂದ ಯಾರೊಬ್ಬ ಅಧಿಕಾರಿ ತಪ್ಪುಮಾಡಿದರೂ ಅತನನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಹಾಕುವುದರಿಂದ ಪ್ರಯೋಜನವಿಲ್ಲ. ಅಲ್ಲದೆ ಇನ್ನೊಂದು ವಿಚಾರವಿದೆ. ಒಂದು ಕಡೆ ಮೂರು ವರ್ಷವಾದರೂ ಇಡದೇ ಹೋದರೆ ಸಣ್ಣ ಸಂಬಳ ತೆಗೆದುಕೊಳ್ಳುವ ನೌಕರರನ್ನು ಪದೇ ಪದೇ ಬೇರೆ ಬೇರೆ ಕಡೆಗಳಿಗೆ ವರ್ಗ ಮಾಡಿದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಅವರಿಗೆ ಓದುವ ಮಕ್ಕಳಿದ್ದರೆ ಅವರ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತದೆ. ಯಾರಾದರೂ ಸರಿಯಾಗಿ ಕೆಲಸಮಾಡದೆ ಅವರಲ್ಲಿ ಲೋಪದೋಷಗಳಿವೆ ಯೆಂಬುದು ಸತ್ಯವಾದರೆ, ಅಗತ್ಯವಾದ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂಬ ಭರವಸೆಯನ್ನು ಕೊಡುತ್ತೇನೆ.

ಪಟ್ಟಣದ ಹೆಣ್ಣುಮಕ್ಕಳು ಹಳ್ಳಿಯವರೊಡನೆ ಸಾಮರಸ್ಯದಿಂದ ನಡೆದುಕೊಳ್ಳುವುದಿಲ್ಲ, ಜನರಲ್ಲಿ ಮಿಳಿತವಾಗುವುದಿಲ್ಲ, ಇಂಥವರನ್ನು ವೆಲ್‌ಫೇರ್ ಅಧಿಕಾರಿಗಳು ಗ್ರಾಮಸೇವಕಿಯರಾಗಿ ಹಾಕುತ್ತಾರೆಂದು ಕೆಲವರು ಹೇಳಿದರು. ನನ್ನ ಹದಿನಾರು ವರ್ಷದ ಅನುಭವದಿಂದ ಇದರಲ್ಲಿ ನನಗೆ ಸಂಪೂರ್ಣ ನಂಬಿಕೆ. ಪಟ್ಟಣದ ಮಕ್ಕಳು ಕೇವಲ ತಮ್ಮ ಜೀವನ ಮಾಡಲು ಕಷ್ಟವಾಗಿ ಕೆಲಸಕ್ಕೆ ಬರುತ್ತಾರೆ. ಅವರು ಹೋಗಿ ಹಳ್ಳಿಗಳಲ್ಲಿ ಹೊಂದಿಕೊಳ್ಳಬೇಕೆಂದರೆ ಅವರಿಗೆ ಕಷ್ಟ. ಹಾಗೆಯೇ ಹಳ್ಳಿಯ ಹೆಣ್ಣುಮಕ್ಕಳೂ ಇವರೊಡನೆ ಬೆರೆಯುವುದಿಲ್ಲ. ಆದುದರಿಂದ ಗ್ರಾಮದಲ್ಲಿರುವ ಹೆಣ್ಣುಮಕ್ಕಳಿಗೇ ಎರಡು ವರ್ಷಕ್ಕೆ ಬದಲು ನಾಲ್ಕು ವರ್ಷವಾದರೂ ಶಿಕ್ಷಣ ಕೊಟ್ಟರೂ ಚಿಂತೆಯಿಲ್ಲ, ಅಂಥ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಟ್ಟು, ಹಳ್ಳಿಗಳಿಗೆ ಕಳುಹಿಸುವುದು ಒಳ್ಳೆಯದು. ಇದನ್ನು ಮಹಾತ್ಮಾ ಗಾಂಧಿಯವರೂ ಹೇಳುತ್ತಿದ್ದರು, ನಮ್ಮ ಅನುಭವವೂ ಹಾಗೆಯೇ ಇದೆ.

ಅವರಿಗೆ ವರ್ಷಕ್ಕೊಂದು ಸಲ ರಿಫ್ರೆಷರ್ ಕೋರ್ಸ್ ಸಮ್ಮೇಳನ, ಸಭೆ ಹೀಗೇನಾದರೂ ಮಾಡಿ ವಿಷಯಗಳನ್ನು ತಿಳಿದುಕೊಳ್ಳಲು ಅವಕಾಶ ಮಾಡಿದರೆ ಅವರು ಮುಂದುವರಿಯಬಹುದು. ಅಲ್ಲದೆ ಸಂಗೀತಗಾರರು, ನೃತ್ಯಕಲೆ ಮುಂತಾದುವುಗಳಲ್ಲಿ ನುರಿತವರು ಮಕ್ಕಳಿಗೆ ಅವನ್ನು ಕಲಿಸಲು ಅವಕಾಶ ಕೊಡಿ, ಅವರ ಒಂದು ಗ್ರೂಪ್ ಇಟ್ಟು ರಾಜ್ಯದಲ್ಲಿ ಮಕ್ಕಳು ಕಲಿಯಲು ಕೇಂದ್ರಗಳನ್ನು ತೆಗೆದು, ಮಕ್ಕಳಿಗೆ ಕಲಿಸಲು ಅಲ್ಲಿಗೆ ಹೋಗಿಬರುವಂತೆ ಏರ್ಪಾಡು ಮಾಡಿದರೆ ಮುಂದೆ ಮಕ್ಕಳಿಗೆ ಹೇಳಿಕೊಡುವ ಶಕ್ತಿ ಬರುತ್ತದೆ. ಕಸ್ತೂರಿಬಾ ಸಂಸ್ಥೆಯಲ್ಲಿ ಹಾಗೆ ಮಾಡುತ್ತಿದ್ದರು. ಈ ರೀತಿಯ ಸುಧಾರಣೆಯನ್ನು ವೆಲ್‌ಫೇರ್ ಇಲಾಖೆಯಲ್ಲಿ ಜಾರಿಗೆ ತರಬಹುದು.

ಗ್ರಾಮಸೇವಕರನ್ನು ತಯಾರಿಸುವ ಮೆಷಿನರಿ ಬೇರೆ ಇರಬೇಕೆಂದು ಶ್ರೀಮತಿ ಚಂಪಾಬಾಯಿ ಭೋಗಲೆಯವರು ಹೇಳಿದರು. ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ನಾನಾವಿಧವಾದ ಕಿರುಕುಳವುಂಟಾಗಿ ಮತ್ತು ದುಷ್ಟಪ್ರವೃತ್ತಿಗೆ ಬಲಿಯಾಗಲು ಅವಕಾಶವಾಗಿ ಕೆಲವರು ಜೀವನೋಪಾಯಕ್ಕಾಗಿ ನಾನಾವಿಧವಾಗಿ ಕಷ್ಟಪಡಬೇಕಾಗುತ್ತದೆ. ಅಂಥ ಹೆಣ್ಣುಮಕ್ಕಳನ್ನು ನಾವು ವಶಕ್ಕೆ ತೆಗೆದುಕೊಂಡು ಅವರಿಗೆ ಸರಿಯಾದ ಜೀವನಮಾರ್ಗ ಕಲ್ಪಿಸಬೇಕಾಗುತ್ತದೆ. ಸುಖವಾಗಿರುವವರು, ತೊಂದರೆಯಿಲ್ಲದಿರುವವರು ಯಾರೂ ಸಮಾಜ ಸೇವಾಕಾರ್ಯಕ್ಕೆ ಸಾಮಾನ್ಯವಾಗಿ ಮುಂದೆ ಬರುವುದಿಲ್ಲ. ವಿಧವೆಯರು, ಮದುವೆ ಮಾಡಲು ಅವಕಾಶವಾಗದೆ ಹಾಗೆಯೇ ಉಳಿದಿರುವ ಹೆಣ್ಣುಮಕ್ಕಳು, ಜೀವನಕ್ಕೆ ಆಶ್ರಯವಿಲ್ಲದವರು ಮಾತ್ರ ಸಮಾಜ ಸುಧಾರಕರಾಗಿ ಅಥವಾ ಇತರ ರೀತಿಯಲ್ಲಿ ಕೆಲಸಮಾಡಲು ಮುಂದೆ ಬರುತ್ತಾರೆ. ಅವರನ್ನು ಹಳ್ಳಿಗಳಿಗೆ ಕಳುಹಿಸಬೇಕಾಗುತ್ತದೆ. ಅಂಥವರನ್ನು ತರಬೇತುಮಾಡಿ ಹಳ್ಳಿಗಳಿಗೆ ಕಳುಹಿಸಿದರೆ ಅದಕ್ಕೆ ಕೆಲವರು ಹೊಂದಿಕೊಳ್ಳಬಹುದು ಮತ್ತೆ ಕೆಲವರು ಹೊಂದಿಕೊಳ್ಳದಿರಬಹುದು. ಮುಖ್ಯವಾಗಿ ಕೆಲವು ನಿರಾಶ್ರಿತರಿಗೆ ಜೀವನೋಪಾಯವಾಗಬೇಕೆಂಬ ಉದ್ದೇಶ ದೊಡ್ಡದು. ಅವರು ತಮ್ಮ ಆರ್ಥಿಕ ಉನ್ನತಿಗಾಗಿ ಕೆಲಸಕ್ಕೆ ಸೇರುತ್ತಾರೆ. ಕೆಲಸ ಮಾಡಬೇಕೆಂಬ ತೀವ್ರಾಸಕ್ತಿಯಿಂದ ಯಾರುವ ಮುಂದೆ ಬರುತ್ತಾರೋ ಅವರು ಯಾವುದೇ ಕಾರಣದಿಂದ ಮುಂದೆ ಬರಲಿ ಅವರಿಗೆ ಸಹಾಯ ನೀಡಬೇಕಾದ್ದೂ ಧರ್ಮ. ಕೆಲವರು ಧರ್ಮದೃಷ್ಟಿಯಿಂದ, ದೇಶಭಕ್ತಿಯಿಂದ ಮುಂದೆ ಬರಬಹುದು. ಕ್ರೈಸ್ತರಲ್ಲಿ ಮಿಷನರೀಸ್ ಎಂಬುವರು ತಮ್ಮ ಮತಧರ್ಮಕ್ಕಾಗಿ ಜೀವನವನ್ನು ಮುಡುಪಾಗಿಟ್ಟು ಸಿಸ್ಟರ್ಸ್, ಮದರ್ಸ್ ಎಂದು ಸೇವೆಮಾಡಲು ಅದು ದೊಡ್ಡ ಕರ್ತವ್ಯವೆಂದು ಭಾವಿಸಿ ಮುಂದೆ ಬರುತ್ತಾರೆ. ಗಾಂಧಿಯುಗದಲ್ಲಿ ಹರಿಜನರು, ಇತರರು ಎಂಬ ಭೇದವಿಲ್ಲದೆ ಸೇವೆ ಮಾಡುತ್ತಿದ್ದವರಿಗೆ ಆಗೇನು ತೊಂದರೆ ಅವರು ಅನುಭವಿಸುತ್ತಿದ್ದರೆಂಬುದು ಚೆನ್ನಾಗಿ ಗೊತ್ತಿದೆ. ಸತ್ಯವೆಂಬುದು ಯಾರಿಗೂ ಮಾಸಲಾಗಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಯುದ್ಧಮಾಡಿದ ಸಿಪಾಯಿಗಳು ಕಾಂಗ್ರೆಸ್‌ನವರೆಂದು ತಿಳಿದುಕೊಂಡಿದ್ದೇವೆ. ಎಲ್ಲರೂ ಇದನ್ನು ಒಪ್ಪಿಕೊಳ್ಳಬೇಕು. ಇಷ್ಟನ್ನು ಒಪ್ಪಿದರೆ ಸಾಕು. ಈಗ ದೇಶೋದ್ಧಾರ ಮಾಡುವ ಸುಯೋಗ ಎಲ್ಲರಿಗೂ ದೊರೆತಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಅವರಿಗೆ ಸ್ವಲ್ಪ ದಿನವಾದರೂ ಶಿಕ್ಷಣ ಕೊಡಬೇಕು, ಈ ಕೆಲಸ ಅತಿ ಜಾಗರೂಕತೆಯಾಗಿ ಆಗಬೇಕು ಎಂದು ಏರ್ಪಾಡುಮಾಡಿದೆ. ಅಲ್ಲದೆ ಪಟ್ಟಣದವರನ್ನು ಹಳ್ಳಿಗಳಿಗೆ ಕಳುಹಿಸುವುದರ ಬದಲು ಅಲ್ಲಿ ಸ್ಥಳದವರನ್ನೇ ನೇಮಿಸುವುದು ಸೂಕ್ತ. ಇದಕ್ಕಾಗಿ ಮಾನ್ಯ ಸದಸ್ಯರು ತಮ್ಮ ಕ್ಷೇತ್ರಗಳಿಂದ ನಾಲ್ಕಾರು ಹೆಣ್ಣುಮಕ್ಕಳನ್ನು ಶಿಕ್ಷಣ ಶಿಬಿರಗಳಿಗೆ ಕಳುಹಿಸಲು ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ. ಪಟ್ಟಣದವರು ಸಾಮಾನ್ಯವಾಗಿ ಹಳ್ಳಿಗಳಿಗೆ ದೂರ ಹೋಗಲು ಇಷ್ಟಪಡುವುದಿಲ್ಲ. ಏಕೆಂದರೆ ಹೋದ ಕಡೆ ಹೆಣ್ಣುಮಕ್ಕಳಿಗೆ ಮನೆ ಸಿಕ್ಕುವುದು ಬಹಳ ಕಷ್ಟ. ವೆಲ್‌ಫೇರ್ ಆರ್ಗನೈಜರ್ ಎಂದು ಗುಲ್ಬರ್ಗಾಕ್ಕೆ ಅಥವಾ ಬೀದರಿಗೆ ಹೆಣ್ಣುಮಕ್ಕಳನ್ನು ಕಳುಹಿಸಿದಾಗ ಮನೆ ಅವರಿಗೆ ದೊರೆಯುವುದೇ ಎಂಬುದನ್ನು ನೋಡಲೇಬೇಕು. ಸ್ಥಳದವರೇ ಕೆಲಸಕ್ಕೆ ಸೇರಿಕೊಂಡರೆ ಸ್ಥಳದ ವಿದ್ಯಮಾನ, ವಾತಾವರಣ ಅವರಿಗೆ ಗೊತ್ತಿರುತ್ತದೆ, ಹೇಗೋ ಅವರು ಅನುಸರಿಸಿಕೊಂಡು ಹೋಗುತ್ತಾರೆ. ಹೆಣ್ಣುಮಕ್ಕಳನ್ನು ದೂರಪ್ರದೇಶಕ್ಕೆ ಹಾಕುವಾಗ ಸ್ವಲ್ಪ ಯೋಚನೆ ಮಾಡಬೇಕಾದ್ದು ಆವಶ್ಯಕ, ಹೆಣ್ಣುಮಕ್ಕಳನ್ನು ಉಪಾಧ್ಯಾಯಿನಿಯರಾಗಿ, ಸಮಾಜ ಸೇವಿಕೆಯರಾಗಿ ನೇಮಿಸುವಾಗ ಅವರ ಕಷ್ಟವನ್ನು

(ಶ್ರೀಮತಿ ಯಶೋಧರ ದಾಸಪ್ಪ)

ಗಮನಿಸಿ ಸರಿಯಾದ ವ್ಯವಸ್ಥೆ ಮಾಡಬೇಕಾದ್ದೂ ಅವಶ್ಯಕ. ಸಮಾಜಕಲ್ಯಾಣ ಕೇಂದ್ರವನ್ನು ತೆರೆಯುವ ಕಡೆ ಮನೆ ಮಾಸಕ್ಕಿರಬೇಕು ಎಂಬುದು ಅನುಭವಕ್ಕೆ ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರಿಗೂ ಒಂದು ಜೀಪ್ ಕೊಡಿ.

ಶ್ರೀಮತಿ ಯಶೋಧರ ದಾಸಪ್ಪ.—ಅದರಿಂದ ಕೆಲಸವಾಗುವುದಿಲ್ಲವೆಂಬುದು ನಮಗೆ ಗೊತ್ತಿದೆ. ಅದಕ್ಕೆ ಬೇಕಾಗುವ ಡ್ರೈವರ್, ಪೆಟ್ರೋಲ್ ವಗೈರೆ ಖರ್ಚನ್ನು ವಹಿಸುವುದಕ್ಕೆ ಬದಲಾಗಿ ಆ ಹಣವನ್ನು ಹೆಣ್ಣುಮಕ್ಕಳಿಗೇ ಕೊಟ್ಟರೆ ಅವರ ಅನ್ನಬಟ್ಟೆಗೆ ಎಷ್ಟೋ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಗಿರಿಜನರ ಕೆಲಸ ಮಾಡ ಬೇಕಾದಾಗ ಜೀಪು ಕೊಡಬೇಕಾದ್ದು ಅನಿವಾರ್ಯ.

ಪಾಲಿಸಿ ಕಮಿಟಿಗೆ ಮುಖ್ಯಮಂತ್ರಿಗಳು ಚೇರ್ಮನ್ ಆಗಿರಬೇಕೆಂದು ಬಹುಶಃ ಶ್ರೀ ದುಗ್ಗಪ್ಪನವರು ಹೇಳಿದರು. ಅದನ್ನು ಹೇಳುತ್ತಾ ಸೋಷಿಯಲ್ ವೆಲ್‌ಫೇರ್ ಖಾತೆ ಕೂಡ ಹರಿಜನ ಮಂತ್ರಿಗಳಿಗೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತೆಂದು ತಿಳಿಸಿದರು.

5-30 P.M.

ನಾನು ಹೇಳುವುದು, ಹರಿಜನ ಮಂತ್ರಿಗಳೇ ಇರಲಿ, ಅಥವಾ ಬೇರೆ ಮಂತ್ರಿಗಳೇ ಇರಲಿ ಸಮಾಜ ಕಲ್ಯಾಣದ ವಿಚಾರವನ್ನು ಯಾರು ಸರಿಯಾಗಿ ತಿಳಿದುಕೊಂಡಿದ್ದಾರೋ ಅವರಿರಬೇಕು. ಅದರಲ್ಲೂ ಈ ಮಂತ್ರಿ ಪದವಿ ಹೆಣ್ಣುಮಕ್ಕಳಲ್ಲದೆ ಬೇರೆ ಯಾರ ಕೈಯಲ್ಲೂ ಇರಕೂಡದೆಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Non-Harijanರ ಕೈಯಲ್ಲಿದ್ದಾಗ ಚೆನ್ನಾಗಿರುವಷ್ಟು Harijan ಮಂತ್ರಿಗಳ ಕೈಯಲ್ಲಿದ್ದಾಗ ಚೆನ್ನಾಗಿರಲಿಲ್ಲವೆಂದು ಗೊತ್ತಾಗಿದೆ.

ಶ್ರೀಮತಿ ಯಶೋಧರ ದಾಸಪ್ಪ.—ಈ ಪದವಿಗೆ ನಾನೇಕೆ ಹೆಣ್ಣುಮಕ್ಕಳೇ ಇರಬೇಕೆನ್ನುತ್ತೇನೆಂದರೆ, ತಾಯಿ ಯಾದವಳಿಗೆ ಎಲ್ಲಾ ಮಕ್ಕಳೂ ಒಂದೇ ಎಂಬ ಭಾವನೆಯಿರುತ್ತದೆ. ಅದರಲ್ಲೂ ಬಲಹೀನವಾದ ಮಕ್ಕಳನ್ನು ಯಾವಾಗಲೂ ಕಂಕುಳಲ್ಲೇ ಎತ್ತಿ ಕೊಂಡಿರುತ್ತಾಳೆ. ಜನರಲ್ಲೂ ಹಾಗೆಯೇ ಯಾರು ದೀನರೋ ದಲಿತರೋ ಬಲಹೀನರೋ ಹಿಂದುಳಿದಿರು ವವರೋ ಅವರ ವಿಷಯದಲ್ಲಿ ಹೆಚ್ಚಿನ ಮಮತೆಯುಳ್ಳ ವಳಾಗಿರುತ್ತಾಳೆ. ಹಿಂದುಳಿದಿರುವವರು ಬಲಹೀನ ರಾಗಿರುವುದರಿಂದ ಅವರನ್ನು ಚೆನ್ನಾಗಿ ಪೋಷಿಸಿ ಬೆಳೆಸಬೇಕೆಂಬುದೇ ಅವಳ ಆಕಾಂಕ್ಷೆಯಾಗಿರುತ್ತದೆ.

ಶ್ರೀ ಎಸ್. ಶಿವಪ್ಪ.—ಒಬ್ಬಳೇ ತಾಯಿ ಸಾಕೇ!

ಶ್ರೀಮತಿ ಯಶೋಧರ ದಾಸಪ್ಪ.—ಭಾರತ ಮಾತೆ ಒಬ್ಬಳೆ! ಹೀಗೆ ಹೆಣ್ಣುಮಕ್ಕಳಲ್ಲೇ ಈ ಸ್ಥಾನ ಇರಬೇಕೆಂದು ಹೇಳುತ್ತೇನೆ. ಹಾಗೂ ಪ್ರಾಥಮಿಕ ವಿದ್ಯಾಭ್ಯಾಸ, ಪ್ರೈಮರಿ ಪಾಠಶಾಲೆಗಳಲ್ಲಿ ಉಪಾಧ್ಯಾಯರು ಎಲ್ಲರೂ ಹೆಣ್ಣುಮಕ್ಕಳೇ ಇರಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಹಳ್ಳಿಯವರು ಪಟ್ಟಣದವರು ಎನ್ನುವುದಕ್ಕಿಂತ ಯಾರ tempera-ment ಈ ಕೆಲಸಕ್ಕೆ ಯೋಗ್ಯವಾಗಿದೆಯೋ ಅಂಥವರನ್ನು ತೆಗೆದುಕೊಳ್ಳುವ ಯೋಚನೆ ಮಾಡುತ್ತೀರಾ?

ಶ್ರೀಮತಿ ಯಶೋಧರ ದಾಸಪ್ಪ.—ಹೌದು, Temperament ಮತ್ತು Spirit of service ಇರುವವರನ್ನು ನೋಡಿ, ಜನಸೇವೆ ಮಾಡುತ್ತೇವೆಂದು ಯಾರು ಮುಂದೆ ಬರುತ್ತಾರೋ ಅವರು ಯಾವ ಜಾತಿಯವರೇ ಆಗಿರಲಿ ಅವರೇ ಈ ಕೆಲಸಕ್ಕೆ ಅರ್ಹರು. B.A., M.A., ಏನೂ ಬೇಕಾಗಿಲ್ಲ ಆ ಮನೋಭಾವವುಳ್ಳ ಮಕ್ಕಳು ಮುಂದೆ ಬಂದರೆ ಈ ಕೆಲಸಕ್ಕೆ ಯೋಗ್ಯರಾಗಿರುತ್ತಾರೆಂದು ನಾನು ಭಾವಿಸುತ್ತೇನೆ. ಹಳ್ಳಿಗರೇ ಆಗಬೇಕು, ಪಟ್ಟಣಿಗರೇ ಆಗಬೇಕು ಎಂಬುದೇನೂ ಇಲ್ಲ. ಪಟ್ಟಣಿಗರಲ್ಲೂ ಎಷ್ಟೋ ಜನರು ಸೇವಾ ಮನೋಭಾವನೆಯುಳ್ಳವರಿದ್ದಾರೆ. ಎಷ್ಟೋ ಜನ ಪಾಶ್ಚಾತ್ಯ ದೇಶದವರು ನಮ್ಮ ದೇಶಕ್ಕೆ ಬಂದು ಸೇವೆ ಮಾಡಿಲ್ಲವೇ? ಆದ್ದರಿಂದ ಯಾರೇ ಆಗಲಿ, ಈ ರೀತಿ ತಾನು ಜನ ಸೇವೆ ಮಾಡುತ್ತೇನೆ ಎಂದು ಸತ್ಯಸಂಕಲ್ಪ ಮಾಡಿ ಶ್ರದ್ಧೆಯಿರುವ ಹೆಣ್ಣುಮಕ್ಕಳುಬೇಕು ಎಂದು ನಾನು ಹೇಳುತ್ತೇನೆ. ಶ್ರೀಮಾನ್ ದುಗ್ಗಪ್ಪನವರು ಹರಿಜನ ಮಂತ್ರಿಗಳೇ ಈ ಖಾತೆಗೆ ಇರಬೇಕೆಂದು ಹೇಳಿದ್ದಕ್ಕೇನೂ ಅವರನ್ನು ನಾನು ಆಕ್ಷೇಪಿಸುವುದಿಲ್ಲ. ಏಕೆಂದರೆ ಹಿಂದುಳಿದ ಜನರು ಬೇರೆಯವರಿಂದ ನೊಂದು, ನೊಂದು ಈಗ ಬೇರೆಯವರನ್ನು ನಂಬುವುದಕ್ಕೇ ಅನುಮಾನ ಪಡುತ್ತಾರೆ. ಯಾರು ತಮ್ಮ ಹಿತ ಕಾಪಾಡುತ್ತಾರೆ, ಯಾರು ತಮ್ಮ interestಗೆ ದುಡಿಯುತ್ತಾರೆ ಎಂಬುದನ್ನು ಮಾತ್ರ ಅವರು ಗಮನದಲ್ಲಿಟ್ಟುಕೊಂಡು ಅವರು ಆ ರೀತಿ ಹೇಳಿದರೇ ಹೊರತು, ನಾನು ಈ ಸ್ಥಾನದಲ್ಲಿ ಇರಕೂಡದೆಂಬ ಭಾವನೆಯಿಂದ ಹೇಳಿಲ್ಲವೆಂದು ನಾನು ಹೇಳಬಲ್ಲೆ. ಅವರು ಹೇಳಿದ್ದನ್ನು ಯಾರೂ ತಪ್ಪಾಗಿ ತಿಳಿಯಕೂಡದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ನಿಮ್ಮ ಪಾರ್ಟಿಯಲ್ಲೇ ಇದ್ದು ನಿಮ್ಮಲ್ಲೇ ನಂಬಿಕೆಯಿಲ್ಲವೇ?

ಶ್ರೀಮತಿ ಯಶೋಧರ ದಾಸಪ್ಪ.—ನಾವು ನಂಬಿಕೆಯಿಲ್ಲದಂತೆ ಮಾಡಿಕೊಂಡಿದ್ದೇವೆ.

ಎತ್ತು ಮುಂತಾದುವುಗಳನ್ನು ಕೊಡುವುದು ಹರಿಜನರಿಗೆ ಸರಿಯಾಗಿ ಸೇರುವುದಿಲ್ಲ ಎಂದು ಒಬ್ಬರು ಹೇಳಿದರು. ಅದನ್ನರಿತೇ, ನಾನು economic aid ಕೊಡುವುದರಲ್ಲಿ ಹರಿಜನ ಹೆಣ್ಣುಮಕ್ಕಳಿಗೆ ಜಮೀನು ಎತ್ತು ಕೊಡುವುದರ ಬದಲು, ಯಾರು ಮುದುಕಿಯರು, ವಿಧವೆಯರಾಗಿದ್ದಾರೋ ಅವರಿಗೆ ಕರೆಯುವ ಹಸು, ಮುಂತಾದ ತಾವೇ ಸ್ವತಃ ನೋಡಿಕೊಳ್ಳ ಬಹುದಾದ ರೀತಿಯಲ್ಲಿರುವ ಪದಾರ್ಥಗಳನ್ನು ಅವರಿಗೆ ಕೊಟ್ಟು ಸಹಾಯ ಮಾಡುತ್ತಲಿದ್ದೇವೆ. ವಿದ್ಯೆಯಿಲ್ಲದ ಹೆಣ್ಣುಮಕ್ಕಳಿಗೆ ಹೊಲಿಗೆ ಸೆಂಟರುಗಳನ್ನೇರ್ಪಡಿಸಿ ಒಂದೊಂದು ಮೆಷೀನ್ ತೆಗೆದುಕೊಟ್ಟು ಒಂದು ವರ್ಷ ಟ್ರೈನಿಂಗ್ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಈಚೆಗೆ ಒಂದು ವರ್ಷದ ಟ್ರೈನಿಂಗ್‌ನಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ತಿಳಿದು, ಅಲ್ಲಲ್ಲಿ ಒಂದು ಔದ್ಯೋಗಿಕ ಶಿಕ್ಷಣ ಶಾಲೆಯನ್ನೇ ತೆರೆದು ಜೀವನೋಪಾಯವನ್ನು ಕಲ್ಪಿಸಿಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂಬ ಅಭಿಲಾಷೆಯಿಂದ, ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು ಔದ್ಯೋಗಿಕ ಶಾಲೆಯನ್ನು ತೆರೆದು ಅದಕ್ಕೆ ಲಗತ್ತಾಗಿರುವಂತೆ ಸಾರ್ವಜನಿಕ ಹಾಸ್ಟಲುಗಳನ್ನು ಮಾಡಿ ಹೆಣ್ಣುಮಕ್ಕಳಿಗೆ ಅನುಕೂಲ ಮಾಡಬೇಕೆಂದು ಮಾಡಿದ್ದೇವೆ.

ಕೆಲವು ಸಂದರ್ಭಗಳಲ್ಲಿ ಅಕ್ವಿಜಿಷನ್ ಕೇಸುಗಳು ವಿಪರೀತಕಾಲ ತೆಗೆದುಕೊಳ್ಳುತ್ತವೆ. ಅದರಿಂದಾಗಿ ಹರಿಜನರಿಗೆ ಮನೆಕಟ್ಟುವುದಕ್ಕೆ ಆಗುತ್ತಿಲ್ಲ, ಇಲ್ಲವೇ

ನಿಧಾನವಾಗುತ್ತಿದೆಯೆಂದು ಗೊತ್ತಾಗಿದೆ. ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತೇವೆಂದರೆ ಎದುರು ಪಾರ್ಟಿಯವರು ಕೋರ್ಟಿಗೆ ಹೋಗಿ ತಕರಾರು ಮಾಡುತ್ತಿದ್ದಾರೆ. ಎಷ್ಟೋ ಕೇಸುಗಳು ಇದರಿಂದಲೇ ತಡವಾಗುತ್ತಿರುವುದು ಆದರೂ ಸರ್ಕಾರದವರು ತ್ವರಿತವಾಗಿ ಆರ್ಡರ್ ಮಾಡಿ ಮನೆಕಟ್ಟಿಕೊಳ್ಳುವುದಕ್ಕೆ ಸಹಾಯ ಮಾಡುತ್ತಿದ್ದಾರೆ. ಇದೂ ಅಲ್ಲದೆ, ಅನೇಕ ಸಂದರ್ಭಗಳಲ್ಲಿ ಹರಿಜನರು ಜಮೀನು ಕೇಳಿದ ಕಡೆ ಜಮೀನು ಇರುವುದೇ ಇಲ್ಲ. ಕೆಲವುಕಡೆ ಮನೆ ಕಟ್ಟುವುದಕ್ಕೆ ಜಮೀನು ಕೊಡಬೇಕೆಂದರೆ ಒಂದೆರಡು ಎಕರೆಗಳಿಂದ ಆಗುವಂತೆ ಇರುವುದಿಲ್ಲ, ಎಲ್ಲರಿಗೂ ಕೊಡಬೇಕೆಂದರೆ 50 ಎಕರೆ ಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಯಾವ ರೀತಿ ವಿಲೇಮಾಡಬೇಕೆಂಬುದನ್ನು ರೆವಿನ್ಯೂ ಮಂತ್ರಿಗಳೂ, ಅರಣ್ಯ ಶಾಖೆಯ ಮಂತ್ರಿಗಳೂ ಸೇರಿ ಯೋಚನೆಮಾಡಿ, ಅಂಥವರಿಗಾಗಿ ಒಂದು ಕಾಲೋನಿಯನ್ನೇ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದರೆ ಪರಿಹಾರವಾಗುತ್ತದೆಯೇ ಹೊರತು ಸಣ್ಣ ಪುಟ್ಟ ಜನರಿಂದ ಒಂದೆರಡು ಎಕರೆ ತೆಗೆದುಕೊಂಡಿದ್ದರಿಂದ ಆಗುವುದಿಲ್ಲ. ಆದ್ದರಿಂದಲೇ ಕಾಲೋನಿಗಳನ್ನು ಮಾಡಿ ಒಂದು ಕಡೆ ಸ್ಕೂಲು, ನೀರು, ಕಮ್ಯೂನಿಟಿ ಸೆಂಟರುಗಳು ಮುಂತಾದ ವ್ಯವಸ್ಥೆ ಮಾಡಿದರೆ ಚೆನ್ನಾಗಿರುತ್ತದೆ. ಊರಿಂದ ಹೊರಗೆ ಹೋಗಿ ಈ ರೀತಿ ಪ್ರತ್ಯೇಕ ಏರ್ಪಾಡುಗಳನ್ನು ಮಾಡಿ ಹರಿಜನರನ್ನೇ ಪ್ರತ್ಯೇಕಮಾಡಿಡುವುದು ಸರಿಯಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಇದನ್ನು ನಾನೂ ಒಪ್ಪುತ್ತೇನೆ. ಆದ್ದರಿಂದ, ಸವರ್ಣೀಯರೂ ಕೂಡ ತಾವು ಇವರೊಡನೆ ಇರುತ್ತೇವೆಂದು ಹೇಳಿ ಮುಂದೆ ಬಂದು ಜಮೀನು ಕೇಳಿದರೆ ಅವರಿಗೂ ಕೊಡುವ ಯೋಚನೆ ಮಾಡುತ್ತೇವೆ. ಏಕೆಂದರೆ, ಈ ಕಾಲೋನಿಗಳಲ್ಲಿ ಜಾಗ ಎಷ್ಟೋ ಚೆನ್ನಾಗಿರುತ್ತದೆ. ಹೊಸ ಹೊಸ ಮನೆಗಳನ್ನು ಕಟ್ಟಿಕೊಂಡಿರುವುದಕ್ಕೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕೆಂದಿದ್ದೇವೆ. ಹರಿಜನರೇ ಬೇರೆ ಇರಬೇಕೆಂಬುದೇನೂ ಇಲ್ಲ.

ಒಬ್ಬ ಸದಸ್ಯರು.—ಹರಿಜನರೂ ಸವರ್ಣೀಯರೂ ಮಿಳಿತವಾಗಿರಬೇಕು.

ಶ್ರೀಮತಿ ಯಶೋಧರ ದಾಸಪ್ಪ.—ಮುಂದೆ ಅದೂ ಬರುತ್ತದೆ. ಕ್ರಮೇಣ ಇದೆಲ್ಲಾ ಸರಿಹೋಗುತ್ತದೆಂದು ನನಗನ್ನಿಸುತ್ತದೆ. ಇಷ್ಟರಮಟ್ಟಿಗೆ ನಾವು ಆಗುತ್ತೇವೆ, ಹರಿಜನರೇ ಮುಂದೆ ಬಂದು ಕೇಳಿ ತಮ್ಮ ತಮ್ಮ ಸುಧಾರಣೆ ತಾವೇ ಮಾಡಿಕೊಳ್ಳುತ್ತಾರೆಂದು ಈಗ 20 ವರ್ಷಗಳ ಹಿಂದೆ ಗೊತ್ತೇ ಇರಲಿಲ್ಲ. ಆದ್ದರಿಂದ ನಾವು ಆಶಾವಾದಿಗಳೆಂದು ಹೇಳುತ್ತೇನೆ.

ಸುಪ್ರೀಂ ಕೋರ್ಟಿನ ವಿಚಾರ ಕೇಳಿದರು. ನ್ಯಾಯಾಸ್ಥಾನಗಳಲ್ಲಿ ಅಧಿಕಾರ ಸ್ಥಾನಗಳನ್ನು ದೊರಕಿಸಿ ಕೊಡಬೇಕು, ಸ್ಥಾನಮಾನಗಳನ್ನೂ ಬಡ್ತಿಗಳನ್ನೂ ಹರಿಜನರಿಗೆ ಕೊಡಬೇಕೆಂದು ಹೇಳಿದರು. ಈಗಲೂ ಕೂಡ, ಹರಿಜನರು, ಗಿರಿಜನರಲ್ಲಿ ದಕ್ಷರಾದಂಥವರು ಬಂದವರಿಗೆಲ್ಲಾ ಕೆಲಸವಿಲ್ಲವೆಂದು ಹೇಳಿಲ್ಲವೆಂದು ನಾನು ತಿಳಿದಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಸುಪ್ರೀಂ ಕೋರ್ಟ್ Decisionನ್ನನ್ನು ಸರ್ಕಾರದವರು ಜಾರಿಗೆ ಕೊಟ್ಟಿಲ್ಲ.

ಶ್ರೀಮತಿ ಯಶೋಧರ ದಾಸಪ್ಪ.—ಹೌದು, ಮಾಡುತ್ತೇವೆ.

ಆಮೇಲೆ, legal aid ನಾವು ಈಗ ಕೊಡುತ್ತಿರುವುದು ಅನೇಕರಿಗೆ ಹೋಗುತ್ತಿಲ್ಲ. ಇದಕ್ಕೆ ಕಾರಣ ಹೆಚ್ಚಿಗೆ ಪ್ರಚಾರವಿಲ್ಲದಿರುವುದೇ ಆಗಿದೆ. ಹರಿಜನರಿಗೆ ಈ ರೀತಿಯಾಗಿ ಕೇಸುಗಳು ಬಂದು legal aid ಗಾಗಿ ಏನೇ ಖರ್ಚುಮಾಡಬೇಕಾದರೂ ಅಮಲ್ದಾರರು ಮತ್ತು ಡೆಪ್ಯುಟಿ ಕಮಿಷನರು ಶಿಫಾರಸು ಮಾಡಿದರೆ ಸರ್ಕಾರದವರು ಯಾವತ್ತೂ Legal aid ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಅದಕ್ಕಾಗಿ ಹಣ ಮೀಸಲಾಗಿಟ್ಟಿದ್ದಾರೆ. Legal aid ಕೊಡುವುದಕ್ಕೆ ಸರ್ವ ಪ್ರಯತ್ನಮಾಡುತ್ತಾರೆಂದು ಹೇಳುತ್ತೇನೆ.

ಶ್ರೀ ಜಿ. ವೆಂಕಟೇಗೌಡ.—ಈಗ ಕೊಡುತ್ತಿರುವ ಸ್ಕಾಲರ್‌ಷಿಪ್ಪುಗಳನ್ನು ಹದಿನೈದರಿಂದ ಹದಿನೆಂಟರ ವರೆಗೆ ಹೆಚ್ಚಿಸುವ ಬಗ್ಗೆ ಸರಕಾರದ ನೀತಿಯೇನು ?

ಶ್ರೀಮತಿ ಯಶೋಧರ ದಾಸಪ್ಪ.—ಈಗಿರುವ ಗ್ರಾಂಟನ್ನು ಶೇಕಡ ಮೂರರಷ್ಟು ಹೆಚ್ಚು ಮಾಡಲು ಎಷ್ಟು ಜನರಿದ್ದಾರೆ, ಯಾವ ಬಾಬಿನಲ್ಲಿ ಇದಕ್ಕೆ ಹಣ ಒದಗಿಸಬೇಕು, ಎನ್ನುವುದನ್ನೆಲ್ಲಾ ನೋಡಬೇಕು. ಮೂರನೆಯ ಯೋಜನೆಯಲ್ಲಿ ಹಾಸ್ಟಲು ತೆಗೆಯುವುದನ್ನು ಕಡಮೆಮಾಡಬೇಕೆಂದು ಇದೆ. ಮೂರನೇ ಯೋಜನೆಯಲ್ಲಿ ಎಷ್ಟು ಹಾಸ್ಟಲುಗಳಿವೆ, ಎಷ್ಟು ಕಾಲೋನಿಗಳಿವೆ ಎನ್ನುವುದು ನಿರ್ದಿಷ್ಟವಾಗಿ ಗೊತ್ತಾಗಬೇಕಾಗಿದೆ. ಗ್ರಾಂಟ್-ಇನ್-ಏಡ್‌ನಲ್ಲಿ ನಮಗೆ ದುಡ್ಡಿಲ್ಲದೇ ಇದೆ. ಇದನ್ನು ಯೋಚನೆಮಾಡಿ ಅಲ್ಲದೇ ಸುಮಾರು ಆರು ಲಕ್ಷ ರೂಪಾಯಿಗಳಷ್ಟುವೆಚ್ಚವನ್ನುಳಿಸಿಕೊಂಡು ಮನೆ ಕಟ್ಟಬೇಕೆಂದು ಯೋಚನೆಯಿದೆ. ಎಕನಾಮಿಕ್ ಏಡ್ ಎಂದು ಶೇಕಡಾ ಮುವ್ವತ್ತೆಂಟರಷ್ಟಿದೆ. ಇದರಲ್ಲಿ ಶೇಕಡಾ ಮುವ್ವತ್ತರಷ್ಟು ಮಾತ್ರ ಇಟ್ಟುಕೊಂಡು ಶೇಕಡಾ ಎಂಟರಷ್ಟು ಹಣವನ್ನು ಕಾಲೋನಿಗಳನ್ನು ಮಾಡಲು ಖರ್ಚು ಮಾಡಬೇಕಾಗಿದೆ. ಮನೆಗಳನ್ನು ಕಟ್ಟುವುದನ್ನು ನಿಲ್ಲಿಸಬೇಕೆಂದು ಇತ್ತು. ಆದರೆ ಕೆಲವುಕಡೆ ಮನೆಗಳು ಕಟ್ಟಿದ್ದ ಅರ್ಧಮರ್ಧವಾಗಿ ನಿಂತಿದೆ, ಅವನ್ನು ಈಗ ಪೂರೈಸಬೇಕಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ಸೊಸೈಟಿಗಳನ್ನು ಮಾಡಿದರೆ ಆ ಸೊಸೈಟಿಗೆ 400 ರೂಪಾಯಿನಷ್ಟು ಸಬ್‌ಸಿಡಿ ಎಂದು ಕೊಡುತ್ತಾರೆಂದು ಹೇಳಿದಿರಿ. ಆ ರೀತಿ ಕೆಲವುಕಡೆ ಕೊಡುತ್ತಿಲ್ಲವಲ್ಲಾ !

ಶ್ರೀಮತಿ ಯಶೋಧರ ದಾಸಪ್ಪ.—ಸೊಸೈಟಿಯನ್ನು ರಿಜಿಸ್ಟರು ಮಾಡಿಸಿದರೆ ಆಗ ಅವುಗಳಿಗೆ ಸರ್ಕಾರ ಸಹಾಯ ಮಾಡುತ್ತದೆ. ಮನೆಗಳನ್ನು ಕಟ್ಟಲು ಬೇಕಾದ ಹಣಕ್ಕೆ ಸರಕಾರ ಶೇಕಡಾ ಮೂರರಷ್ಟು ಬಡ್ಡಿ ತಾವೇ ಕೊಡುತ್ತಾರೆ. ಉಳಿದ ಶೇಕಡಾ ಎರಡರಷ್ಟನ್ನು ಸೊಸೈಟಿಗಳು ಕೊಡಬೇಕು. ಹೀಗೆ ಮೂರು ಸಾವಿರದಷ್ಟು ಸಾಲವನ್ನು ಸೊಸೈಟಿಗಳು ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ತೆಗೆದುಕೊಳ್ಳುವ ಸಾಲಕ್ಕೆ ಶೇಕಡಾ ಐದರಷ್ಟು ಬಡ್ಡಿ ಕೊಡಬೇಕೆಂದಿದೆ. ನಾನು ಸೂಚಿಸಿದ್ದು ಅವರಿಗೆ ಸಾಲವನ್ನು ಕೊಟ್ಟು ಅದರ ಜೊತೆಗೆ ಐದುನೂರು ರೂಪಾಯಿಗಳಷ್ಟು ಹಣವನ್ನು freeಯಾಗಿ ಕೊಡಿ ಎಂದು. ಕೊಟ್ಟಿರುವ ಸಾಲವನ್ನು ಇಪ್ಪತ್ತು ವರ್ಷಗಳಷ್ಟು ಕಾಲವಾದರೂ ಕೊಟ್ಟು ವಸೂಲುಮಾಡಿದರೆ ಈ ಜನಕ್ಕೆ ಅನುಕೂಲವಾಗುವುದಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಇದರ ಸ್ಕೀಮುನ್ನು ತರಿಸಿ ನೋಡಬೇಕು. ಯಾವುದಾದರೂ ಅನುಕೂಲವಿದ್ದರೆ ಪರಿಶೀಲಿಸಬಹುದು. ಶೇಕಡಾ ಐದರಷ್ಟು ಬಡ್ಡಿಯಲ್ಲಿ ಶೇಕಡಾ ಮೂರರಷ್ಟನ್ನು ಸೋಷಿಯಲ್ ವೆಲ್‌ಫೇರು ಶಾಖೆಯವರು ಕೊಡುತ್ತಾರೆ. ಶೇಕಡಾ ಎರಡರಷ್ಟು ಸೊಸೈಟಿಗಳು ಕೊಡಬೇಕು. ಮನೆಗಳನ್ನು ನಾಲ್ಕುನೂರು ರೂಪಾಯಿಗಳಲ್ಲಿ ಕಟ್ಟಲಾಗು

(ಶ್ರೀಮತಿ ಯಶೋಧರ ದಾಸಪ್ಪ)

ವುದಿಲ್ಲ. ಇದರಿಂದ ಸೊಸೈಟಿಗಳಿಗೆ ಕೊಡುವ ಸಾಲದ ಅವಧಿ ಇಪ್ಪತ್ತು ವರ್ಷ ಇರಬೇಕೆಂದರೆ ಇದರಲ್ಲೇನು ಅನುಕೂಲವಾಗುತ್ತದೋ ಅದನ್ನು ನೋಡಬೇಕು ?

ಶ್ರೀಮತಿ ಎಲ್ಲವ್ವ ಸಾಂಬ್ರಾಣಿ (ರಾಣಿಬನ್ನೂರು).- ಬೆಳಗಾಂನಲ್ಲಿ ಹೌಸಿಂಗು ಸೊಸೈಟಿ ಎಂದು ಮಾಡಿದ್ದರೂ ಇನ್ನೂ ಲೋನು ಸಿಕ್ಕಲಿಲ್ಲ, ಸಬ್ ಸಿಡಿಯೂ ಸಿಕ್ಕಲಿಲ್ಲ. ಕಾರಣವೇನು ?

ಶ್ರೀಮತಿ ಯಶೋಧರ ದಾಸಪ್ಪ.—ನಾಲ್ಕುನೂರು ರೂಪಾಯಿಗಳಷ್ಟು ಸಬ್‌ಸಿಡಿಯಾಗಿ ಮೂರನೇ ಯೋಜನೆಯಲ್ಲಿ ಕೊಡುತ್ತಾರೆ ಆರೀತಿ ಸಿಕ್ಕುತ್ತದೆ; ತೊಂದರೆ ಇಲ್ಲ. ಲೋನುಗಳನ್ನು ಕೊಡುವುದಕ್ಕೆ ಎಂದು, ಕಾಲೋನಿಗಳಿಗಾಗಿ ಎಂದು ಮೂರನೇ ಪ್ಲಾನಿನಲ್ಲಿ ಇಟ್ಟಿರತಕ್ಕ ಸುಮಾರು 1,62,50,000 ಎಂದಿರುವುದರಲ್ಲಿ ಶೇಕಡಾ ಐವತ್ತರಷ್ಟನ್ನು ವಿದ್ಯಾಭ್ಯಾಸಕ್ಕೆ ವಿನಿಯೋಗಿಸಬೇಕೆಂಬ ಯೋಚನೆ ಇದೆ. ಅಲ್ಲದೆ Economic Aid ಎಂದು ಷೆಡ್ಯೂಲ್ಡ್ ಕ್ಲಾಸ್ಸು ವರ್ಗಕ್ಕೆ ಶೇಕಡಾ 38 ರಷ್ಟಿದೆ. ಇದರಲ್ಲಿ 123 ಲಕ್ಷದಷ್ಟು ಹಣ ಇತರ ಸ್ಕೀಮುಗಳಿಗಾಗಿ ಇದೆ. ಶೇಕಡಾ ಹನ್ನೆರಡರಷ್ಟು ಎಂದರೆ ಸುಮಾರು 39 ಲಕ್ಷದಷ್ಟು ಅಗ್ರಿಕಲ್‌ಚರು ಕಾಲೋನಿಗಾಗಿದೆ. During the Second Five Year Plan 112 colonies were started. ಇದನ್ನು ಪೂರ್ತಿ ಮಾಡುವುದಕ್ಕೆ ಸುಮಾರು 2.16 ಲಕ್ಷ ರೂಪಾಯಿಗಳಷ್ಟು ಬೇಕು. 1.47 ಲಕ್ಷದಷ್ಟನ್ನು ಈಗಾಗಲೇ ಕೊಟ್ಟಿದೆ. ಇನ್ನೂ ಇದನ್ನು ಪೂರ್ತಿಮಾಡಬೇಕಾದರೆ, ಸುಮಾರು 6,900ದಷ್ಟು ಹಣಕೊಡಬೇಕು. ಡೆಪ್ಯುಟೀ ಕಮೀಷನರವರು ಹೇಳಿರುವ ರೀತಿಯಲ್ಲಿ 112 ಕಾಲೋನಿಗಳು ಪೂರ್ಣವಾಗಬೇಕಾದರೆ ಸುಮಾರು 2.16 ಲಕ್ಷದಷ್ಟು ಹಣ ಬೇಕಾಗುತ್ತದೆ. ಮೂರನೇ ಪ್ಲಾನಿನಲ್ಲಿ ಸುಮಾರು 32.58 ಲಕ್ಷ, 1962–63 ರಲ್ಲಿ ಕಾಲೋನಿಗೋಸ್ಕರ ಸುಮಾರು ಎರಡು ಲಕ್ಷದಷ್ಟು ಖರ್ಚು ಮಾಡುತ್ತೇವೆ. ಹೊಸ ಸ್ಕೀಮುಗಳಿಗಾಗಿ ಮೊದಲನೇ ಯೋಜನೆಯಲ್ಲಿ 85 ಲಕ್ಷ, ಎರಡನೇ ಯೋಜನೆಯಲ್ಲಿ 139 ಲಕ್ಷ, 1961–62 ರಲ್ಲಿ ಸುಮಾರು 18 ಲಕ್ಷ ಕೊಟ್ಟಿದೆ. ಇನ್ನೂ ಆಗದೇ ಇರುವ ಕೆಲಸಗಳನ್ನು ಪೂರ್ತಿಮಾಡಲು ಇನ್ನೂ 13 ಲಕ್ಷ ಬೇಕು.

ಶ್ರೀ ಬಿ. ನಂಜಪ್ಪ (ಕಬ್ಬನ್‌ಪೇಟೆ).—ನಮ್ಮ ಕಾರ್ಪೊರೇಷನ್ನಿನಲ್ಲಿ ಲೀಸಿನ ಮೇಲೆ ಹರಿಜನರಿಗೆ ಸೈಟುಗಳನ್ನು ಕೊಡುತ್ತಿದ್ದಾರೆ. ಇದನ್ನು ಫ್ರೀಯಾಗಿ ಕೊಡಲು ಏನಾದರೂ ಸರಕಾರ ಏರ್ಪಾಡು ಮಾಡಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಮುನಿಸಿಪಾಲಿಟಿಗಳಿಗೆ ಶೇಕಡಾ 50ರಷ್ಟು ಸಹಾಯ ಕೊಡುತ್ತೇವೆ. ಮುನಿಸಿಪಾಲಿಟಿಯವರು ಸೈಟನ್ನು ಫ್ರೀಯಾಗಿಕೊಟ್ಟು ಅವರು ಶೇಕಡಾ ಐವತ್ತರಷ್ಟು ಕೊಟ್ಟರೆ ನಾವೂ ಕೊಡಬಹುದು.

Mr. DEPUTY SPEAKER.—The Hon'ble Members may resume their seats. There are other Ministers to reply and we cannot go on asking questions at this stage.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ನಂಜಪ್ಪನವರು ಪ್ರಶ್ನೆ ಕೇಳಿದ ಮೇಲೆ ತಾವು ನನಗೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ. ಈಗ ಆಗುವುದಿಲ್ಲವೆಂದರೆ ನಮ್ಮ ಸಂದೇಹಗಳು ಹೇಗೆ ನಿವಾರಣೆಯಾಗಬೇಕು ?

Mr. DEPUTY SPEAKER.—The Hon'ble Member may take other opportunities to get his doubts clarified. He may resume his seat now.

Sri C. J. MUCKANNAPPA.—Sir, we want to know how the other side is carrying on the administration. We want to elicit information only now. How can we ask for any information after the Demand is not ?

ಶ್ರೀಮತಿ ಯಶೋಧರ ದಾಸಪ್ಪ.—ಯಾವ ಸದಸ್ಯರಿಗೆ ಏನೇ ಮಾಹಿತಿ ಬೇಕಾಗಿದ್ದರೂ ನಾನು ತಿಳಿಸಲು ಸಿದ್ಧವಾಗಿದ್ದೇನೆ. ಸ್ಟೈಪೆಂಡ್ಸ್ ಕಾಲೋನಿ ಇತ್ಯಾದಿಗಳಿಗೆ ಹಣವನ್ನು ತಾಲ್ಲೂಕ್ ಬೋರ್ಡುಗಳ ಮೂಲಕವಾಗಲೀ ಅಥವಾ ಸೊಸೈಟಿಗಳ ಮೂಲಕವಾಗಲೀ ಅವರಿಗೆ ತಲಪುವಂತೆ ಮಾಡಿದರೆ ಸಾಕು ತಾನೆ ?

Sri M. V. RAMA RAO (Minister for Law).—Sir, in commending for the acceptance of the House the Demand in respect of State Excise Duties, I wish to make a brief answer to two or three points that have been raised during the course of the dabate. One Hon'ble Member said that in regard to the policy of Prohibition, Goverment have failed to carry out the assurance they have made in regard to enforcement of Prohibition. Sir, I should like to bring it to the notice of the Hon'ble Member who said that, that the Demand under discussion does not relate to Prohibition as such and the enforcement of Prohibition was already dealt with when the Demand for the Police Department came up before this House and the Hon'ble Members had an opportunity of saying what they chose on that occasion. In regard to the comment made that prohibition should be enforced throughout the State, I am sure, Sir, that Hon'ble Members of this House, irrespective of the parties to which they may happen to belong and in spite of the fact that several Hon'ble Members happen to be unattached Members and do not belong to any party whatever, take this as a common policy and I take it that it is the common policy of every political party in this country to go by prohibition It is not merely a party issue ; it is one of the important objects......

(*Interruption*)

Hon'ble Members who find that the drinking habit has increased ought to

spend all their spare time to try to put it down and not content themselves with making complaints.

(Interruption)

The Hon'ble Member should read the several enactments in relation to this matter and he will know what the powers of a citizen are in this regard. Sir, as I was saying, bringing into force Prohibition in the State is not merely a matter of a party policy or a matter contained in the Election Manifesto of the Congress Party alone. Every party swears by Prohibition and the Constitution to which every Hon'ble Member of this House has taken an Oath of Allegiance, I imagine, does commit every Member to do his best as that clause is there unless any Member had any mental reservation when he took his oath, to endeavour as far as possible and as far as it lies wthin his or her power to enforce Prohibition in the State.

Sri G. VENKATAI GOWDA.—It is a failure.

Sri M. V. RAMA RAO.—Sir, Hon'ble Members who have made up their mind that it is going to be a failure and look forward to the day......

Sri B. HUTCHE GOWDA.—Sir, the Hon'ble Minster referred to me and at the end I must be given an opportunity.

Mr. DEPUTY SPEAKER.—If he yields.

Sri M. V. RAMA RAO.—I have no objection to yield to the Hon'ble Member if he has got any particular point to make.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈಗ ತಾನೆ ಮಾನ್ಯ ಮಂತ್ರಿಗಳು ಇದರಲ್ಲಿ ಪ್ರೊಹಿಬಿಷನ್ ಬರುವುದಿಲ್ಲ ಎಂದು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಕುಡಿಯುತಕ್ಕ ಏರಿಯ ಕಡಮೆಯಾದರೆ ವರಮಾನವೂ ಕಡಮೆಯಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಪ್ರೊಹಿಬಿಷನ್ ಬರುತ್ತದೆ. ಮಂತ್ರಿಗಳು ಬರುವುದಿಲ್ಲ ಎಂದು ಹೇಳಿದ್ದು ಸರಿಯಲ್ಲ.

Sri M. V. RAMA RAO.—Sir, enforcement of Prohibition is a different matter. This Demand relates exclusively to the Excise Duties.

Sri S. SIVAPPA.—Enforcement is a different thing and prohibition is a different thing.

Sri M. V. RAMA RAO.—Sir, the Hon'ble the Leader of the Opposition who chose to table a cut motion did not choose to make a speech but he wants to interfere while I am speaking. And he is trying to give me some lesson too. I am prepared to listen to him but not on this occasion. As I was saying, this policy of Prohibition is a policy to which the Government stands committed and there is no question of going back upon it. While it is true that nearly fifteen years have elapsed since the first district to which my Hon'ble friend Sri Hutche Gowda belongs was declared dry we must appreciate that out of nineteen districts, sixteen districts are now dry and that is a matter of which no Government need feel ashamed. 16 districts out of nineteen districts is a good achievement in regard to the enforcement of Prohibition in the State.

6-00 P.M.

In regard to this year's budget, Sri Hutche Gowda seems to imagine that the enforcement of Prohibition will remain stagnant at the present stage and is not likely to be extended to other areas. While I do not propose to make a statement in regard to that matter on the present occasion, I may assure him that the revenues of the State from the imposition of State excise duties is one matter and the enforcement of the policy of Prohibition in the dry districts is another matter and the extension of the policy of Prohibition to the remaining wet districts is an entirely different matter and each one of these questions will be dealt with separately and in its proper context and perspective.

Another Honourable Member made reference and Sri Hutche Gowda also made reference to the method of excise auctions at present being pursued by Government. The experience of the Excise Department through several decades has helped to evolve administrative techniques in regard to the best manner of making maximum realisations out of the excise auctions. It happens that this is a business in which it is difficult to predict whether a man will make a fortune or ruin himself and although experiments have been made in the past by highly talented administrators to introduce

(SRI M. V. RAMA RAO)

new elements of competition into these excise auctions, the results have been found in the long run to be more or less disastrous. New persons who come into this business seldom find it possible to invest upon this business all the money and other resources and equipment that are really necessary for carrying on this trade successfully and as a matter of fact, certain excise contractors have not only ruined themselves but they have also run into heavy arrears of excise revenue due and payable to Government and in many cases large amounts have had to be written off as being irrecoverable. And in regard to the new methods that were suggested by Sri Hutche Gowda, I may assure him that Government have no objection to receive suggestions of every kind from every Honourable Member who is disposed to make them for pursuing new methods calculated to bring in more revenues to the coffers of the State. Another Hon'ble Member pointed out that while more and more districts are going dry, on the expenditure side a high sum is being demanded for the maintenance of these services. The slight increase, the Honourable Member will easily notice, is due to the revision of the pay scales this time and not in any manner due to any expansion of the existing staff or to any other reason. The bulk of the excise staff in the dry districts have been almost abolished, we may say, except where proceedings in the nature of winding up proceedings have still to be pursued as in the case of Mysore and Mandya districts. The Honourable Member will see that while the budget estimates for the year 1961-62 were of the order of Rs. 24.69 lakhs, the revised estimates are put down as Rs. 21.67 lakhs and the budget estimates for 1962-63 are Rs. 23.17 lakhs. 23.17 is certainly a smaller figure than 24.69 lakhs and as I said, for the revision of pay scales, a provision of Rs. 1.7 lakhs was made in the Budget for the year 1961-62 and the expenditure on that item of revision of pay scales will certainly enter into the Budget estimates for 1962-63. I have nothing more to say in regard to this particular Demand. I request the Honourable Members to give their support to this Demand and to pass it.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಇಲಾಖೆಗಳ ಬಗ್ಗೆ ಮಾನ್ಯ ಸದಸ್ಯರಿಂದ ಟೀಕೆ ಟಿಪ್ಪಣಿಗಳೇನೂ ಬಂದಿಲ್ಲ. ಆದ್ದರಿಂದ ಹೆಚ್ಚಿಗೇನೂ ನಾನು ಹೇಳಬೇಕಾಗಿಲ್ಲ. ಒಬ್ಬ ಸದಸ್ಯರು ಮಾತ್ರ ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಪ್ಸ್ ವಿಷಯಕ್ಕೆ ಒಂದು ಮಾತನ್ನು ಹೇಳಿದ್ದಾರೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಫೋಟೋ ಕಾಪಿಂಗ್ ಸಿಸ್ಟಂ ಜಾರಿಯಲ್ಲಿದ್ದಿತು. ಅದನ್ನು ಮುಂದುವರಿಸಿಕೊಂಡು ಬರಬೇಕೆಂದು ಹೇಳಿದ್ದಾರೆ. ಅದನ್ನು ಮುಂದುವರಿಸುವುದು ನಮಗೂ ಸಂತೋಷ. ಇಲ್ಲಿಯವರೆಗೆ ರಿಜಿಸ್ಟ್ರೇಷನ್ ಮಾಡುವ ಕಾಗದಪತ್ರಗಳ ಪ್ರತಿಯನ್ನು ಫೋಟೋ ತೆಗೆಯುವ ಪದ್ಧತಿಯಿದ್ದಿತು. ಮಹಾರಾಷ್ಟ್ರ ಸರಕಾರದವರು ಇಲ್ಲಿಯವರೆಗೆ ಎಂದರೆ ಕಳೆದ ಐದು ವರ್ಷ ಪೂನಾದಲ್ಲಿರುವ ಅವರ ಆಫೀಸಿನ ಮೂಲಕ ಈ ಫೋಟೋ ತೆಗೆಯುವ ಕೆಲಸ ನಡೆಯುತ್ತಿದ್ದಿತು. ಆದರೆ ಕಳೆದ ವರ್ಷ ಈ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ತಿಳಿಸಿ ಇದನ್ನು ನಿಲ್ಲಿಸಿದ್ದಾರೆ. ಇನ್ನು ಮುಂದೆ ಬೆಂಗಳೂರಿನಲ್ಲಿ ಒಂದು ಫೋಟೋ ರಿಜಿಸ್ಟ್ರೇಷನ್ ಆಫೀಸ್ ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಈ ಮೆಷಿನರಿಗೆ 3 ಲಕ್ಷ ರೂಪಾಯಿ ಖರ್ಚಾಗುತ್ತದೆ. ಅದಲ್ಲದೆ ಪ್ರತಿ ವರ್ಷ ರಿಕರಿಂಗ್ ಎಕ್ಸ್‌ಪೆಂಡಿಚರ್ ೭೫,೦೦೦ ರೂಪಾಯಿ ಆಗುತ್ತದೆ. ಇದರಿಂದ ಬಹಳ ಉಪಯೋಗವಾಗುತ್ತದೆಂದ ಅನುಭವ ಬಂದಿದೆ. ಆದ್ದರಿಂದ ಬೆಂಗಳೂರಿನಲ್ಲಿ ಫೋಟೋ ರಿಜಿಸ್ಟ್ರೇಷನ್ ಏರ್ಪಾಡು ನಡೆಯುತ್ತಿದೆ.

ಇನ್ನು ಸ್ಟ್ಯಾಂಪ್ ವಿಚಾರದಲ್ಲಿ ಸ್ಟ್ಯಾಂಪ್‌ಡ್ಯೂಟಿ ತಪ್ಪಿಸಿಕೊಂಡಿದ್ದರೆ ಅರ್ಧದಷ್ಟು ಹೆಚ್ಚಿಗೆ ಮಾಡಬೇಕೆಂದು ಕಾನೂನಿನ ಪ್ರಕಾರ ಡಿಸ್ಕ್ರಿಷನ್ ಕೊಟ್ಟಿದೆ. ಒಂದುವೇಳೆ ಮೋಸವೇನಾದರೂ ನಡೆದಿದ್ದರೆ ಅದಕ್ಕಾಗಿ ಹತ್ತರಷ್ಟು ಮಾಡಬೇಕೆಂದು ಅಧಿಕಾರ ಕೊಟ್ಟಿದೆ. ಮಿನಿಮಮ್ ಐದರಷ್ಟು ಇದೆ. ಸ್ಟ್ಯಾಂಪ್ ಡ್ಯೂಟಿ ತಪ್ಪಿಸಿ ಮೋಸಮಾಡಿದಲ್ಲಿ ಇಷ್ಟು ಜುಲ್ಮಾನೆ ವಿಧಿಸಬೇಕೆಂಬುದಕ್ಕೆ ಒಪ್ಪಲಾಗಿದೆ. ಇದರಿಂದ $2\frac{1}{2}$ ಕೋಟಿ ರೂಪಾಯಿಗಳಷ್ಟು ವರಮಾನ ಬರಬಹುದು.

ನನ್ನ ಇಲಾಖೆಗಳ ಬಗ್ಗೆ ಬೇರೆ ಯಾವ ಪ್ರಸ್ತಾಪ ಬಂದಿಲ್ಲ. ಆದ್ದರಿಂದ ಹೆಚ್ಚಿಗೆ ಹೇಳುವುದು ಏನೂ ಇಲ್ಲ. ಇಷ್ಟೊಂದು ಹೇಳಿ ನನ್ನ ಇಲಾಖೆಗಳ ಬೇಡಿಕೆಗಳಿಗೆ ಸದಸ್ಯರಿಂದ ಅನುಮತಿ ದೊರೆಯುತ್ತದೆಂದು ಭಾವಿಸಿದ್ದೇನೆ.

Sri SANJEEVANATH AIKALA.—I have to make some observation with regard to the Registration Department. When we were in the erstwhile Madras State, the concerned registration officers used to get the document papers and other articles before February every year and after our joining the present Mysore State, the concerned registration officers would not get these things even after April or May. Consequently, in most of the Offices the work suffered.

Sri RAMAKRISHNA HEGDE (Minister for Co-operation and Development).-Mr. Speaker, Sir, I do not propose to make any speech on this Demand, because, although five cut motions have been sent, hardly any Hon'ble Member has made any comment with regard to the section with which I am concerned. I may bring to the kind notice of the Hon'ble Members that under the head 'Rural Development', today we are concerned only with the establishment of Rural Development which is in existence only in old Mysore area, and also provision with regard to the rural water supply scheme and national water supply. I can only give this much of information to the Hon'ble Members that with regard to rural water supply, it is a Government of India scheme and we propose to spend this year an amount of Rs. 80,000 and under national rural water supply Rs. 1,60,000, because the Hon'ble Members have not chosen to make any comment, I do not think it is necessary to make any elaborate reply.

Mr. DEPUTY SPEAKER.—I will now put the Demands to the vote of the House.

DEMAND No. 21.-RURAL DEVELOPMENT.

32. *Rural Development.*

Mr. DEPUTY SPEAKER.-The question is:

"That a sum not exceeding Rs. 1,59,63,000 be granted to the Government to defray the charges which will come in course of payment during the financial year for the period ending 31st day of March 1963, in respect of 'Rural Development'."

The motion was adopted.

DEMAND No. 3—STATE EXCISE.

10. *State Excise Duties.*

Mr. DEPUTY SPEAKER.—The question is:

"That a sum not exceeding Rs. 23,17,000 be granted to the Government to defray the charges which will come in course of payment during the financial year for the period ending 31st day of March 1963, in respect of 'State Excise Duties'."

The motion was adopted.

DEMAND No. 7—STAMPS.

14. *Stamps.*

Mr. DEPUTY SPEAKER.—The question is:

"That a sum not exceeding Rs. 2,60,000 be granted to the Government to defray the charges which will come in course of payment during the financial year for the period ending 31st day of March 1963, in respect of 'Stamps'."

The motion was adopted.

DEMAND No. 6—OTHER TAXES ADMINISTRATION.

13. *Other Taxes and Duties.*

Mr. DEPUTY SPEAKER.—The question is:

"That a sum not exceeding Rs. 6,04,000 be granted to the Government to defray the charges which will come in course of payment during the financial year for the period ending 31st day of March 1963, in respect of 'Other Taxes and Duties'."

The motion was adopted.

DEMAND No. 8—REGISTRATION.

15. *Registration Fee*

Mr. DEPUTY SPEAKER.—The question is:

"That a snm not exceeding Rs. 18,44,000 be granted to the Government to defray the charges which will come in course of payment during the financial year for the period ending 31st day of March 1963, in respect of 'Registration Fees'."

The motion was adopted.

Mr. DEPUTY SPEAKER.—The next Demand relates to Agriculture. The motion for that Demand will be moved today. The Hon'ble Minister for Agriculture.

Sri C. J. MUCKANNAPPA.—Let it be moved tomorrow.

Mr. DEPUTY SPEAKER.—I have called upon the Hon'ble Minister to move. It will not take more than a minute.

Sri C. J. MUCKANNAPPA.—When we are not allowed to ask for a clarification, why should we sit for one minute more ?

Mr. DEPUTY SPEAKER.—I have called upon the Minister and he will move the Demand.

DEMAND NO. 20.—AGRICULTURE.

31. *Agriculture.*

Sri G. NARAYANA GOWDA (Minister for Agriculture).—Sir, on the recommendation of the Governor of Mysore, I beg to move :

"That a sum not exceeding Rs. 2,94,31,000 be granted to the Government to defray the charges which will come in course of payment during the financial year for the period ending 31st day of March 1963, in respect of 'Agriculture'."

Mr. DEPUTY SPEAKER.—Motion moved:

"That a sum not exceeding Rs. 2,94,31,000 be granted to the Government to defray the charges which will come in course of payment during the financial year for the period ending 31st day of March 1963, in respect of 'Agriculture'."

This Demand and the next Demand regarding 'Animal Husbandry' are before the House.

Sri B. HUTCHE GOWDA.—But that Demand is not moved, Sir,

Sri C. J. MUCKANNAPPA.—Every Demand must be moved. The different Ministries are spending this money.

Mr. DEPUTY SPEAKER.—It is not necessary to move.

Sri C. J. MUCKANNAPPA.—Under what rule does the Hon'ble Speaker say that it is not necessary to move ? Under Rule 161 of the Rules of Procedure and Conduct of Business, every Demand must be read out. That Minister is different from this Minister. Under Rule 161, every Demand must be placed before the House and the concerned Minister must make a motion.

Mr. DEPUTY SPEAKER.—The Chair will place the Demand before the House.

Sri C. J. MUCKANNAPPA.—It is not the Chair, Sir. It is the Government.

Sri B. HUTCHE GOWDA.—There is a notice.........

Mr. DEPUTY SPEAKER.—When one Demand has been moved, it is not necessary that the other Demands also be moved.

Sri M. V. RAMA RAO.—Sir, the practice in this House has been—when several Demands are to be moved for consideration by the House, in the course of the same day, one of the Demadns is formally moved and the Chair generally announces that all the Demands are before the House, and all the Cut Motions, about which notice has been given, are also before the House. That is what the practice has been. That is the practice which is prevailing in this House and which has been followed for the past so many days.

An HON'BLE MEMBER.—Is it the practice that is to prevail or the Rule ?

Mr. DEPUTY SPEAKER.—The principle that we have been following till now is, after a Demand is moved, it is announced that the rest are before the House.

Sri C. J. MUCKANNAPPA.—It is not fair for the Chair to place the Demands before the House. The Speaker used to say that all the Demands were before the House—one Demand being put before the House and the rest of the Demands to be taken into consideration. That is a convention.

But if you refer to Rule 161, it says " a separate demand shall ordinarily be made in respect of the grant proposed for each department of the Government... " Animal Husbandry is different from Agriculture.

Sri G. NARAYANA GOWDA.—The rule says " shall ordinarily ".

Sri C. J. MUCKANNAPPA.—" shall ordinarily be made" is mandatory. You should make a motion before the House and the Members may choose to speak on whatever Demand they like. It is not as if a wholesale......

Mr. DEPUTY SPEAKER.—You have finished, I suppose.

Sri C. J. MUCKANNAPPA.—Please look into the proceedings of the previous year. There is no hurry. You can give a ruling tomorrow, your considered ruling, Sir.

Sri V. S. PATIL.—Sir, shall I say a word regarding the point? Rule 161 says that ordinarily, the practice should be such and such. It clearly means that unless there are exceptional circumstances, this practice has to be followed; today or even during this session there are no extra-ordinary circumstances that have arisen to give a go-by to this rule and to jointly put all the Demands without actually moving them. I think, Sir, you know, in Bombay as well as in the Indian Parliament, every Demand is moved by the Minister concerned. I do not find the same convention here. Why are Ministers feeling shy for spending half a minute in moving the Demand before the House? Why should they impose the duty on the Chair to move the Demand? A peculiar procedure has been followed here and I do not understand the same. We are supporting them in spending money. Why should they feel shy to move the Demand before us? At least, during this Session, we find that one Demand is moved by the Minister. But during the previous five years no Minister rose up to move a Demand. The present method is a sort of improvement, no doubt.

Sri M. V. RAMA RAO.—On a point of clarification, Sir. Hon'ble members have acquiesced in the procedure which was followed for the past so many years. The point of substance is whether the demands are thrown open for discussion or not. If I may venture to make a small plea in regard to why all the demands are not formally moved, the best reason that I should like to adduce would be that even those few minutes that would be taken up in making them formally would in the alternative be available for the general debate and no particular point is gained by formally reading them.

Sri C. J. MUCKANNAPPA.—We are prepared to lose that time.

Sri M. V. RAMA RAO.—They have raised a point which they consider is quite serious. I am trying to explain to them why these demands are not moved individually. No Minister can have any objection to make all these formal motions in respect of the particular demands and to spend 5 or 10 miuntes in that manner. If that is the desire of the House no Minister would take exception to it. It is the time that would be otherwise taken up by the debate that would be curtailed by insisting upon every demand being moved.

Sri C. J. MUCKANNAPPA.—Sir, it is already 6-30 P.M. May I submit to the Chair to allow us to go now? You can give a ruling tomorrow. I have got something more to say in this behalf. I have sent for a book from the Library.

Mr. DEPUTY SPEAKER.—The Member had his say. After that I even asked him if he had finished and he said that he had finished. If he again wants to speak, I cannot allow it.

The practice that has been followed in this House is that one demand is moved formally and all the demands are placed before the House by the Speaker and then the discussion begins. All the cut motions also will be placed before the House by the Speaker for discussion. That is the practice that we have been following all along and it is not against the rules. That convention will be followed. The

(MR. DEPUTY SPEAKER)

motion has been already made regarding Agriculture Demand No. 22 is also before the House. The cut motions in respect of them have already been circulated to members and they also are before the House. We can begin the discussion tomorrow.

The House now rises and will meet again at 8-30 A.M. tomorrow.

The House adjourned at Thirty Minutes past Six of the Clock to meet again at Thirty Minutes past Eight of the Clock on Saturday, the 21st July 1962.

WD 8250—GPB—9)0—6-3-19 ; 3